ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ



ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 06
ಫೆಬ್ರವರಿ 05, 2012

ಪುಟ 16 ರೂ. 5/-



ಪಂಕ್ತಿ ಬೇಧ - ಜಾತಿ ಬೇಧ :

ಉಡುಪಿಯ ಶ್ರೀಕೃಷ್ಣ ಮಠದೆದುರು ಮೊಳಗಿದ ಹೋರಾಟದ ಕಹಳೆ





ಬಲಿಷ್ಟ ಕಮ್ಯೂನಿಸ್ಟ್ ಪಕ್ಷ ಜನಾಂದೋಲನ ವಿಸ್ತರಣೆ

ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನದಲ್ಲಿ ವ್ಯಕ್ತಗೊಂಡ ದೃಢ ನಿಶ್ಚಯ



ದಲಿತ ಯುವಕನ ಕ್ರೂರ ನರಬಲಿ

ಉಪ್ಪಿನಂಗಡಿ :

ಹರಡಿದ ಕೋಮು ಘರ್ಷಣೆ ಸಂಘ ಪರಿವಾರದ ಯೋಜಿತ ಕಾರ್ಯಾಚರಣೆ



ಮನೆಯ ಶಾಂತಿ ಪೂಜೆಗೆ ದಲಿತ ಯುವಕನ ನರಬಲಿ!!

ಇದೊಂದು ಆಘಾತಕರ ಸುದ್ದಿ. ಇಪ್ಪತ್ತೊಂದನೇ ಶತಮಾನದಲ್ಲಿ ಈ ರೀತಿಯ ಘೋರ ನರಬಲಿಯಂತಹ ಕೃತ್ಯ ನಡೆದಿದೆ ಎನ್ನುವುದು ನಮ್ಮ ಸಮಾಜ ಯಾವ ಅಧಃಪತನದ ತಳದಲ್ಲೇ ಇನ್ನೂ ಉಳಿದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ನರಬಲಿಯಂತಹ ಮೌಢ್ಯ ಮತ್ತು ಕ್ರೌರ್ಯಕ್ಕೆ ದಲಿತ ಯುವಕನೇ ಬಲಿಯಾಗಿರುವುದು ಕೇವಲ ಆಕಸ್ಮಿಕವಲ್ಲ. ದಲಿತರ ಅಸಹಾಯಕ ಪರಿಸ್ಥಿತಿಯನ್ನು ಬಳಸಿಕೊಂಡು ತಮ್ಮ ಸ್ವಾರ್ಥ ಪ್ರೇರಿತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಹವಣಿಸುವ ಪಟ್ಟಭದ್ರ ಜಾತೀಯ ಶಕ್ತಿಗಳ ಶತ ಶತಮಾನಗಳ ವ್ಯವಸ್ಥಿತ ಸಂಚಿನ ಮುಂದುವರಿಕೆಯಾಗಿ ಇಂಥದ್ದೆಲ್ಲ ಭೀಕರ ಕೃತ್ಯಗಳು ನಡೆಯುತ್ತಿವೆ.

ದಾವಣಗೆರೆ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ತಿರುಮಲ ದೇವರಕೊಪ್ಪದಲ್ಲಿ 26-11-2011ರಂದು ಆ ಗ್ರಾಮದ ಬಸವರಾಜ ಭರಮಪ್ಪ ಕಡೇಮನಿ ಎಂಬ 18 ವರ್ಷದ ಯುವಕನ ನರಬಲಿಯಾಗಿದೆ. ಆ ಗ್ರಾಮದ ಬಸವನಗೌಡ ನಿಂಗಣ್ಣಗೌಡ್ರ ಗೌಡ್ರು ಎಂಬ ಮನೆಯಲ್ಲಿ ಕಳೆದ 5 ವರ್ಷದಿಂದ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸಮಾಡುತ್ತಿದ್ದವನನ್ನು ಕೆಲಸಮಾಡುವ ಮನೆ ಮಾಲಿಕನೇ ನರಬಲಿ ನೀಡಿದ್ದಾನೆ ಎಂದು ಈ ದಲಿತ ಯುವಕನ ತಂದೆ-ತಾಯಿಗಳು ಅಲವತ್ತುಕೊಂಡು ರಾಜ್ಯಪಾಲರಿಗೆ ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದಾರೆ. ಬಸವರಾಜನ ತಂದೆ ಭರಮಪ್ಪ, ತಾಯಿ ಮಂಜವ್ವ ಇವರು 21-12-2011ರಂದು ಈ ದೂರು ನೀಡಿದ್ದಾರೆ. 26-11-2011ರಂದು ತಿರುಮಲದೇವರಕೊಪ್ಪದ ಹೊರವಲಯದ ದೊಡ್ಡೇಗೌಡರ ಜಮೀನಿನ ಬಳಿ ಗೋಣಿಚೀಲದಲ್ಲಿ ಪತ್ತೆಯಾದ ಶವದ ಹಣೆಯ ಮೇಲೆ ಆಳವಾದ ರಂಧ್ರ ಬಿದ್ದಿದ್ದು ಬಲಗಣ್ಣು ಮತ್ತು ಮೇಲ್ಭಾಗದ ಹಲ್ಲುಗಳನ್ನು ಕಿತ್ತುಹಾಕಲಾಗಿತ್ತು. ದೇಹದ ಮೇಲೆ ಅರಿಷಿಣ, ಕುಂಕುಮದ ನೀರಿನಿಂದ ಸ್ನಾನ ಮಾಡಿಸಿರುವುದು, ಕೆಲವೆಡೆ ಅರಿಷಿಣ, ಕುಂಕುಮ ಕಂಡು ಬಂದಿದ್ದು, ದೇಹವನ್ನು ಸುಡಲು ಸೀಮೆ ಎಣ್ಣೆ ಸುರಿದ ವಾಸನೆ ಬರುತ್ತಿತ್ತೆಂದು ತಾಯಿ ಮಂಜವ್ವ ಪತ್ರಿಕೆಯವರಿಗೆ ತಿಳಿಸಿರುತ್ತಾರೆ. ಈ ಪ್ರಕರಣವು ಕೊಲೆಯಲ್ಲ, ಹೊಸಮನೆಯ ಶಾಂತಿಗಾಗಿ ನಡೆಸಿದ ನರಬಲಿ ಎಂದು ಹೇಳಲಾಗುತ್ತಿದೆ.



ಬಸವರಾಜ ಕಡೇಮನಿ

ಮಗನ ಹಣೆಯಿಂದ ರಕ್ತವನ್ನು ತೆಗೆದು ಮನೆಯ ತುಂಬಾ ಸಿಂಪಡಿಸಿದ್ದಾರೆ. ಪೂಜೆಗೆ ಬಳಸಿದ ನೀರಿನ ಕೊಡ, ಪ್ಲಾಸ್ಟಿಕ್ ಬುಟ್ಟಿ, ಪೂಜೆ ಮಾಡಿದ ದೇವರ ಮನೆ ಗೋಡೆಯ ಮೇಲೆ ರಕ್ತದ ಕಲೆಗಳಿವೆ: ಬಲಗಣ್ಣು ಮತ್ತು ಮೇಲ್ಭಾಗದ ವಸಡಿನ ಹಲ್ಲು ತೆಗೆದು ಮನೆಯ ಸುತ್ತಲಲ್ಲಿ ಎಲ್ಲೋ ಹೂತಿರಬಹುದು ಎಂಬ ಶಂಕೆಯನ್ನು ತಂದೆ-ತಾಯಿ ವ್ಯಕ್ತ ಪಡಿಸುತ್ತಿದ್ದಾರೆ.

ಮಗನನ್ನು ಬಲಿನೀಡಿದ ಘಟನೆಯ ಕೂಲಂಕುಶ ತನಿಖೆ ನಡೆಸಬೇಕು, ತಮ್ಮ ಕುಟುಂಬಕ್ಕೆ ನ್ಯಾಯ ನೀಡಬೇಕು, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು 21-12-2011 ರಂದು ಹಾವೇರಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ, ಮುಖ್ಯಮಂತ್ರಿಗಳಿಗೆ, ಗೃಹಸಚಿವರಿಗೆ, ಸಮಾಜಕಲ್ಯಾಣ ಸಚಿವರಿಗೆ, ಪೊಲೀಸ್ ಮಹಾನಿರ್ದೇಶಕರಿಗೆ, ಎಸ್.ಸಿ.-ಎಸ್.ಟಿ. ಆಯೋಗ ಸೇರಿದಂತೆ ಹಲವು ಇಲಾಖೆಗಳ ಬಸವರಾಜನ ತಂದೆ ಭರಮಪ್ಪ ತಾಯಿ ಮಂಜ ದೂರು ಸಲ್ಲಿಸಿದ್ದಾರೆ. ರಾಣೆಬೆನ್ನೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರ ದಾಖಲಾಗಿದ್ದು ರಾಣೆಬೆನ್ನೂರಿನ ಡಿ.ವೈ.ಎಸ್ ಜಯಪ್ರಕಾಶ್ ತನಿಖೆ ನಡೆಸುತ್ತಿದ್ದಾರೆ.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳ ಮಂತ್ರಿಗಳು, ಶಾಸಕರು ಮಂತ್ರ-ಮಾಯ ಹೋಮ-ಹವನ, ಬಲಿ ಇತ್ಯಾದಿಗಳನ್ನು ಮಾಡುತ್ತಿರುವಾಗ ಮನೆ ಶಾಂತಿಗಾ ನಡೆಸಲಾಗಿದೆ ಎಂಬ ಈ ದಲಿತನ ನರಬಲಿಯ ತನಿಖೆಯನ್ನು ಈ ಸರಕಾರ ನಿಷ್ಪಕ್ಷಪಾತವಾ ನಡೆಸುವ ಭರವಸೆಯನ್ನು ಈ ನಾಡಿನ ಜನ ಇಟ್ಟುಕೊಂಡಿಲ್ಲ. ಅಧಿಕಾರವನ್ನು ಶಾಶ್ವತವಾಗಿರಿಸಲು, ಹಣ-ಭೂವಿ ಕೊಳ್ಳೆಹೊಡೆಯಲು ಯಾವ ಮಟ್ಟಕ್ಕಾದರೂ ಇಳಿಯಲು ತಯಾರಿರುವ ಈ ಭಂಡ ಸರ್ಕಾರ ಜನ ಚಳುವಳಿ ಮೂಲಕ ಮಾತ್ರ ಪಾ ಕಲಿಸಬಹುದೆಂದು ನಾಡಿನ ಜನತೆಯಲ್ಲಿ ಅರಿವು ಮೂಡಿಸಬೇಕಿದೆ. ದಲಿತನ ಬಲಿಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲು ಮೂಢನಂಬಿಕೆ, ಕಂದಾಚಾರ, ದಲಿತರ ದಮನದ ವಿರುದ್ಧ ಹೋರಾಡಲು ಜನತೆ ಹಾಗೂ ಪ್ರಗತಿಪರರೆಲ್ಲರೂ ಶ್ರಮಿಸಬೇಕಿದೆ.

2012 ಜನವರಿ 17ರಿಂದ 20ರವರೆಗೆ ಕೊಲ್ಕತ್ತಾದಲ್ಲಿ ಸಭೆ ಸೇರಿದ್ದ ಸಿಪಿಐ (ಎಂ) ಕೇಂದ್ರ ಸಮಿತಿ ಹೊರಡಿಸಿದ ಹೇಳಿಕೆ

ಲೋಕಪಾಲ್: ಸರಕಾರದ ನಿಲವಿಗೆ ಖಂಡನೆ

ಒಂದು ಪ್ರಬಲ ಲೋಕಪಾಲ್ ಮಸೂದೆಯನ್ನು ತಂದು ಅದನ್ನು ಸಂಸತ್ತಿನಲ್ಲಿ ಅಂಗೀಕರಿಸಲು ಯುಪಿಎ ಸರಕಾರ ವಿಫಲವಾಗಿರುವುದನ್ನು ಸಭೆ ಖಂಡಿಸಿತು. ಪ್ರತಿಪಕ್ಷಗಳು ಮಂಡಿಸಿದ ಕೆಲವು ತಿದ್ದುಪಡಿಗಳು ಅಂಗೀಕಾರವಾಗಬಹುದೆಂಬ ಸರಕಾರದ ಭಯದಿಂದಾಗಿ ರಾಜ್ಯಸಭೆಯಲ್ಲಿ ದುರ್ಬಲ ಮಸೂದೆ ಕೂಡ ಅಂಗೀಕಾರವಾಗಲಿಲ್ಲ.

ಸೂಕ್ತ ತಿದ್ದುಪಡಿಗಳೊಂದಿಗೆ ಮಂದಿನ ಅಧಿವೇಶನದಲ್ಲಿ ಲೋಕಪಾಲ್ ಮಸೂದೆಯನ್ನು ಸರಕಾರ ಮಂಡಿಸಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ನೇರ ವಿದೇಶಿ ಬಂಡವಾಳಕ್ಕೆ ವಿರೋಧ

ಏಕ ಬ್ರಾಂಡ್ (ಸಿಂಗಲ್ ಬ್ರಾಂಡ್) ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ಶೇಕಡಾ ನೂರರಷ್ಟು ನೇರ ವಿದೇಶಿ ಬಂಡವಾಳ ಹೂಡಲು ಅವಕಾಶ ನೀಡುವ ಸರಕಾರದ ನಿರ್ಧಾರವನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ಅದಾಗಲೇ ವ್ಯಾಪಕ ವಿರೋಧ ಕಂಡುಬಂದಿರುವ ಬಹು ಬ್ರಾಂಡ್ ಕ್ಷೇತ್ರದಲ್ಲಿಯೂ ನೇರ ವಿದೇಶಿ ಬಂಡವಾಳ ಹೂಡುವುದಕ್ಕೆ ಇದು ಪೀಠಿಕೆಯಾಗಿದೆ.

ಸಾಮಾನ್ಯ ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ಎಫ್‌ಡಿಐ ಪ್ರವೇಶ ತಡೆಯುವ ನಿಟ್ಟಿನಲ್ಲಿ ಜನರ ನಡುವೆ ನಿರಂತರ ಆಂದೋಲನ ನಡೆಸಲು ಕೇಂದ್ರ ಸಮಿತಿ ತೀರ್ಮಾನಿಸಿದೆ.

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಕೇಂದ್ರ ಸಮಿತಿ ತೀವ್ರ ಕಳವಳ ವ್ಯಕ್ತಪಡಿಸಿತು. ಇದುವರೆಗೆ ಅಲ್ಲಿ 24 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ. ಇದು ಕೃಷಿ ಬಿಕ್ಕಟ್ಟಿಗೆ ಕಾರಣವಾದ ಕೇಂದ್ರ ಸರಕಾರದ ನೀತಿಗಳನ್ನು ಬೆತ್ತಲುಗೊಳಿಸುವುದು ಮಾತ್ರವೇ ಅಲ್ಲದೆ ರೈತರಿಂದ ಫಸಲುಗಳನ್ನು ಖರೀದಿಸಲು ವ್ಯವಸ್ಥೆ ಮಾಡುವಲ್ಲಿ ಪಶ್ಚಿಮ ಬಂಗಾಳ ಸರಕಾರ ವಿಫಲವಾಗಿರುವುದನ್ನೂ ಎತ್ತಿ ತೋರಿಸುತ್ತದೆ. ಫಸಲು ಖರೀದಿಗೆ ಹಿಂದಿನ ಎಡರಂಗ ಸರಕಾರಗಳು ಮಾಡಿದ್ದ ವ್ಯವಸ್ಥೆಯನ್ನು ಪ್ರಸಕ್ತ ಸರಕಾರ ಕಿತ್ತುಹಾಕಿದೆ. ರಸಗೊಬ್ಬರಗಳ ಕಾಳಸಂತೆಯನ್ನು ತಡೆಯುವಲ್ಲಿಯೂ ತೃಣಮೂಲ ಕಾಂಗ್ರೆಸ್ ನೇತೃತ್ವದ ಸರಕಾರ ವಿಫಲವಾಗಿದೆ.

ತೃಣಮೂಲ ಕಾಂಗ್ರೆಸ್ ನೇತೃತ್ವದ ಸರಕಾರದ ದುರಾಡಳಿತದಿಂದ ಜನತೆ ತತ್ತರಿಸಿಹೋಗಿದ್ದಾರೆ. ಚಹಾ ತೋಟವೊಂದು ಮುಚ್ಚಿರುವುದರಿಂದ ಒಂಬತ್ತು ಮಂದಿ ಹಸಿವಿನಿಂದ ನರಳಿ ಮೃತಪಟ್ಟಿದ್ದಾರೆ. ಮುಚ್ಚಿದ ಕಾರ್ಖಾನೆಗಳು ಮತ್ತು ಚಹಾ ತೋಟದ ಕಾರ್ಮಿಕರಿಗಾಗಿ ಎಡರಂಗ ಸರಕಾರ ಮಾಸಿಕ 1500 ರೂಪಾಯಿ ಭತ್ಯೆ ನೀಡುವ ಯೋಜನೆಯನ್ನು ಜಾರಿ ಮಾಡಿತ್ತು. ತೃಣಮೂಲ ಕಾಂಗ್ರೆಸ್ ನೇತೃತ್ವದ ಸರಕಾರ ಈ ಯೋಜನೆಯನ್ನು ರದ್ದುಪಡಿಸುವ ಘಾತುಕ ಕ್ರಮ ಕೈಗೊಂಡಿದ್ದೇ ಇಂಥ ಸಾವುಗಳಿಗೆ ಹೇತುವಾಗಿದೆ. ಉದ್ಯೋಗ ಖಾತರಿ ಯೋಜನೆ ಜಾರಿ ತೀರಾ ಹದಗೆಟ್ಟಿದೆ. ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ, ಅನ್ನಪೂರ್ಣ ಮತ್ತು ಅಂತ್ಯೋದಯ ಯೋಜನೆಗಳು ನಿಯಮಿತವಾಗಿ ಜಾರಿಯಾಗುತ್ತಿಲ್ಲ. ಈ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದ ಪಂಚಾಯತ್ ವ್ಯವಸ್ಥೆ ವಸ್ತುಶಃ ಕುಸಿದುಬಿದ್ದಿದೆ. ಇವೆಲ್ಲ ಕಾರಣಗಳಿಂದಾಗಿ ಜನತೆ ಕಂಗೆಡುವಂತಾಗಿದೆ.

ತನ್ನ ಸರಕಾರದ ಕಾರ್ಯನಿರ್ವಹಣೆ ಬಗ್ಗೆ ಮಾಡಲಾಗುವ ಯಾವುದೇ ಟೀಕೆಗಳನ್ನು ತೃಣಮೂಲ ಕಾಂಗ್ರೆಸ್ ನೇತೃತ್ವದ ಸರಕಾರ ಸಹಿಸುತ್ತಿಲ್ಲ. ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳು ಯಥಾಪ್ರಕಾರ ಮುಂದುವರಿದಿವೆ. ಅಸೆಂಬ್ಲಿ ಚುನಾವಣೆಗಳ ಫಲಿತಾಂಶಗಳು ಪ್ರಕಟವಾದಾಗಿನಿಂದ ಇದುವರೆಗೆ 55 ಜನರ ಹತ್ಯೆಯಾಗಿದೆ. ಮೃತರು ಸಿಪಿಐ (ಎಂ) ಅಥವಾ ಎಡರಂಗದ ಕಾರ್ಯಕರ್ತರು ಅಥವಾ ಬೆಂಬಲಿಗರು. ಇಂಥ ಹೇಯ ದಬ್ಬಾಳಿಕೆ ಕೊನೆಯಾಗಬೇಕು ಹಾಗೂ ಪ್ರಜಾಸತ್ತಾತ್ಮ ಹಕ್ಕುಗಳು ಪೂರ್ಣ ಪ್ರಮಾಣದಲ್ಲಿ ಮರುಸ್ಥಾಪನೆಯಾಗಬೇಕು ಎಂದು ಸಿಪಿಐ (ಎಂ) ಆಗ್ರಹಿಸುತ್ತದೆ.

ಮುಷ್ಕರಕ್ಕೆ ಬೆಂಬಲ

ಫೆಬ್ರವರಿ 28ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿರುವ ಕರೆಗೆ ಕೇಂದ್ರ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಕಾರ್ಮಿಕ ಸಂಘಟನೆಗಳ ಈ ಐಕ್ಯ ಕಾರ್ಯಾಚರಣೆ ಕಾರ್ಮಿಕ ವರ್ಗದ ಹಿತಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಬದಲಿಗೆ ಇಡೀ ದೇಶದ ಹಿತಗಳ ಬಗ್ಗೆ ಕಳಕಳಿಯನ್ನು ಹೊಂದಿದೆ. ಈ ಮುಷ್ಕರದ ಪೂರ್ಣ ಯಶಸ್ಸಿ ಶ್ರಮಿಸುವಂತೆ ಪಕ್ಷ ತನ್ನ ಎಲ್ಲಾ ಘಟಕಗಳಿ ಸೂಚಿಸಿದೆ.

ಕರಡು ರಾಜಕೀಯ ಗೊತ್ತುವಳಿ

ಕೋಳಿಕ್ಕೋಡ್‌ನಲ್ಲಿ 2012 ಎಪ್ರಿಲ್‌ನಲ್ಲಿ ನಡೆಯಲಿರುವ ಪಕ್ಷದ 20ನೇ ಮಹಾಧಿವೇಶನದಲ್ಲಿ ಮಂಡಿಸಲಾಗುವ ಕರಡು ರಾಜಕೀಯ ಗೊತ್ತುವಳಿಯನ್ನು ಕೇಂದ್ರ ಸಮಿ ಅಂಗೀಕರಿಸಿತು. ಯುಪಿಎ ಸರಕಾರದ ನವ-ಉದಾರವಾದಿ ನೀತಿಗಳ ವಿರುದ್ಧ ಹೋರಾಡುವಂತೆ ಹಾಗೂ ಈ ನೀತಿಗಳಿಂದಾ ಬಾಧಿತರಾಗಿರುವ ದುಡಿಯುವ ವರ್ಗದ ವಿವಿ ವಿಭಾಗಗಳನ್ನು ಅಣಿನೆರೆಯಿಸುವಂತೆ ಅದು ಕ ನೀಡಿದೆ. ಇದೊಂದು ಪ್ರಧಾನ ಕಾರ್ಯಭಾರವಾಗಿದೆ. ಕೋಮುವಾ

ಪುಟ 14

ಸಂಪಾದಕೀಯ

ಅಮಾನವೀಯ ಪದ್ಧತಿ ವಿರುದ್ಧದ ಹೋರಾಟ ವಿಸ್ತಾರಗೊಳ್ಳಲಿ

ಪಂಕ್ತಿಭೇದ, ಜಾತಿಭೇದದ ವಿರುದ್ಧದ ಸಂವಿಧಾನಬದ್ಧ ಸಮಾನತೆಯನ್ನು ಸ್ಥಾಪಿಸಲು ಗಣರಾಜ್ಯೋತ್ಸವ ದಿನದಂದು ಉಡುಪಿಯಲ್ಲಿ ಆರಂಭಗೊಂಡ ಸಿಪಿಐ(ಎಂ) ಆಂದೋಲನ ಶ್ಲಾಘನೀಯ. ಭಾಗವಹಿಸಿದವರೆಲ್ಲರೂ ಅಭಿನಂದನಾರ್ಹರು. ಇದು ಇನ್ನಷ್ಟು ವಿಶಾಲವಾಗಿ, ತೀವ್ರತೆಯಿಂದ ಮುಂದುವರೆಯುವುದು ಅತ್ಯಗತ್ಯ. ನಾಡಿನ ಸಾಮಾಜಿಕ ತಾರತಮ್ಯಗಳ ವಿರುದ್ಧದ ಚಳುವಳಿಯಲ್ಲೇ ಐತಿಹಾಸಿಕ ಮೈಲಿಗಲ್ಲಾಗುವುದು ನಿಸ್ಸಂಶಯ.

ಪಂಕ್ತಿಭೇದವೆಂಬುದು ಒಂದು ಸಹಭೋಜನದ ಆಚರಣೆಯಿಂದ ಮುಕ್ತಾಯವಾಗುವುದಿಲ್ಲ. ಒಂದು ಜಾತಿ–ಧರ್ಮಕ್ಕೂ ಸೀಮಿತವಲ್ಲ. ದಲಿತರ ಕೇರಿಗಳಲ್ಲಿ ಪಾದ ಪೂಜೆ ಮಾಡಿಸಿಕೊಂಡು ವರ್ಷಕ್ಕೊಂದು ಭೋಜನ ಏರ್ಪಡಿಸುವವರು ಇದನ್ನು ಅರಿಯಬೇಕು. ಇದರ ಹಿಂದೆ ಶತ ಶತಮಾನಗಳ ಅಮಾನವೀಯ ಜಾತಿಪದ್ಧತಿ ಆಚರಣೆ– ಅದರ ರಕ್ಷಣೆ ಇದೆ. ಈ ಜಾತಿ ವ್ಯವಸ್ಥೆಯು ಶೋಷಣೆ, ಸಂಪತ್ತಿನ ಹಾಗೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಅಧಿಕಾರ ಹಿಡಿತದ ಷಡ್ಯಂತ್ರವೇ ಆಗಿ ಆಳುವವರು ತಾತ್ವಿಕ ಮತ್ತು ತೋಳ್ಬಲದಿಂದ ಪಂಕ್ತಿಭೇದ, ಜಾತಿಭೇದ, ಮಡೆ–ಮಡಸ್ನಾನದಂತಹ ಅನಿಷ್ಟ ಪದ್ಧತಿಗಳನ್ನು ಸಮರ್ಥಿಸಿಕೊಂಡೇ ಬಂದಿದ್ದಾರೆ. ಇವುಗಳ ವಿರುದ್ಧ ಎತ್ತಿದ ಸಣ್ಣ ಪ್ರಶ್ನೆಯನ್ನು ಈ ಸ್ಥಾಪಿತ ಹಿತಾಸಕ್ತಿಗಳು ಸಹಿಸಿಕೊಳ್ಳುತ್ತಿಲ್ಲ. ಇಂತಹ ಪ್ರಜಾಸ್ತಾತ್ಮಕ ಹಕ್ಕಿನ ಕೇಳಿಕೆಯ ಮೇಲೆಯೇ ಧಾಳಿ ನಡೆಸಿದ್ದಾರೆ. ಆದ್ದರಿಂದ ಈ ಸಾಮಾಜಿಕ–ಸಾಂಸ್ಕೃತಿಕ ಚಳುವಳಿಯಲ್ಲಿ ಎಲ್ಲಾ ಮಾನವೀಯ, ಪ್ರಗತಿಪರ ಶಕ್ತಿ–ವ್ಯಕ್ತಿಗಳನ್ನು ತೊಡಗಿಸಿ ಬೃಹತ್ ಆಂದೋಲನವಾಗುವಂತೆ ಮಾಡಬೇಕಿದೆ. ಇದು [illegible] ಪ್ರಜಾಸತ್ತಾತ್ಮಕ ಚಳುವಳಿಯ, ಮಹತ್ತರ ಒಂದು ವಿಷಯವಾಗಿದೆ. ಈ ಸಂದರ್ಭದಲ್ಲಿ ವ್ಯಕ್ತಗೊಂಡ ಉತ್ಸಾಹ, ಬೆಂಬಲ ಬಲಗೊಂಡು ಯಶಸ್ಸು ಸಾಧಿಸಲಿ ಎಂಬುದು ದುಡಿವ ಜನರ ಪ್ರಾಣ ಮಿತ್ರನ ಆಶಯ.

ಪ್ರಾದೇಶಿಕ ಅಸಮಾನತೆ ಮೂಲಭೂತ ಕ್ರಮ ಅಗತ್ಯ.

ಹೈದರಾಬಾದ್, ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ 371(1)ರ ಕಲಮಿನಡಿ ಸ್ಥಾನಮಾನ ಕಲ್ಪಿಸಬೇಕೆಂದು ಆ ಪ್ರದೇಶದಲ್ಲಿ ಬಂದ್ ಪ್ರತಿಭಟನೆ ನಡೆದಿದೆ. ಇದಕ್ಕೆ ರಾಜ್ಯದಲ್ಲಿ ಆಳುವ ಬಿಜೆಪಿ ಪಕ್ಷದಿಂದಲೂ ಸರ್ಕಾರದಿಂದಲೂ ಬೆಂಬಲಿಸಲಾಗಿದೆ.

ಪ್ರಾದೇಶಿಕ ಅಸಮಾನತೆಯ ಶಾಪದಿಂದ ಬಳಲುತ್ತಿರುವ ಈ ಪ್ರದೇಶಕ್ಕೆ ಅಂತಹ ಸ್ಥಾನಮಾನ ಕಲ್ಪಿಸಬೇಕೆಂಬಲ್ಲಿ ಬಹುತೇಕ ಎಲ್ಲರ ಬೆಂಬಲವಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಹಿಂದೆ ಬಿಜೆಪಿ ಪಕ್ಷಗಳದ್ದು ಇದಕ್ಕೆ ತಕರಾರಿಲ್ಲ ಎನ್ನುತ್ತವೆ. ಆದರೆ ಒಪ್ಪುವ ಸಂದರ್ಭ ಬಂದಾಗ ನೆಪಗಳ ಹೇಳಿ ವಿಳಂಬಿಸುತ್ತವೆ. ಈಗಲೂ ಕೇಂದ್ರದ ಯುಪಿಎ ಸರ್ಕಾರ ತಾನು ಹೇಳಿದಂತೆ 371ನೇ ಪರಿಚ್ಛೇಧದಕ್ಕೆ ತಿದ್ದುಪಡಿ ತರಲು ಮುಂದಾಗಬೇಕಿತ್ತು. ಹಾಗೆ ಮಾಡದಿರುವುದು ಕೇಂದ್ರದ ಗದ್ದುಗೆಯ ಮೇಲೆ ಕಣ್ಣಿಟ್ಟಿರುವ, ರಾಜ್ಯದ ಜನತೆಯ ಆಕ್ರೋಶಕ್ಕೆ ಗುರಿಯಾಗಿರುವ ಬಿಜೆಪಿಯು ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ ಅದೇ ಹೊತ್ತಿನಲ್ಲಿ ಈಗ ದೊಡ್ಡ ಸ್ವರದಲ್ಲಿ ಮಾತನಾಡುವ ಬಿಜೆಪಿಯ ಎನ್‌ಡಿಯ ಸರಕಾರ ಕೇಂದ್ರದಲ್ಲಿರುವಾಗ ಚಕಾರವೆತ್ತದೆ ಇರುವುದು ಯಾತಕ್ಕೆ ಎಂದು ಪ್ರಶ್ನಿಸಬೇಕಾಗುತ್ತದೆ ಅಂದರೆ ಮೂಲತಹ ಕಾಂಗ್ರೆಸ್ ಬಿಜೆಪಿಗಳಿಗೆ ಪ್ರಾದೇಶಿಕ ಅಸಮಾನತೆ ತೊಲಗಿಸುವ ಯಾವುದೇ ನಿರ್ದಿಷ್ಟ ಕ್ರಮಗಳು ಬೇಕಿಲ್ಲ. ಬೇಕಿರುವುದು ಜನರಲ್ಲಿ ಅತೃಪ್ತಿಯನ್ನು ಹೆಚ್ಚಿಸಿ ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳುವುದಷ್ಟೆ.

ಮೇಲಾಗಿ ಪ್ರಾದೇಶಿಕ ಅಸಮಾನತೆ ತೊಲಗಿಸಲು ಈ ಕಲಮಿಗೆ ತಿದ್ದುಪಡಿಯೊಂದೇ ಸಾಲದು ಬದಲಾಗಿ ಇಡೀ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಸಾಧನೆಗೆ ಆರ್ಥಿಕ, ಸಾಮಾಜಿಕ ಮೂಲಭೂತ ಬದಲಾವಣೆ ತರವುದು ಅಗತ್ಯ. ಅಂದರೆ ಹಿಂದುಳಿದಿರುವಿಕೆಗೆ ಮೂಲ ಕಾರಣವಾದ ಭೂಮಾಲಿಕತ್ವದ ಕೇಂದ್ರೀಕರಣ, ಪಾಳೇಗಾರಿ ಭೂ ಸಂಬಂಧಗಳಲ್ಲಿನ ಬದಲಾವಣೆ ಅರ್ಥಾತ್ ಪ್ರಗತಿಪರ ಸಮಗ್ರ ಭೂಸುಧಾರಣೆ ಕೈಗಾರಿಕೆ ಅದನ್ನು ಆಧರಿಸಿದ ಸರ್ವತೋಮುಖ ಬೆಳವಣಿಗೆಗಳ ಹೊರತು ಅನ್ಯ ಮಾರ್ಗವಿಲ್ಲ. ಆದರೆ ಇದರತ್ತ ಕಿರು ಹೆಜ್ಜೆಯನ್ನೂ ಇಡದ ಸರ್ಕಾರಗಳು ರಸ್ತೆ, ಸೇತುವೆ, ಕಟ್ಟಡ ನಿರ್ಮಾಣದಂತಹ ಕಂಟ್ರಾಕ್ಟ್ ಅಭಿವೃದ್ಧಿಯನ್ನೇ ಹೇಳುತ್ತಾ ಬರುತ್ತಿವೆ. ಈ ಪಾಳೇಗಾರಿ ಭೂ ಸಂಬಂಧಗಳನ್ನು ಮುರಿದಿಕ್ಕೆ ಮುನ್ನಡೆವ, ಜನತೆಯ ಪ್ರಜಾಸತ್ತಾತ್ಮಕ ಅಭಿವೃದ್ಧಿ ಬೇಕಿಲ್ಲ. ಅಂತಹವರೇ ಇಂದು ನಾಯಕತ್ವ ನೀಡುತ್ತಿದ್ದಾರೆ.

ಈಗಲೂ 371ನೇ ವಿದಿಯಡಿ ಆ ಪ್ರದೇಶ ತಂದಲ್ಲಿ ಅದು ಉದ್ಯೋಗ–ಶಿಕ್ಷಣದಲ್ಲಿ ಒಂದಿಷ್ಟು ಸ್ಥಾನಗಳ ಮೀಸಲಾತಿ ಸಿಗಲು ಸಾಧ್ಯವಾಗಬಹುದೇ ಹೊರತು ಮೂಲಪ್ರಶ್ನೆಗಳಿಗೆ ಪರಿಹಾರವಲ್ಲ. ಆ ಪ್ರದೇಶದಲ್ಲಿ ಅಪಾರ ಪ್ರಮಾಣದಲ್ಲಿ ಶಿಕ್ಷಣ, ಆರ್ಥಿಕತೆ ರಂಗದಲ್ಲಿ ತೀರಾ ಮೂಲೆಗೊತ್ತಲ್ಪಟ್ಟ ಲಕ್ಷಾಂತರ ಜನ ಸಾಮಾನ್ಯರಿರುವಾಗ ಅದರ ಲಾಭವೂ ಕೂಡಾ ಈಗಾಗಲೇ ಮುಂದುವರೆದ ಕೆಲವಿಭಾಗಗಳಿಗೆ ಮಾತ್ರ ಸಿಕ್ಕುವುದು. ಆದ್ದರಿಂದಲೇ 371ನೇ ವಿಧಿ ಸೇರ್ಪಡೆ ಜೊತೆಯಲ್ಲೇ ಪ್ರಾದೇಶಿಕ ಅಸಮಾನತೆ ತೊಲಗಿಸುವ ಮೂಲಕ್ರಮಗಳ ಅಗತ್ಯವಿದೆ. ಆದ್ದರಿಂದ ಸಮಗ್ರ ಕ್ರಮಗಳಿಗೆ ಸರ್ಕಾರ ಮುಂದಾಗಲಿ. ಕೇಂದ್ರವು 371ನೇ ಕಲಮಿಗೆ ತಿದ್ದುಪಡಿ ತರಲಿ.

ಲೋಕಾಯುಕ್ತ: ವಿಳಂಬ, ಜಗ್ಗಾಟದ ಹಿಂದೆ


ಜನವರಿ22:
ಲೋಕಾಯುಕ್ತ ಹುದ್ದೆಗೆ ನ್ಯಾ.ಬನ್ನೂರಮಠರನ್ನು ಹೊರತು ಪಡಿಸಿ ಬೇರೊಬ್ಬರ ಹೆಸರು ಸೂಚಿಸಲು ರಾಜ್ಯ ಸರ್ಕಾರ ಒಪ್ಪಿದೆ.

–ರಾಜ್ಯಪಾಲ ಹೆಚ್. ಆರ್.ಭರದ್ವಾಜ್

ಜನವರಿ24:
ನ್ಯಾ. ಬನ್ನೂರ ಮಠರನ್ನೇ ಲೋಕಾಯುಕ್ತರನ್ನಾಗಿ ನೇಮಕ ಮಾಡಬೇಕು. ನಿರಾಕರಿಸಲು ಕಾರಣಗಳಿಲ್ಲ

–ಮು.ಮಂ. ಸದಾನಂದಗೌಡ

ಇಂತಹುದು ಒಂದು ದಿನದ ಪ್ರಸಂಗವಲ್ಲ. ಲೋಕಾಯುಕ್ತರ ನೇಮಕದ ವಿಷಯದಲ್ಲಿ ಇಂತಹ ಮಾತುಗಳನ್ನು ಕೇಳಿ, ಕೇಳಿ ಸಾಕಾಗಿ ಹೋಗಿದೆ. ಆದರೆ ನೇಮಕ ಆಗಲೇ ಇಲ್ಲ. ಸಂಸ್ಥೆಗೆ ಲೋಕಾಯುಕ್ತರಿಲ್ಲದೇ ಹುದ್ದೆ ಖಾಲಿ ಬಿದ್ದು ನಾಲ್ಕು ತಿಂಗಳೇ ಕಳೆದು ಹೋದವು. ಈ ಜಗ್ಗಾಟ ನಿಂತಿಲ್ಲ. ಇನ್ನೇನು ಇತ್ಯರ್ಥ್ಯವಾಯ್ತು ಎನ್ನುವಾಗಲೇ ಹೊಸ ವಿವಾದ ಹುಟ್ಟಿ ಕೊಳ್ಳುವುದರಲ್ಲಿ ರಾಜ್ಯದ ಹಿತಕ್ಕಿಂತ ಆಡಳಿತ ಪಕ್ಷದ ಕಳಂಕಿತ, ಭ್ರಷ್ಟ ನಾಯಕರನ್ನು ರಕ್ಷಿಸುವ ,ಭೂ ಹಾಗೂ ಗಣಿ ಹಗರಣಗಳನ್ನು ಮುಚ್ಚಿ ಹಾಕುವ ದುಷ್ಟ ಹಂಚಿಕೆಯೇ ಪ್ರಧಾನವಾಗಿದೆ.



ಈಗಾಗಲೇ ಲೋಕ ವಿಖ್ಯಾತವಾಗಿರುವಂತೆ ಬಿಜೆಪಿ ಒಡೆದ ಮನೆ. ಯಡಿಯೂರಪ್ಪ ಜೈಲಿನಿಂದ ಹೊರ ಬಂದಿರುವುದೇ ಅರೋಪ ಮುಕ್ತನಾದಂತೆ ಎಂದು ಭಾವಿಸಿ ಬಿಟ್ಟು , ಬಿಟ್ಟು ಹೋದ ಮುಖ್ಯಮ್ತ್ರಂತ್ರಿ ಪಟ್ಟ ವಾಪಾಸು ಕೊಡುವಂತೆ ರಿಪಿ ರಿಪಿ ಪೀಡಿಸುತ್ತಿದ್ದಾನೆ. ಹೀಗಾದಲ್ಲಿ ಆಗಬಹುದಾದ ಅನಾಹುತಗಳನ್ನು ಅಂದಾಜಿಸಿಯೇ ಆರ್.ಎಸ್.ಎಸ್.–ಬಿಜೆಪಿಗಳು ಕಾಲ ನೂಕುವ ಕಾರ್ಯದಲ್ಲಿ ತೊಡಗಿವೆ. ಪರಿಣಾಮ ಅವರೊಳಗೆ ಒಳ ಜಗಳ ಹೆಚ್ಚಿವೆ. ಯಡಿಯೂರಪ್ಪ ಬರದಂತೆ ಸದಾನಂದಗೌಡರನ್ನು ಉಳಿಸಿ ಬಳಸಲು ಅನಂತ್ಕುಮಾರ್ ಬಣ ವ್ಯೂಹ ರಚಿಸಿ ಕದನಕ್ಕೆ ಇಳಿದಿದೆ. ಲೋಕಾಯುಕ್ತ ನೇಮಕವೂ ಇದರ ಒಂದು ಬಾಗ!

ಮೊನ್ನೆ ಉಪ ಲೋಕಾಯುಕ್ತರನ್ನಾಗಿ ನ್ಯಾ.ಚಂದ್ರಶೇಖರಯ್ಯನವರನ್ನು ನೇಮಕ ಮಾಡಲಾಯಿತಲ್ಲವೇ?. ಇದು ತನ್ನನ್ನು ಸಿ.ಎಂ ಮಾಡಿದ ಬಿಎಸ್ವೈ ಗೆ ಇಷ್ಟ ಇಲ್ಲವಂತೆ. ಹಾಗಂತಲೇ ಅವರು ಗುಟುರು ಹಾಕಿದ್ದಾರೆ. ಮಾತ್ರವಲ್ಲ ನ್ಯಾ. ಬನ್ನೂರಮಠರ ಬದಲಿಗೆ ಬೇರೊಬ್ಬರು ನೇಮಕವಾಗಿ ಬಿಟ್ಟರೆ ಗತಿ ಅಧೋಗತಿಯಾದೀತೆಂದು ಬಿಎಸ್ವೈ ಕೊಟ್ಟ ಏಟಿನ ಪರಿಣಾಮವೇ ಮತ್ತೇ ಸದಾನಂದರು ಹಿಂದಕ್ಕೆ ತಿರುಗಿರುವುದು. ಹತ್ತು ಪುಟಗಳಲ್ಲಿ ನೇಮಕ ಶಿಫಾರಸಿನ ಸಮರ್ಥನೆ ಮಾಡಿಕೊಂಡಿರುವುದು.


ಇಷ್ಟೆಲ್ಲಾ ರಾಡಿ ನಡೆದು ಹೆಸರು ಕೆಡುತ್ತಿದ್ದರೂ ಒಪ್ಪದಂತೆ ಸಾರ್ವಜನಿಕ ಆಗ್ರಹವಿದ್ದರೂ ಗೌ. ನ್ಯಾ.ಗಳು ತಮ್ಮ ಶಿಫಾರಸು ಬೇಡವೆಂದು ನಿರಾಕರಿಸುತ್ತಿಲ್ಲ.

ಇಂದು ಲೋಕಾಯುಕ್ತದ ಮುಂದೆ ಹತ್ತಾರು ಹಗರಣ–ಅಕ್ರಮಗಳ ಪ್ರಕರಣಗಳು ವಿಚಾರಣೆ ಮತ್ತು ಧೃಡ ಕ್ರಮಕ್ಕಾಗಿ ಕಾದಿವೆ. ಬಿಎಸ್ವೈ ಕಂಪನಿಯ ಭೂ ಡೀ ನೋಟಿಫಿಕೇಷನ್ ಅಕ್ರಮ ಹಗರಣಗಳೂ, ಅಕ್ರಮ ಗಣಿಗಾರಿಕೆ–ಸಾಗಾಣಿಕೆ ಕುರಿತ ವರದಿಗಳು ಇತ್ಯರ್ಥವಾಗಬೇಕಿದೆ. ನಿತ್ಯವೂ ಬರುವ ದೂರುಗಳೂ ಹಲವು ಇವೆ. ಆದರೆ ತನ್ನ ಎಲ್ಲಾ ಹಗರಣ ಪ್ರಕರಣಗಳನ್ನು ಮುಚ್ಚಿ

ಪುಟ 6 ಕ್ಕೆ

ಕಾರ್ಟೂನ್ ಕಾರ್ನರ್

ಕೃಪೆ : ದಿ ಹಿಂದು



ನೊಂದ ಕುಟುಂಬಕ್ಕೆ ಗರಿಷ್ಠ ಪರಿಹಾರ ನೀಡಲು ಒತ್ತಾಯಿಸಿ ಕಾಳಗಿಯಿಂದ ಗುಲ್ಬರ್ಗಾವರೆಗೆ ಕೂಲಿಕಾರರಿಂದ ಪಾದಯಾತ್ರೆ

ಉದ್ಯೋಗ ನಿರಾಕರಣೆಯಿಂದ ಬೇಸತ್ತು ಕೃಷಿ ಕೂಲಿಕಾರ ದೇವೇಂದ್ರಪ್ಪನ ಆತ್ಮಹತ್ಯೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗ ನಿರಾಕರಣೆಯಿಂದ ಬೇಸತ್ತು, ಮನೆಯಲ್ಲಿ ಮಡದಿ ಮಕ್ಕಳ ಜೀವನ ನಿರ್ವಹಣೆ ಸಾಧ್ಯವಾಗದೆ ಕೂಲಿಕಾರನೊಬ್ಬನು ಆತ್ಮಹತ್ಯೆ ಮಾಡಿಕೊಂಡ ದಾರುಣ ಘಟನೆ ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಕಾಳಗಿ ಗ್ರಾಮದಲ್ಲಿ ಸಂಭವಿಸಿದೆ. ದೇವಿಂದ್ರಪ್ಪ ಕಿಶನ್‌ರಾವ್ ಮಾಳಾ ಎಂಬುವನೇ ಆ ನತದೃಷ್ಟ ಕೂಲಿಕಾರ. ವಯಸ್ಸು ಸುಮಾರು 35 ವರ್ಷ. ಎಪ್ಪತ್ತಕ್ಕೂ ಹೆಚ್ಚು ವರ್ಷ ವಯಸ್ಸಾಗಿರುವ ತಾಯಿ ರುಕ್ಮಾಬಾಯಿ, ಹೆಂಡತಿ ನಾಗಮ್ಮ, ಹಿರಿಯ ಮಗ ಕೃಷ್ಣ(14), ಮಗಳು ರಾಣಿ(12), ಕೊನೆಯ ಮಗಳು ಪೂಜಾ(9) ಅವರನ್ನು ಒಳಗೊಂಡು ಸಂಸಾರದ ಹೊರೆ ಹೊತ್ತ ದೇವಿಂದ್ರಪ್ಪನಿಗೆ ಸ್ವಂತ ಭೂಮಿ ಇರಲಿಲ್ಲ, ವಾಸಕ್ಕೊಂದು ಮನೆ ಸಹ ಇರಲಿಲ್ಲ. ಬಾಡಿಗೆ ಮನೆಯೊಂದರಲ್ಲಿ ತುಂಬಾ ಕಷ್ಟಪಟ್ಟು ಜೀವನ ಸಾಗಿಸುತ್ತಿದ್ದ ಈ ಕುಟುಂಬ ಜೀವನ ನಿರ್ವಹಣೆಗೆ ಕೂಲಿ ಕೆಲಸವನ್ನೇ ಅವಲಂಬಿಸಿತ್ತು. ವೃದ್ಧೆ ರುಕ್ಮಾಬಾಯಿ ಸಹ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಕಳೆದ ಎರಡು ಮೂರು ವರ್ಷಗಳಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ದೇವಿಂದ್ರಪ್ಪ ನೋಂದಾಯಿತ ಕೆಲಸಗಾರನಾಗಿದ್ದು 151504017007/980 ಸಂಖ್ಯೆಯ ಉದ್ಯೋಗ ಚೀಟಿಯನ್ನು ಹೊಂದಿದ್ದನು.

ರಾಜ್ಯದ ಸುಮಾರು 100 ತಾಲ್ಲೂಕುಗಳಲ್ಲಿ ಇರುವಂತೆ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಭೀಕರ ಬರ ವ್ಯಾಪಿಸಿಕೊಂಡಿದೆ. ರೈತರು ಬೆಳೆಹಾನಿಯಿಂದ ತತ್ತರಿಸಿದ್ದಾರೆ. ದನಕರುಗಳಿಗೆ ಮೇವಿನ ಕೊರತೆ ಗಂಭೀರವಾಗಿದೆ. ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದೆ. ಎಲ್ಲಕ್ಕೂ ಮುಖ್ಯವಾಗಿ ಭೂರಹಿತ ಕೃಷಿ ಕೂಲಿಕಾರರು ಹಳ್ಳಿಗಳಲ್ಲಿ ಕೆಲಸ ಸಿಗದಂತಾಗಿ ಹಿಂದೆಂದಿಗಿಂತಲೂ ಹೆಚ್ಚಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಕೆಲಸ ಸಿಗದಂತಾಗಿ ನಲುಗಿದವರಲ್ಲಿ ಕಾಳಗಿ ಗ್ರಾಮದ ದೇವೀಂದ್ರಪ್ಪನು ಸಹ ಒಬ್ಬವನು. 2009-2010ರಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಮಾಡಿದ ಕೆಲಸಕ್ಕೆ ಅವನಿಗೆ ಸಿಗಬೇಕಾದ ಕೂಲಿ ಹಣ ಇದುವರೆಗೂ ಸಂದಾಯ ಆಗಿಲ್ಲ. 2011ರ ಮಾರ್ಚ್ ತಿಂಗಳಲ್ಲಿ ನಮೂನೆ 6ರಲ್ಲಿ ಕೆಲಸಕ್ಕಾಗಿ ಕಾಳಗಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಾನೆ. ಪಂಚಾಯತಿಯಿಂದ ಆತನಿಗೆ ಮತ್ತು ಗ್ರಾಮದ ಇತರ ಕೂಲಿಕಾರರಿಗೆ ಕೆಲಸ ದೊರೆಯಲಿಲ್ಲ. ಕೆಲಸ ನೀಡದಿದ್ದಾಗ ಕಾಯ್ದೆ ಪ್ರಕಾರ ನೀಡಬೇಕಾದ ನಿರುದ್ಯೋಗ ಭತ್ಯೆಯೂ ಆತನಿಗೆ ಸಿಗಲಿಲ್ಲ. ಕೃಷಿ ಕೂಲಿಕಾರರ ಸಂಘ ಏರ್ಪಡಿಸಿದ್ದ ಎಲ್ಲಾ ಹೋರಾಟಗಳಲ್ಲಿ ಆತ ಭಾಗವಹಿಸಿದ್ದಾನೆ. ಕೆಲಸಕ್ಕಾಗಿ-ನಿರುದ್ಯೋಗ ಭತ್ಯೆಗಾಗಿ ಒತ್ತಾಯಿಸಿದ್ದಾನೆ. 2011 ಸೆಪ್ಟಂಬರ್ ತಿಂಗಳಲ್ಲಿ ಮತ್ತೆ ನಮೂನೆ 6ರಲ್ಲಿ ಅರ್ಜಿ ಸಲ್ಲಿಸಿ ಕೆಲಸಕ್ಕಾಗಿ ಮೊರೆಯಿಟ್ಟಿದ್ದಾನೆ. ಆದರೆ ಗುತ್ತಿಗೆದಾರರು, ಪಂಚಾಯತಿಯ ಭ್ರಷ್ಟ ಚುನಾಯಿತ ಸದಸ್ಯರು ಹಾಗೂ ಭ್ರಷ್ಟ



ಅಧಿಕಾರಿಗಳು ಸೇರಿಕೊಂಡು ಕೂಲಿಕಾರರ ಅರ್ಜಿಯನ್ನು ಕಡೆಗಣಿಸಿದ್ದಾರೆ. ತಿಂಗಳುಗಟ್ಟಲೆ ಕೆಲಸ ಇಲ್ಲದೆ ದೇವಿಂದ್ರಪ್ಪ ಬೇಸತ್ತಿದ್ದಾನೆ. ಕುಟುಂಬದ ನಿರ್ವಹಣೆ ಅಸಾಧ್ಯವಾಗಿದೆ. ಸಾಲ ಕೊಡುವವರೂ ಯಾರು ಇಲ್ಲದಂತಾಗಿದ್ದಾರೆ.. ಧೃತಿಗೆಟ್ಟ ದೇವಿಂದ್ರಪ್ಪ ತನ್ನ ಸಮಸ್ಯೆಯನ್ನು ಸಂಘದವರ ಬಳಿಯಲ್ಲಿ ಹೇಳಿಕೊಳ್ಳುವ ಬದಲು ಅತ್ಯಂತ ವಿಷಾದಕರ ತೀರ್ಮಾನ ಮಾಡಿಬಿಟ್ಟಿದ್ದಾನೆ.

ಅಂದು ಜನವರಿ 7, 2012. ಊರ ಜಾತ್ರೆಯೊಂದು ಮುಗಿದಿತ್ತು. ದೇವಿಂದ್ರಪ್ಪನ ಮನೆಯಲ್ಲಿ ಹಬ್ಬದ ಯಾವ ಸಡಗರವೂ ಇರಲಿಲ್ಲ. ಅಂದು ಬೆಳಿಗ್ಗೆ ಕೆಲಸ ಹುಡುಕಿಕೊಂಡು ಮಹಾರಾಷ್ಟ್ರಕ್ಕೆ ಹೋಗುತ್ತೇನೆ ಎಂದು ಮನೆಯಲ್ಲಿ ಮಡದಿ ಮಕ್ಕಳಿಗೆ ಹೇಳಿ ಒಂದೆರೆಡು ಬಟ್ಟೆ ಬರೆಗಳನ್ನು ಕೈಚೀಲದಲ್ಲಿ ಹಾಕಿಕೊಂಡು ಮನೆಯಿಂದ ಹೊರಟ ದೇವಿಂದ್ರಪ್ಪ ಊರ ಹೊರಗಿನ ದೇವಸ್ಥಾನದ ಆವರಣದಲ್ಲಿರುವ ಮರವೊಂದಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ದೇವಿಂದ್ರಪ್ಪನ ಈ ಅಕಾಲಿಕ ಸಾವಿನಿಂದ ಕಾಳಗಿ ಗ್ರಾಮದ ಕೂಲಿಕಾರ ಕುಟುಂಬಗಳು ಆಘಾತಕ್ಕೆ ಒಳಗಾಗಿದ್ದು ದೇವಿಂದ್ರಪ್ಪನ ದುರಂತ ಸಾವಿಗೆ ಸರ್ಕಾರ ಮತ್ತು ಜಿಲ್ಲಾಡಳಿತದ ನಿಷ್ಕಾಳಜಿ-ನಿರ್ಲಕ್ಷ್ಯ ಧೋರಣೆಯೇ ಕಾರಣವೆಂದು ಆಕ್ರೋಶ ವ್ಯಕ್ತಪಡಿಸುತ್ತಿವೆ.

ಪರಿಹಾರಕ್ಕೆ ಆಗ್ರಹಿಸಿ ಪಾದಯಾತ್ರೆ :-

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾಳಗಿ ಘಟಕದ ಸದಸ್ಯನಿಗಿದ್ದ ದೇವಿಂದ್ರಪ್ಪನ ಸಾವಿನ ಸುದ್ದಿ ತಿಳಿಯುತ್ತಲೇ ಸಂಘದ ಮುಖಂಡರಾದ ಭೀಮಶೆಟ್ಟಿ ಯಂಪಳ್ಳಿ, ಅಶೋಕ ಮ್ಯಾಗೇರಿ ಮೊದಲಾದವರು ಮೃತನ ಮನೆಗೆ ಧಾವಿಸಿದ್ದಾರೆ. ಅನಾಥವಾದ ದೇವಿಂದ್ರಪ್ಪನ ಕುಟುಂ[illegible] ಸಂಘದಿಂದ 2,000 ರೂ.ಗಳನ್ನು ನೀಡಿ ಸಾಂತ್ವನ ಹೇಳಿದ್ದಾರೆ.

ನಿತ್ಯಾನಂದಸ್ವಾಮಿ

ಪಾದಯಾತ್ರೆ

1. ದೇವಿಂದ್ರಪ್ಪನ ಕುಟುಂಬಕ್ಕೆ ತಕ್ಷಣ ಸರ್ಕಾರ 2 ಲಕ್ಷ ರೂ. ಪರಿಹಾರ ನೀಡಬೇಕು.2. ಕಾಳಗಿ ಗ್ರಾಮದಲ್ಲಿ ಅವರಿಗೆ ವಾಸಕ್ಕೊಂದು ಮನೆಯನ್ನು ಒದಗಿಸಬೇಕು. 3. ದೇವಿಂದ್ರಪ್ಪನ ಹೆಂಡತಿ ನಾಗಮ್ಮಳಿಗೆ ಒಂದು ಸರ್ಕಾರಿ ನೌಕರಿಯನ್ನು ನೀಡಬೇಕು. ಮತ್ತು 4. ದೇವಿಂದ್ರಪ್ಪ 3 ಜನ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂಬ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಜನವರಿ 18, 2012ರಂದು ಕಾಳಗಿಯಿಂದ ಗುಲ್ಬರ್ಗಾಕ್ಕೆ ಕೂಲಿಕಾರರ ಪಾದಯಾತ್ರೆಯನ್ನು ಆರಂಭಿಸಲಾಯಿತು. ಕಾಳಗಿ ಗ್ರಾಮದ ಸುಮಾರು



200 ಜನ ಕೂಲಿಕಾರ ಮಹಿಳೆಯರು ಮತ್ತು ಪುರುಷರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಸಂಘದ ರಾಜ್ಯ ಅಧ್ಯಕ್ಷ ಸಂಗಾತಿ ನಿತ್ಯಾನಂದಸ್ವಾಮಿಯವರು ಮೃತ ದೇವಿಂದ್ರಪ್ಪ ಅವರ ಮನೆಯಲ್ಲಿ ಅವರ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದರಲ್ಲದೆ ಜ್ಯೋತಿಯೊಂದನ್ನು ಹೊತ್ತಿಸುವ ಮೂ ಪಾದಯಾತ್ರೆಯನ್ನು ಉದ್ಘಾಟಿಸಿದರು. ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದ ಸಂಗಾತಿ ಚಂದ್ರಪ್ಪ ಹೊಸ್ಕೇರಾ, ಜಿಲ್ಲಾ ಸ ಅಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ, ಜಿಲ್ಲಾ ಕಾರ್ಯದ ದಾವಲ್‌ಸಾಬ್ ನದಾಫ್, ಜಿ ಸಹಕಾರ್ಯದರ್ಶಿ ಮಲ್ಲಮ್ಮಕೋಡ್ಲಿ, ಚಿತ್ತಾಪು ತಾಲ್ಲೂಕಿನ ಅಧ್ಯಕ್ಷ ಅಶೋ ಮ್ಯಾಗೇರಿ ಮೊದಲಾದ ಮುಖಂಡ ಉಪಸ್ಥಿತರಿದ್ದರು. ಬಳಿಕ ಮುಖ್ಯ ಬೀದಿಗ ಸಾಗಿದ ಪಾದಯಾತ್ರೆ ವಿಶೇಷ ತಹಶೀಲ್ದಾ ಕಛೇರಿಗೆ ತೆರಳಿ ಮನವಿಯೊಂದ ಸಲ್ಲಿಸಲಾಯಿತು. ತದನಂತರ ಗೋಟೂ ಕಣಸೂರು, ಅಶೋಕನಗರ, ಕೋರ್ವಾ ಮಾಡಬಾಳ ಗ್ರಾಮಗಳ ಮಾರ್ಗವಾಗಿ ಸ ಸಣ್ಣೂರು ಗ್ರಾಮದಲ್ಲಿ ರಾತ್ರಿ ವಿಶ್ರಾ ಪಡೆಯಲಾಯಿತು. ದಾರಿಯುದ್ದಕ್ಕೂ ಗ್ರಾ ಗ್ರಾಮಗಳಲ್ಲಿ ಕಾರ್ಯಕರ್ತರು ಕರಪತ್ರ ವಿತ ಮಾಡುತ್ತಿದ್ದಂತೆ ಮುಖಂಡರು ಭಾಷಣಗಳ ಮಾಡುವ ಮೂಲಕ ಉದ್ಯೋಗ ಖ ಯೋಜನೆಯನ್ನು ತಮ್ಮ ಭ್ರಷ್ಟಾಚಾ ಬಳಸಿಕೊಳ್ಳುತ್ತಿರುವ ಸರ್ಕಾರ ಧೋರಣೆಯನ್ನು ಖಂಡಿಸಿದರು. ಕಣಸೂ ಗ್ರಾಮಸ್ಥರು ಹೂವಿನ ಹಾರಗಳೊಂ ಪಾದಯಾತ್ರೆಯನ್ನು ಸ್ವಾಗತಿಸಿದರಲ್ಲದೆ ಎಲ್ಲರಿ ಚಹ ನೀಡಿ ಉಪಚರಿಸಿದರು. ಮಾಡಬೂ ಕ್ರಾಸ್‌ನಲ್ಲಿ ಗ್ರಾಮ ಪಂಚಾಯತಿ ನೌಕ ಸಂಘದ ತಾಲ್ಲೂಕು ಅಧ್ಯಕ್ಷರಾದ ನರಸ ಗುತ್ತೆದಾರ್ ಪಾದಯಾತ್ರಿಕರಿಗೆ ಟಿಫನ್ ವ್ಯ ಮಾಡಿದ್ದರು. ಸಣ್ಣೂರಿನಲ್ಲಿ ಸಿದ್ರಾ ಸಣ್ಣೂರ್ಕರ್ ಅವರು ಕಾಲ್ನಡಿಗೆ ಬಂದವರಿಗೆ ವಸತಿ ವ್ಯವಸ್ಥೆ ಹಾ ಬೆಳಗಿನ ಉಪಹಾರದ ವ್ಯವಸ್ಥೆಯ ಮಾಡಿದ್ದರು. ಮರುದಿನ ಬೆ ಪಾದಯಾತ್ರೆ ಯೂನಿವರ್ಸಿಟಿಗೆ ಬಳಿ ಬಂದಾಗ ಕಾಳಗಿಯ ಪಾ ಮದ್ದೂರ್ ಅವರ ಮಕ್ಕ ಮುಖಂಡರಿಗೆ ಹೂವಿನ ಹಾರಗ ಹಾಕಿ ಸ್ವಾಗತ ಮಾಡಿದರಲ್ಲದೆ ನೀಡಿದರು. ಪಾದಯಾತ್ರೆ ಗುಲ್ಬ ನಗರದ ಹೊರವಲಯಕ್ಕೆ ಬಂದ ರಂಗದಾಳ ಕಲ್ಯಾಣ ಮಂಟಪದಲ್ಲಿ ಪ್ರಾಂತ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಮೇಘ ಕಠಾರೆ ಪಾದಯಾತ್ರೆಯಲ್ಲಿ ಬಂದ ಮಾತ್ರವಲ್ಲ ಅಂದಿನ ರ್‍ಯಾಲಿಯಲ್ಲಿ ಭಾಗವಹಿ

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ


ಬಲಿಷ್ಟ ಕಮ್ಯುನಿಸ್ಟ್ ಪಕ್ಷ ಜನಾಂದೋಲನ ವ್ಯಾಪಕ ವಿಸ್ತರಣೆ

ಸಿಪಿಐ(ಎಂ) 20 ನೇ ಸಮ್ಮೇಳನದಲ್ಲಿ ವ್ಯಕ್ತಗೊಂಡ ದೃಢ ಆಶಯ

ಜಿ.ವಿ. ಶ್ರೀರಾಮರೆಡ್ಡಿ

...ಟಕ ರಾಜಕೀಯ ಇತಿಹಾಸದಲ್ಲಿ ಎಂದೂ ...ದ ರಾಜಕೀಯ ಪರಿಸ್ಥಿತಿ ಇಂದು ...ವನ್ನು ಅಧಃ ಪತನದ ಹಾದಿಗೆ ತಂದು ...ದೆ. ಇದಕ್ಕೆ ಪ್ರಮುಖ ಕಾರಣ ಬಿ.ಜೆ.ಪಿ. ...ಯ ರಾಜಕೀಯ ಮುಖವಾಡದ ಫ್ಯಾಷಿಸ್ಟ್ ...ಘಟನೆ. 2008 ರಲ್ಲಿ ತನಗೆ ...ಮತವಿಲ್ಲದಿದ್ದರೂ ಪ್ರಜಾಪ್ರಭುತ್ವದ ಎಲ್ಲಾ ...ಲ್ಯಗಳನ್ನು ಗಾಳಿಗೆ ತೂರಿ ಪ್ರಜಾಪ್ರಭುತ್ವದ ...ತ್ವವನ್ನು ಅಣಕಮಾಡುವ ರೀತಿಯಲ್ಲಿ ...ರೇಷನ್ ಕಮಲ'ದ ಹೆಸರಿನಲ್ಲಿ ಇತರೆ ಪಕ್ಷದ ...ಕರನ್ನು ರಾಜಿನಾಮೆ ಕೊಡಿಸಿ ನೂರಾರು ...ಟಿ ರೂಗಳನ್ನು ಸುರಿದು ಅಕ್ರಮವಾಗಿ ...ಮತವನ್ನು ಪಡೆದು ಅಧಿಕಾರವನ್ನು ...ದಿದ್ದೆ ಅಲ್ಲದೆ ಸಂಸದೀಯ ಪ್ರಜಾಪ್ರಭುತ್ವ ...ಸ್ಥೆಯನ್ನೇ ಅವಹೇಳನ ಮಾಡುವ ಮೂಲಕ ...ಶದ ಇತಿಹಾಸದಲ್ಲಿ ಒಂದು ...ಮಾನಕರವಾದ ಅಧ್ಯಾಯವನ್ನು ಬಿ.ಜೆ.ಪಿ. ...ದು ಬಿಟ್ಟಿತು. ಅಕ್ರಮವಾಗಿ ಸಂಪಾದಿಸಿದ ...ಕಾರವನ್ನು ಸಂಪೂರ್ಣ ...ದುರುಪಯೋಗಪಡಿಸಿಕೊಂಡು ರಾಜ್ಯದ ...ಲ್ಲಾ ರೀತಿಯ ಸಂಪತ್ತನ್ನು ಕೊಳ್ಳೆ ...ಡೆಯುವುದೇ ತನ್ನ ...ಧೇಯವಾಗಿಸಿಕೊಂಡು ಭೂಮಿ ಮತ್ತು ...ಜ ಸಂಪತ್ತನ್ನು ಲೂಟಿ ಮಾಡಿದ್ದಲ್ಲದೆ ...ಜ್ಯದ ಬೌದ್ಧಿಕ ಸಂಪತ್ತಿನ ಮೂಲವಾದ ...ಕ್ಷೇತ್ರವನ್ನು ದಿವಾಳಿ ಎಬ್ಬಿಸಿಬಿಟ್ಟಿತು. ...ತೆಗೆ ತನ್ನ ಕೋಮುವಾದಿ ...ರ್ಯಸೂಚಿಯಿಂದ ಅಲ್ಪಸಂಖ್ಯಾತರ ...ಲೆ ತನ್ನ ಸಂಘ ಪರಿವಾರದ ...ಾಂಧರಿಂದ ಅಲ್ಪಸಂಖ್ಯಾತರ ಮೇಲೆ ...ಸ್ಥಿತ ದಾಳಿಯನ್ನು ಪ್ರಾರಂಭ ಮಾಡಿಸಿ ...ಜ್ಯವನ್ನು ಕೋಮುದುಳ್ಳರಿಗೆ ದೂಡಿತು. ...ೀಚೆಗೆ ನಡೆದ ಸಿಂಧಗಿಯ ಪಾಕ್ ...ಾರೋಹಣದ ಪ್ರಕರಣ, 21-01-2012 ...ದ ಪುತ್ತೂರಿನಲ್ಲಿ ನಡೆದ ಹಿಂದೂ ...ಾಜೋತ್ಸವದಲ್ಲಿ ಸಂಘ ಪರಿವಾರದ ...ರ್ತರು ಮಾಡಿದ ಭಾಷಣಗಳಿಂದ ...ಪ್ರಚೋದಿತರಾದ ಮತಾಂಧರು ಸೃಷ್ಟಿಸಿದ ಆತಂಕದ ...ಸ್ಥಿತಿಯು ಇವರ ಕೋಮುವಾದಿ ಕಾರ್ಯ ...ಚಿಯನ್ನು ಜಾರಿಗೆ ತರುತ್ತಿದೆ. ಈ ಹಿಂದೂ ...ಾಜೋತ್ಸವದಲ್ಲಿ ರಾಜ್ಯದ ಇಂದಿನ ಮುಖ್ಯ ...ಂತ್ರಿಗಳು ಭಾಗವಹಿಸಿದ್ದರು. ರಾಜ್ಯದ ...ಪತ್ತನ್ನು ಲೂಟಿ ಮಾಡುವ ಬರದಲ್ಲಿ ಈ ...ದ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ...ಮ ಸಂಪಾದನೆಗೆ ಇಳಿದ ಪ್ರಯುಕ್ತ ...ರ್ಟಕದ ರಾಜಕೀಯ ಇತಿಹಾಸದಲ್ಲೇ ...ದಲ ಬಾರಿಗೆ ರಾಜ್ಯದ ಮುಖ್ಯ ...ಂತ್ರಿಯಾಗಿದ್ದವರೊಬ್ಬರು ಜೈಲು ಸೇರಿ ಸಜ್ಜನ ...ಕಾರಣಕ್ಕೆ ಹೆಸರಾದ ಕರ್ನಾಟಕವನ್ನು ಇಡೀ ...ಶದ ಮುಂದೆ ತಲೆ ತಗ್ಗಿಸುವಂತೆ ಮಾಡಿದ್ದಲ್ಲದೆ ...ರ ಜೊತೆಗೆ ಇವರ ಮಂತ್ರಿಮಂಡಲದ ...ಸ್ಯರು ಕಿಲವರು ಸೇರಿ ಕೆಲ ಶಾಸಕರು ಸಹಾ ...ಲು ಪಾಲಾಗಿದ್ದು ಬಿ.ಜೆ.ಪಿ. ಎಂಬ ಫ್ಯಾಸಿಸ್ಟ್ ಪಕ್ಷ ತಾನು ಫ್ಯಾಸಿಸ್ಟ್ ಮಾತ್ರವೇ ಅಲ್ಲ, ತಾನೊಂದು ಮಹಾ ಭ್ರಷ್ಟ ರಾಜಕೀಯ ಪಕ್ಷವೆಂದು ಸಾದರಪಡಿಸಿದೆ.

ಇನ್ನೊಂದು ಕಡೆ ಆರ್ಥಿಕವಾಗಿ ರಾಜ್ಯವನ್ನು ದಿವಾಳಿಯ ಅಂಚಿಗೆ ತೆಗೆದುಕೊಂಡು ಹೋಗಿ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದೆ. ಇಂದು ರಾಜ್ಯದ ಒಟ್ಟು ಸಾಲ 96 ಸಾವಿರ ಕೋಟಿಗಳು. ಇದಕ್ಕೆ ರಾಜ್ಯದ ಆದಾಯದಲ್ಲಿ ಶೇ 13 ರಷ್ಟು ಸಾಲಕ್ಕೆ ಬಡ್ಡಿಯನ್ನು ಕಟ್ಟಬೇಕಾಗಿದೆ. ರಾಜ್ಯದ




ಸಂಪನ್ಮೂಲಗಳ ಕ್ರೂಢೀಕರಣ ಶೇ 40 ರಷ್ಟು ಕುಸಿದಿದೆ. ಇದರಿಂದಾಗಿ ರಾಜ್ಯದ ಅಭಿವೃದ್ಧಿ ಸ್ಥಗಿತವಾಗಿದ್ದರೆ, ಆಡಳಿತ ಯಂತ್ರ ನಿಷ್ಕ್ರಿಯ ಆಗಿದೆ. ಬಿ.ಜೆ.ಪಿ.ಯ ಗುಂಪುಗಾರಿಕೆಯಿಂದಾಗಿ ಸರ್ಕಾರವನ್ನು ಅಸ್ಥಿರತೆ ನಿರಂತರವಾಗಿ ಕಾಡುತ್ತಿದೆ. ಈ ಅಸ್ಥಿರತೆ ಆಡಳಿತ ಯಂತ್ರವನ್ನು ನಿಷ್ಕ್ರಿಯಗೊಳಿಸಿರುವುದೇ ಅಲ್ಲದೆ ಇಡೀ ಆಡಳಿತ ಯಂತ್ರವೇ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಇದರಿಂದ ರಾಜ್ಯದ ಜನತೆ ಕಂಗಾಲಾಗಿದ್ದಾರೆ. ಕೈಗಾರಿಕಾ ರಂಗದ ಉತ್ಪಾದನೆ ಮತ್ತು ಕೃಷಿರಂಗದ ಉತ್ಪಾದನೆ ಸಂಪೂರ್ಣವಾಗಿ ಕುಸಿದಿದೆ. ಆದರೆ ಕೈಗಾರಿಕಾ ಬಂಡವಾಳದ ಕ್ರೂಢೀಕರಣದ ಹೆಸರಿನಲ್ಲಿ ಮತ್ತು ಕೃಷಿ ಬಂಡವಾಳದ ಸಂಗ್ರಹದ ಹೆಸರಿನಲ್ಲಿ ಲಕ್ಷಾಂತರ ಎಕೆರೆ ಭೂಮಿಯನ್ನು ಸರ್ಕಾರವೇ ಸ್ವಾಧೀನ ಪಡಿಸಿಕೊಂಡು ಬಹುರಾಷ್ಟ್ರೀಯ ಕಂಪನಿಗಳಿಗೆ ರಿಯಲ್ ಎಸ್ಟೇಟ್ ದಂದೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಆದರೆ ಕೈಗಾರಿಕಾ ರಂಗಕ್ಕಾಗಲೀ, ಕೃಷಿರಂಗಕ್ಕಾಗಲೀ ಬಂಡವಾಳ ಹರಿದು ಬರಲೇ ಇಲ್ಲ. ಬದಲಿಗೆ ಮಂತ್ರಿಗಳ ಮತ್ತು ಶಾಸಕರುಗಳ ಜೇಬಿಗೆ ಮಾತ್ರ ನೂರಾರು ಕೋಟಿ ರೂಗಳು ಹರಿದು ಬಂದು ಅವರ ಸಂಪತ್ತು ಮಾತ್ರ ಅಭಿವೃದ್ಧಿ ಆಯ್ತು. ಅದನ್ನೇ ರಾಜ್ಯದ ಅಭಿವೃದ್ಧಿಯೆಂದು ರಾಜ್ಯದ ಉದ್ದಗಲಕ್ಕೂ ಬಿ.ಜೆ.ಪಿ. ಡಂಗೂರ ಬಾರಿಸುತ್ತಿದೆ. ಕಳೆದ ನಾಲ್ಕು ವರ್ಷದ ಅವಧಿಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ರಾಜ್ಯದ ಸರ್ವಾಂಗೀಣ ಸಂಪತ್ತನ್ನು ಲೂಟಿ ಹೊಡೆದು ಭ್ರಷ್ಟಾಚಾರದಲ್ಲಿ ಕರ್ನಾಟಕವನ್ನು ಇಡೀ ದೇಶದಲ್ಲೆ ಪ್ರಥಮ ಸ್ಥಾನಕ್ಕೆ ಎರಿಸಿರುವುದೇ ಬಿ.ಜೆ.ಪಿ.ಯ ನಾಲ್ಕು ವರ್ಷದ ಸಾಧನೆ.

ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಪ್ರಧಾನ ವಿರೋಧ ಪಕ್ಷದ ಸ್ಥಾನದಲ್ಲಿರುವ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷಗಳು ತಮ್ಮ ಎಡಬಿಡಂಗಿ ಧೋರಣೆಗಳಿಂದ ಮತ್ತು ನೈತಿಕ ಶಕ್ತಿಯನ್ನು ಕಳೆದುಕೊಂಡಿರುವ ಕಾರಣದಿಂದ ಭ್ರಷ್ಟ ಬಿ.ಜೆ.ಪಿ. ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಜನತೆಯನ್ನು ಅಣಿನೆರೆಸಿ ಜನಾಂದೋಲನಗಳನ್ನು ರೂಪಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ. ಕಾಂಗ್ರೆಸ್ ಪಕ್ಷ ಬಿ.ಜೆ.ಪಿ.ಯ ಭ್ರಷ್ಟತೆಯ ವಿರುದ್ಧ ಹೋರಾಟ ಮಾಡುವ ನೈತಿಕ ಶಕ್ತಿ ಕಳೆದುಕೊಂಡಿದೆ. ಕಾರಣ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವು ಕೂಡ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದೆ. ತನ್ನ ಅಂಗ ಪಕ್ಷಗಳ ಮಂತ್ರಿಗಳು ಮತ್ತು ಕಾಂಗ್ರೆಸ್ ಪಕ್ಷದ ಸಂಸದರೂ ಸಹಾ ಜೈಲುಪಾಲಾಗಿದ್ದಾರೆ. ದೇಶದ ಲಕ್ಷಾಂತರ ಕೋಟಿ ರೂಗಳ ಸಂಪತ್ತನ್ನು ಲೂಟಿ ಹೊಡೆಯುವುದರಲ್ಲಿ ಕಾಂಗ್ರೆಸ್ ಶಾಮೀಲಾಗಿದೆ ಮತ್ತು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರವು ಸತತವಾಗಿ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಅದು ಅತ್ಯಂತ ಅಪಖ್ಯಾತಿಗೆ ಒಳಗಾಗಿದೆ. ಹಾಗಾಗಿ ರಾಜ್ಯದ ಕಾಂಗ್ರೆಸ್ ಪಕ್ಷಕ್ಕೆ ಬಿ.ಜೆ.ಪಿ. ವಿರುದ್ಧ ಹೋರಾಟಕ್ಕೆ ನೈತಿಕ ಶಕ್ತಿ ಇಲ್ಲದೆ, ಒಂದು ರೀತಿಯಲ್ಲಿ ನಿಷ್ಕ್ರಿಯತೆಯೆಂಬ ಕೀಳರಿಮೆಯಿಂದ ಲಕ್ವಾ ಹೊಡೆದ ರೀತಿಯಲ್ಲಿ ನಿಂತಿದೆ. ಇನ್ನು ಜೆ.ಡಿ.(ಎಸ್) ತನ್ನ ಎಡಬಿಡಂಗಿ ರಾಜಕೀಯ ಧೋರಣೆಗಳಿಂದ ಮತ್ತು ಬರೀ ಮಾಧ್ಯಮಗಳ ಮುಖಾಂತರ ಬಿ.ಜೆ.ಪಿ.ಯ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ನಡೆಸಲು ಹೊರಟು ತಾನೂ ಭ್ರಷ್ಟಾಚಾರದ ಆಪಾದನೆಗಳನ್ನು ಹೊತ್ತು ನಿಂತಿದೆ. ಜೆ.ಡಿ.(ಎಸ್) ಎಂದೂ ಭ್ರಷ್ಟಾಚಾರದ ವಿರುದ್ಧ ಮತ್ತು ರಾಜ್ಯದ ಜನತೆಯ ಸಮಸ್ಯೆಗಳನ್ನು ತೆಗೆದುಕೊಂಡು ಜನಪರ ಹೋರಾಟಗಳನ್ನು ರೂಪಿಸಲು ಪ್ರಜ್ಞಾಪೂರ್ವಕವಾಗಿ ನಿರಾಕರಿಸುತ್ತಾ ಬಂದಿದೆ. ಇದರಿಂದಾಗಿ ರಾಜ್ಯದ ಜನರನ್ನು ಇಂದು ಒಂದು ರೀತಿಯ ರಾಜಕೀಯ ಭ್ರಮನಿರಸನ ಕಾಡುತ್ತಿದೆ.

ಈ ಹಿನ್ನಲೆಯಲ್ಲಿ ಇದೇ ಜನವರಿ 8 ರಿಂದ 11, 2012 ರವರೆವಿಗೂ ಚಿಕ್ಕಬಳ್ಳಾಪುರದಲ್ಲಿ ನಡೆದ ಸಿ.ಪಿ.ಐ(ಎಂ) ಪಕ್ಷದ 20ನೇ ರಾಜ್ಯ ಸಮ್ಮೇಳನವು ಅತ್ಯಂತ ರಾಜಕೀಯ ಮಹತ್ವವನ್ನು ಪಡೆದುಕೊಂಡಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸಿ.ಪಿ.ಐ(ಎಂ) ಪಕ್ಷವು ರಾಜ್ಯವನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳನ್ನು, ಬಹಳ ಮುಖ್ಯವಾಗಿ ಬಡವರ ಮತ್ತು ಅಸಂಘಟಿತ ಕಾರ್ಮಿಕ ಸಮಸ್ಯೆಗಳನ್ನು ತೆಗೆದುಕೊಂಡು ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ತನ್ನ ಸೀಮಿತ ರಾಜಕೀಯ ಸಂಘಟನಾ ಶಕ್ತಿಯಿಂದಲೇ ಕೇಂದ್ರ ಸರ್ಕಾರದ ದೇಶ ವಿರೋಧಿ ಮತ್ತು ಜನವಿರೋಧಿ ನೀತಿಗಳ ವಿರುದ್ಧ ರಾಜ್ಯ ಸರ್ಕಾರದ ಜನ ವಿರೋದಿ ನೀತಿ ಮತ್ತು ಕೋಮುವಾದಿ ಧೋರಣೆಗಳ ವಿರುದ್ಧ ಸತತ

ಪುಟ 14ಕ್ಕೆ



ವರದಿ

ಶಾಶ್ವತ ನೀರಾವರಿ ಯೋಜನೆಗಳಿಗೆ ಆಗ್ರಹ

ಪ್ರಕೃತಿಯಲ್ಲಾಗುತ್ತಿರುವ ಬದಲಾವಣೆಯಿಂದಾಗಿ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗಿ ಕೆರೆಗಳು ತುಂಬುವುದು ಅಪರೂಪವಾಗಿದೆ. ಮತ್ತು ಬಾವಿಗಳು ಬತ್ತಿಹೋಗತೊಡಗಿವೆ ಹೀಗಾಗಿ ನೀರಿಗಾಗಿ ಅಂತರ್ಜಲವನ್ನು ಅವಲಂಬಿಸುವುದು ಅನಿವಾರ್ಯವಾಗಿದೆ. 1980ರ ನಂತರ ಕೃಷಿಗಾಗಿ ಕೊಳವೆ ಬಾವಿಗಳನ್ನು ಕೊರೆಯುವುದು ಪ್ರಾರಂಭವಾಯಿತು. ಈಗ 500 ರಿಂದ 1000 ಅಡಿಗಳು ಆಳಕ್ಕೆ ಹೋದರು ನೀರು ಸಿಗದಂತಹ ಪರಿಸ್ಥಿತಿ ಉಂಟಾಗಿದೆ. 1985ರಲ್ಲಿ ಸರ್ಕಾರ ನಡೆಸಿರುವ ಉಪಗ್ರಹ ಸರ್ವೆ ವರದಿಯ ಪ್ರಕಾರ ಈಗ ಕೊಳವೆ ಬಾವಿಗಳಿಂದ ತೆಗೆಯುತ್ತಿರುವ ಪ್ರಮಾಣದಲ್ಲಿ ನೀರನ್ನು ಇನ್ನು 20 ವರ್ಷಗಳಲ್ಲಿ ತೆಗೆದರೆ ಮಧ್ಯ ಕರ್ನಾಟಕದ 8 ಜಿಲ್ಲೆಗಳು ಮರುಭೂಮಿಯಾಗಲಿವೆ ಎಂದು ಈ ವರದಿ ತಿಳಿಸಿದೆ.

ಮಧ್ಯ ಕರ್ನಾಟಕದ 8 ಜಿಲ್ಲೆಗಳು ನಿರಂತರವಾಗಿ ಬರಗಾಲಕ್ಕೆ ಸಿಲುಕಿ ಮಳೆ ಪ್ರಮಾಣ ನಿರಂತರವಾಗಿ ಕಡಿಮೆ ಆಗುತ್ತಿರುವ ಕಾರಣ ಅಂತರ್ಜಲ ಕುಸಿದು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ಬಂದಿದೆ. ನೀರಾವರಿ ಸೌಲಭ್ಯವಿಲ್ಲದೆ ಒಂದು ಕಡೆ ಕೃಷಿ ನಾಶವಾಗುತ್ತಿದ್ದರೆ ಇನ್ನೊಂದೆಡೆ ಕುಡಿಯುವ ನೀರಿನಲ್ಲಿ ವಿಷಪೂರಿತ ಲವಣಗಳು ಸೇರಿಕೊಂಡು ಜನ ರೋಗ ಪೀಡಿತರಾಗುತ್ತಿದ್ದಾರೆ. ಕೃಷಿ ಅವಸಾನದಿಂದ ಜನರು ಆರ್ಥಿಕವಾಗಿ ದಿವಾಳಿಯಾಗುತ್ತಿದ್ದಾರೆ, ಕುಡಿಯುವ ನೀರಿಲ್ಲದೆ ಜನರ ಬದುಕು ಗಂಭೀರ ಅಪಾಯಕ್ಕೆ ಸಿಕ್ಕಿರುವ ಇಂತಹ ವಿಷಮ ಪರಿಸ್ಥಿತಿಯಲ್ಲಿ ಈ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ಶಾಶ್ವತ ಪರಿಹಾರ ಕಾಣಿಸಬೇಕಾಗಿದೆ. ಈ ಪ್ರದೇಶದ 8 ಜಿಲ್ಲೆಗಳಿಗೆ ಡಾ॥ ಪರಮಶಿವಯ್ಯ ವರದಿ ಅನುಷ್ಠಾನ ಮಾಡಿದರೆ ನೀರಿನ ಸಮಸ್ಯೆ ಪರಿಹಾರವಾಗಲಿದೆ. ಈ ನಿಟ್ಟಿನಲ್ಲಿ 2002ರಲ್ಲಿ ಮೊದಲಿಗೆ ಕೋಲಾರ ಜಿಲ್ಲೆಯಲ್ಲಿ ನಮ್ಮ ಪಕ್ಷವು ಸಾಮೂಹಿಕ ಸಂಘಟನೆಗಳ ಮೂಲಕ ಜನಾಂದೋಲನ ರೂಪಿಸಿದ ಪರಿಣಾಮವಾಗಿ ಸಿಪಿಐ(ಎಂ) ನೇತೃತ್ವದಲ್ಲಿ ಕೋಲಾರ ಜಿಲ್ಲಾ ಶಾಶ್ವತ ನೀರಾವರಿ ಹೋರಾಟ ಸಮಿತಿ, ಅಸ್ತಿತ್ವಕ್ಕೆ ಬಂತು. ಈ ಹೋರಾಟ ಸಮಿತಿಯ ಹೋರಾಟಗಳು ನಡೆಸಿ ಜನ ಜಾಗೃತಿಗೊಳಿಸಲಾಯಿತು. ಐತಿಹಾಸಿಕ 15 ಸಾವಿರ ಜನರ ವಿಧಾನಸೌಧಕ್ಕೆ ಪಾದಯಾತ್ರೆಯ ಮೂಲಕ ಮುತ್ತಿಗೆ ಹಾಕಿ ಸರ್ಕಾರದ ಮೇಲೆ ಒತ್ತಡ ಹೇರಲಾಯಿತು. ಸರ್ಕಾರ ಒತ್ತಡಕ್ಕೆ ಮಣಿದು ಡಾ॥ ಪರಮಶಿವಯ್ಯ ವರದಿಯನ್ನು ತಾತ್ವಿಕವಾಗಿ ಒಪ್ಪಿ ಇಸ್ರೋ ಸಂಸ್ಥೆಗೆ ಸೆಟ್‌ಲೈಟ್ ಸರ್ವೆಗೆ ಒಪ್ಪಿಸಿತು. ಅಂದು ನೀರಾವರಿ ಹೋರಾಟವನ್ನು ಅವಹೇಳನ ಮಾಡಿದ ರಾಜಕಾರಣಿಗಳು ಮತ್ತು ಸಂಘ ಸಂಸ್ಥೆಗಳು ಈಗ ಅವರ ರಾಜಕಾರಣಕ್ಕಾಗಿ ಶಾಶ್ವತ ನೀರಾವರಿ ಹೋರಾಟದ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಕೋಲಾರ – ಚಿಕ್ಕಬಳ್ಳಾಪುರ ಜಿಲ್ಲೆಗಳ ಸರ್ವಜನ ನೀರಾವರಿ ಹೋರಾಟಕ್ಕೆ ಮುಂಚೂಣಿಯಲ್ಲಿದ್ದಾರೆ. ಈ ಹೋರಾಟವು



ದಕ್ಷಿಣ ಕರ್ನಾಟಕದ ಉಳಿದ 6 ಜಿಲ್ಲೆಗಳಿಗೆ ಹರಡಬೇಕಾಗಿದೆ. ಸಿಪಿಐ(ಎಂ) ಈ ಹೋರಾಟಕ್ಕೆ ಮುಂಚೂಣಿಯಲ್ಲಿ ನಿಂತು ಜನರನ್ನು ಅಣಿನೆರೆಸಿ ಜನಾಂದೋಲನವನ್ನು ರೂಪಿಸಬೇಕಾಗಿದೆ. ರಾಜ್ಯದ ಒಟ್ಟು ಜಲಸಂಪನ್ಮೂಲದಲ್ಲಿ ಪಶ್ಚಿಮ ಘಟ್ಟದಲ್ಲಿ ಹರಿಯುವ ನೀರಿನ ಪಾಲು 57.51ರಷ್ಟಾಗಿದೆ.

ಡಾ॥ ಪರಮಶಿವಯ್ಯ ವರದಿ ಪ್ರಕಾರ ಮಳೆ ಬಂದಾಗ ಪಶ್ಚಿಮಘಟ್ಟಗಳಲ್ಲಿ ಬಿದ್ದು ಪಶ್ಚಿಮಾಭಿಮುಖವಾಗಿ ನೀರು ನೇತ್ರಾವತಿ ಮತ್ತು ಇತರ ನದಿಗಳ ಮೂಲಕ ಅರಬ್ಬಿ ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುವ 1998.3ಟಿ.ಎಂ.ಸಿ ನೀರಿನಲ್ಲಿ 168.46 ಟಿ.ಎಂ.ಸಿ. ನೀರನ್ನು ಗಾಲ್ಯಾಂಡ್ ಕೆನಾಲ್‌ಗಳ ಮೂಲಕ ಪೂರ್ವಕ್ಕೆ ಹರಿಸಿದರೆ ನಿರಂತರ ಬರಗಾಲಕ್ಕೆ ತುತ್ತಾಗುತ್ತಿರುವ ಮಧ್ಯಕರ್ನಾಟಕದ 8 ಜಿಲ್ಲೆಗಳಿಗೆ ಮತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸಹ ಒದಗಿಸಬಹುದು. ಆ 8 ಜಿಲ್ಲೆಗಳು ಯಾವುವೆಂದರೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕುಗಳಿಗೆ



ಕುಡಿಯುವ ನೀರು ಮತ್ತು ಅಂತರ್ಜಲ ಹೆಚ್ಚಿಸುವುದರೊಂದಿಗೆ ಆ ನೀರನ್ನು ಕೃಷಿಗೂ ಉಪಯೋಗಿಸಬಹುದಾಗಿದೆ. ಅದೇ ರೀತಿಯಲ್ಲಿ ಈ ವರದಿ ಪ್ರಕಾರ ಕೃಷ್ಣ ಕಣಿವೆಯ ಭದ್ರಾಮೇಲ್ದಂಡೆಯಿಂದ ಲಭ್ಯವಿರುವ 76.39 ಟಿ.ಎಂ.ಸಿ. ನೀರನ್ನು ಪಶ್ಚಿಮ ಘಟ್ಟಗಳಲ್ಲಿ ಗಾಲ್ಯಾಂಡ್ ಕೆನಾಲ್‌ಗಳ ಮೂಲಕ ದೊರೆಯುವ 168.46 ಟಿ.ಎಂ.ಸಿ. ನೀರಿಗೆ ಸೇರಿಸಿ 2 ಭಾಗಗಳಾಗಿ ಮಾಡಿ ಅಂದರೆ ಪೂರ್ವ ಮತ್ತು ಉತ್ತರ ಪೂರ್ವ ಭಾಗಗಳಿಂದ ಬರಪೀಡಿತ ಜಿಲ್ಲೆಗಳಿಗೆ ಹರಿಸುವ ಯೋಜನೆಗಳನ್ನು ಕೊಟ್ಟಿದ್ದಾರೆ. ಆದರೆ ಈ ವರದಿಯನ್ನು ಸಮಗ್ರವಾಗಿ ಅಧ್ಯಯನ ನಡೆಸಿ ಜಾರಿ ಮಾಡಲು ರಾಜ್ಯ ಸರ್ಕಾರಗಳು ಮೀನಾ-ಮೇಷ ಎಣಿಸುತ್ತಿವೆ. ಈಗ ವರದಿಯನ್ನು ದಿಕ್ಕುತಪ್ಪಿಸಲು ಕೇಂದ್ರ ಮಂತ್ರಿಗಳಾದ ಎಂ.ವೀರಪ್ಪಮೊಯಿಲಿ ಹಾಗೂ ರಾಜ್ಯ ಸರ್ಕಾರದ ಭಾರಿ ನೀರಾ ಸಚಿವರಾದ ಬಸವರಾಜ ಬೊಮ್ಮಾಯಿಯವರು ಎತ್ತಿನ ಹೊಳೆ ಯೋಜನೆ ರೂಪಿಸಿದ್ದು ಇದು ಈ ಅಗಾಧ ಸಮಸ್ಯೆಗೆ ಪರಿಹಾರವಲ್ಲ. ಆದ್ದರಿಂದ ಇವರುಗಳು ಮಧ್ಯ ಕರ್ನಾಟಕ ಜಿಲ್ಲೆಗಳನ್ನು ಶಾಶ್ವತವಾಗಿ ಮರಳುಗಾಡು ಮಾಡಲು ಹೊರಟಿದ್ದಾರೆ. ಸಿಪಿಐ(ಎಂ) ಪಕ್ಷ 8 ಜಿಲ್ಲೆಗಳ ಜನರನ್ನು ಅಣಿನೆರಿಸಿ ಬಲಿಷ್ಟ ಚಳುವಳಿಯನ್ನು ರೂಪಿಬೇಕಾಗಿದೆ.

ಈ ಯೋಜನೆಯ ಜಾರಿಯ ಕುರಿತು ಕಾರವಳಿ ಮತ್ತು ಮಲೆನಾ ಜಿಲ್ಲೆಗಳ ಜನರಲ್ಲಿ ಅನೇಕ ಅತಂಕಗಳು ಇವೆ. ರಾಜ್ಯ ಸರ್ಕಾರ ಇವುಗಳನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದಲ್ಲಿ ಬೇಸಿಗೆಯ ಸಮಯದಲ್ಲಿ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗುತ್ತಿದೆ. ಇದನ್ನು ಡಾ॥ ಪರಮಶಿವಯ್ಯ ವರದಿಯ 6ನೇ ಪ್ರಾಜೆಕ್ಟ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರದೇಶಗಳಿಗೆ ಕುಡಿಯುವ ನೀರಿನ ನಿರಂತ ಲಭ್ಯತೆಯನ್ನು ಖಾತ್ರಿಗೊಳಿಸಲು ಮತ್ತು ಪ್ರಾಜೆಕ್ಟ್ 7 ರಲ್ಲಿ ವಿವರಿಸಿದಂತೆ ವಾರಾಹಿ, ಶರಾವತಿ ಮತ್ತು ಕಾಳಿನದಿ ಜಲವಿದ್ಯುತ್ ಯೋಜನೆಗಳ ಟೇಲ್‌ರೇಸ್ ನೀರನ್ನು ಸೂ ಕಾಲುವೆಗಳ ಮೂಲಕ ಹರಿಸಿ ಕರಾವಳಿ ಜಿಲ್ಲೆಗಳ ಕೃಷಿ ಭೂಮಿಗಳಿಗೆ ಒದಗಿಸಿಕೊಡಬೇಕೆಂದು 20ನೇ ಕರ್ನಾಟಕ ರಾಜ್ಯ ಸಮ್ಮೇಳನ ನಿರ್ಣಯವನ್ನು ಅಂಗೀಕರಿಸುತ್ತದೆ.

ಲೋಕಾಯುಕ್ತ: ವಿಳಂಬ, ಜಗ್ಗಾಟದ ಹಿಂದ

ಪುಟ 3 ರಿಂದ

ಹಾಕುವ ಹುನ್ನಾರದಿಂದಾಗಿಯೇ ನೇಮಕ ವಿಳಂಬವಾಗುತ್ತಿರುವುದು. ಇದನ್ನೇ ಯಡಿಯೂರಪ್ಪ ಖುರ್ಚಿ ಖಾಲಿ ಮಾಡುವಾಗ ಕೊಟ್ಟ ಭರವಸೆ ಈಡೇರಿಸಿರೆಂದು ಒತ್ತಾಯಿಸುತ್ತಿರುವುದು. ಈ ಎಲ್ಲಾ ಷಡ್ಯಂತ್ರಗಳ ಪರಿಣಾಮವೇ ಸಂವಿಧಾನಾತ್ಮಕ ಈ ಸಂಸ್ಥೆ ನಿಸ್ತೇಜನವಾಗುತ್ತಿರುವುದು.

ರಾಜ್ಯ ಸರಕಾರದ ಗುಪ್ತ ಅಜೆಂಡಾಗಳು, ರಾಜ್ಯಪಾಲರ ಬಿಗಿ ನಿಲುವು ಮತ್ತು ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿ ಎಸ್ ಗಳ ಹಿತಾಸಕ್ತಿಗಳು ಹಾಗೂ ರಾಜಕೀಯ ಇಚ್ಛಾ ಹೀನತೆಯು ಅರಾಜಕತೆ ವಾತಾವರಣ ಸೃಷ್ಟಿ ಈ ಮೂಲಕ ಬಿಜೆಪಿಂು-ಭೂ-ಗಾ ಮಾಫಿಯಾಗಳ ರಕ್ಷಣೆಗೆ ಪೂರ್ಣ ಅವಕಾ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಕಳಂಕವಿಲ್ಲ ನಿಷ್ಪಕ್ಷಪಾತದಿಂದ ಸಂವಿಧಾನ ಎತ್ತಿ ಹಿಡಿಯು ,ಸಮರ್ಥ ಲೋಕಾಯುಕ್ತರನ್ನು ನೇಮಿಸುವ ಜನತೆ ಆಗ್ರಹಹಿಸಬೇಕು. ಇಂತಹವ ಇಲ್ಲವೆಂದೇನಲ್ಲ. ಇಲ್ಲದಿರುವುದು ಆಯ್ಕೆ ಇಚ್ಚಾಶಕ್ತಿ.

ಆರ್ಥಿಕ ನೀತಿಗಳ ದಿಕ್ಪಥದಲ್ಲಿ ತೀವ್ರವಾದ ಪಲ್ಲಟವನ್ನು ತರದೆ, ಅವು ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವವರ ಪರವಾಗಿರುವ ಬದಲು ಜನಗಳ ಕಲ್ಯಾಣದತ್ತ ತಿರುಗಿಸದೇ ಹೋದರೆ, ಭಾರತೀಯ ಗಣತಂತ್ರದ ಸಂವಿಧಾನ 62 ವರ್ಷಗಳ ಹಿಂದೆ ಭಾರತೀಯ ಜನತೆಗೆ ನೀಡಿದ ವಚನಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂಬುದು ಸುಸ್ಪಷ್ಟ. ನವ-ಉದಾರವಾದಿ ನೀತಿಗಳು ಉದ್ದೇಶಪೂರ್ವಕವಾಗಿ ನಿರ್ಮಿಸಿರುವ ಅಸಮತೋಲನವನ್ನು ಸರಿಪಡಿಸಬೇಕಾಗಿದೆ. ಅದು ಬಲಿಷ್ಟ ಜನಾಂದೋಲನಗಳಿಂದ, ಜನರ ಹೋರಾಟಗಳ ಶಕ್ತಿವರ್ಧನೆಯಿಂದ ಮಾತ್ರವೇ ಸಾಧ್ಯ.

ಜನತೆಯ ಹಕ್ಕುಗಳೆಲ್ಲ ವಾಸ್ತವಗೊಂಡಿರುವ ಉತ್ತಮ ಭಾರತಕ್ಕಾಗಿ ಜನಾಂದೋಲನ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಜನವರಿ 27, 2012 ರ ಸಂಚಿಕೆಯ ಸಂಪಾದಕೀಯದಿಂದ


ಇಂಡಿಯಾ, ಅರ್ಥಾತ್ ಭಾರತ, ಗಣತಂತ್ರವಾಗಿ 62 ವರ್ಷಗಳು ಪೂರೈಸಿವೆ.

ಎರಡು ವರ್ಷಗಳ ಹಿಂದೆ, ಇಂತಹುದೇ ಸಂದರ್ಭದಲ್ಲಿ, 60 ವರ್ಷಗಳನ್ನು ಪೂರೈಸುವುದು ಅಂದರೆ ಷಷ್ಠಿ ಪೂರ್ತಿ, ಒಂದು ಹೊಸ ಬದುಕಿನ ಆರಂಭದ ಸಂಕೇತ ಎಂಬ ಭಾರತ ಮತ್ತು ಇತರ ಪ್ರಾಚೀನ ನಾಗರಿಕತೆಗಳ ಲೋಕಜ್ಞಾನವನ್ನು ನೆನಪಿಸಿಕೊಳ್ಳುತ್ತ ಒಂದು ಉತ್ತಮ ಭಾರತದ ನಿರ್ಮಾಣ ಮಾಡಬೇಕೆಂಬ ನಮ್ಮ ಜನತೆಯ ಅಪೇಕ್ಷೆಯನ್ನು ಅಭಿವ್ಯಕ್ತಗೊಳಿಸಿದ್ದೆವು.

ದುರದೃಷ್ಟವಶಾತ್, ನಂತರದ ಈ ಎರಡು ವರ್ಷಗಳೂ ಭಾರತದ ಬಹುಪಾಲು ಜನತೆಗೆ ಹಳೆಯ ಬದುಕಿನ ಮುಂದುವರಿಕೆಯಾಗಿಯೇ ಉಳಿದಿದೆ, ಬದುಕಿನ ಪರಿಸ್ಥಿತಿಗಳು ಇನ್ನೂ ಹದಗೆಟ್ಟಿವೆ. ಎಲ್ಲ ಆವಶ್ಯಕ ಸರಕುಗಳ ಬೆಲೆಗಳಲ್ಲಿ ನಿರಂತರ ಹೆಚ್ಚಳ ಒಂದು ಆರೋಗ್ಯಕರ ಜೀವನಾಧಾರದ ಸೆಲೆಯನ್ನೇ ನುಂಗಿ ಹಾಕುತ್ತಿದೆ. ಆರ್ಥಿಕ ಕಂದರಗಳು ನಿರಂತರವಾಗಿ ಆಳಗೊಳ್ಳುತ್ತಿರುವುದು ಕೆಲವರಿಗೇ ಸೀಮಿತವಾದ ಬೆಳವಣಿಗೆಯನ್ನು ಉಂಟು ಮಾಡುತ್ತಿದೆಯಲ್ಲದೆ, ಜನಗಳ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಹೆಚ್ಚುತ್ತಿರುವ ಅಸಮಾನತೆಗಳೊಂದಿಗೆ ಎಲ್ಲ ಜನಗಳ ಬದುಕಿನ ಮಟ್ಟಗಳೂ ಹೆಚ್ಚುತ್ತಿದ್ದರೆ ಅದು ಬೇರೆ ಮಾತು. ಆದರೆ ಹಾಗೂ ಆಗಿಲ್ಲ. ತದ್ವಿರುದ್ಧವಾಗಿ, ಕಟು ವಾಸ್ತವತೆಯೆಂದರೆ, ಇಂಡಿಯಾ ಮತ್ತು ಭಾರತದ ನಡುವಿನ ಈ ಕಂದರ ಬೆಳೆಯುತ್ತಿರುವುದು ಶ್ರೀಮಂತರ ಸಿರಿಯನ್ನು ಹೆಚ್ಚಿಸಿ ಮತ್ತು ಬಡವರನ್ನು ಇನ್ನಷ್ಟು ದರಿದ್ರರಾಗಿಸುವ ಮೂಲಕ.

ತೆಪ್ಪಗಿರುವ ಸರಕಾರ

ಕಳೆದ ಮೂರು ವಾರಗಳಲ್ಲಿ, ಈ ಅಂಕಣದಲ್ಲಿ ನಾವು ನಮ್ಮ ವಿಶಾಲ ಜನಸಮೂಹಗಳ ಹೆಚ್ಚುತ್ತಿರುವ ಸಂಕಟಮಯ ಸ್ಥಿತಿಗಳ ಬಗ್ಗೆ ವಿವರಿಸಿದ್ದೇವೆ. ತಮಾಷೆಯೆಂದರೆ, ನಮ್ಮ ಜನಗಳ ಅನಾರೋಗ್ಯದ ಪರಿಸ್ಥಿತಿ ಹೇಗೆ ಮುಂದುವರೆಯುತ್ತಿದೆ ಎಂಬುದನ್ನು ಸ್ವತಃ ಪ್ರಧಾನ ಮಂತ್ರಿಗಳೇ ದೇಶದ ಅಪೌಷ್ಟಿಕತೆಯ ಸ್ಥಿತಿ—ಗತಿಗಳ ಕುರಿತಾದ ಒಂದು ವರದಿಯನ್ನು ಬಿಡುಗಡೆ ಮಾಡುತ್ತಾ ಸಾರಾಂಶ ರೂಪದಲ್ಲಿ ಹೇಳಿದ್ದಾರೆ- ಇದೊಂದು 'ರಾಷ್ಟ್ರೀಯ ಅವಮಾನ' ಎಂದು. ಆದರೂ ಆ ಬಗ್ಗೆ ಮಾಡಿರುವುದು ಏನೂ ಇಲ್ಲ. ಇನ್ನೂ ಕೆಟ್ಟ ಸಂಗತಿಯೆಂದರೆ ಸರಕಾರ ಯಾವುದೇ ರೀತಿಯಲ್ಲಿ ಮಧ್ಯಪ್ರವೇಶಿಸದೆ ಪರಿಸ್ಥಿತಿಗಳು ಹೇಗಿವೆಯೋ ಹಾಗೆಯೇ ಇರಲಿ ಎಂದು ತೆಪ್ಪಗಿದೆ. ಆರೋಗ್ಯ ಮತ್ತು ಶಿಕ್ಷಣ ಹೆಚ್ಚೆಚ್ಚಾಗಿ ಸಾಮಾನ್ಯ ಭಾರತೀಯರ ಕೈಗೆಟುಕದಂತಾಗುತ್ತಿವೆ. ಸಾರ್ವಜನಿಕ ಆರೋಗ್ಯದ ಮೇಲೆ ಮಾಡುತ್ತಿರುವ ಖರ್ಚು ಈಗಲೂ ಜಿಡಿಪಿಯ ಒಂದು ಶೇಕಡಾಕ್ಕಿಂತ ಕೆಳಗೆಯೇ ಇದೆ. ನಾಯಿಕೊಡೆಗಳಂತೆ ಹಬ್ಬುತ್ತಿರುವ ಖಾಸಗಿ ಆರೋಗ್ಯ ಕೇಂದ್ರಗಳು ಶ್ರೀಮಂತರ ಸೇವೆಗೆಂದೇ ಟೊಂಕ ಕಟ್ಟಿವೆ.



ಅದೇ ರೀತಿ ಶಿಕ್ಷಣ ಸಂಪೂರ್ಣವಾಗಿ ಖಾಸಗೀಕರಣಗೊಂಡಿದೆ, ವ್ಯಾಪಾರೀಕರಣಕ್ಕೆ ಒಳಗಾಗಿದೆ. ಸರಕಾರೀ ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂಬ ವರದಿಗಳು ವ್ಯಾಪಕವಾಗಿವೆ. ನಮ್ಮ ಜಿಡಿಪಿಯ ಕನಿಷ್ಟ 6 ಶೇ.ವನ್ನು ಶಿಕ್ಷಣಕ್ಕೆ ಮೀಸಲಿಡಬೇಕು ಎಂದು ಸರಕಾರವೇ ಒಪ್ಪಿಕೊಂಡಿದ್ದರೂ, ಈಗಲೂ ಅದರ ಅರ್ಧದ ಮಟ್ಟಕ್ಕೂ ನಾವು ಬಂದಿಲ್ಲ. ಸಂಸತ್ತು 6ರಿಂದ 14 ವರ್ಷಗಳ ನಡುವಿನ ವಯೋಮಾನದ ಎಲ್ಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ಕೊಡಲು ಸಂವಿಧಾನವನ್ನು ತಿದ್ದುಪಡಿ ಮಾಡಿದರೂ. ಈ ಶೋಚನೀಯ ಪರಿಸ್ಥಿತಿ ಮುಂದುವರೆಯುತ್ತಿದೆ. ಈ ಹಕ್ಕು ನಿಜವಾಗಬೇಕಾದರೆ ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚ ಹೆಚ್ಚಬೇಕಾಗುತ್ತದೆ. ಆದರೆ ಅದನ್ನು ಈಡೇರಿಸುವ ಬದಲು ನಾವು ನಮ್ಮ ಯುವ ಪೀಳಿಗೆಗೆ, ಭಾರತದ ಭವಿಷ್ಯಕ್ಕೆ ಕೊಟ್ಟಿರುವ ಈ ವಚನದಿಂದ ದೂರ ಸರಿಯುತ್ತಿದ್ದೇವೇನೋ ಎಂದನಿಸುತ್ತಿದೆ. ಹಣದ ಕೊರತೆಯೇ ಇದಕ್ಕೆ ಕಾರಣ ಎನ್ನುತ್ತಿದೆ ಸರಕಾರ. ಕೇಂದ್ರ ಸರಕಾರ ತನ್ನ ವಚನದಿಂದ ಹಿಂದೆ ಸರಿಯುತ್ತಿದೆ, ರಾಜ್ಯ ಸರಕಾರಗಳು ಈ ವಚನವನ್ನು ಈಡೇರಿಸಬೇಕೆಂದು ಅವುಗಳ ಮೇಲೆ ಹೊರೆ ಹಾಕುತ್ತಿದೆ. ಈಗಾಗಲೇ ಒಂದು ತೀವ್ರ ಸಂಪನ್ಮೂಲ ಕೊರತೆ ಮುತ್ತಿಕೊಂಡಿರುವಾಗ, ಸಂಪನ್ಮೂಲ ಶೇಖರಣೆಯ ದಾರಿಗಳೂ ಇಲ್ಲದೆ, ಸಹಜವಾಗಿಯೇ, ರಾಜ್ಯ ಸರಕಾರಗಳು ವಚನವನ್ನು ಈಡೇರಿಸಲಾರದ ಸ್ಥಿತಿಯಲ್ಲಿವೆ. ಇದರಿಂದಾಗಿ, ಇತರೆಲ್ಲ ಹಕ್ಕುಗಳಂತೆ ಇದು ಕೂಡ ಈಗಲೂ ಕಾಗದದ ಮೇಲೆಯೇ ಉಳಿದಿದೆ.

ಸಂಪನ್ಮೂಲಗಳ ಕೊರತೆಯಿಲ್ಲ, ಸಂಪನ್ಮೂಲಗಳ ಲೂಟಿಯಾಗಿದೆ

ಪ್ರತಿಯೊಂದು ಮಗು ಶಾಲೆಯಲ್ಲಿರುವಂತೆ ಮಾಡಲು ಎಷ್ಟು ಖರ್ಚಾಗುತ್ತದೆ? ಎನ್‌ಸಿಇಆರ್‌ಟಿ(ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮಂಡಳಿ)ಯ ಅಂದಾಜಿನ ಪ್ರಕಾರ ಈ ಗುರಿಯನ್ನು ತಲುಪಲು ಐದು ವರ್ಷಗಳ ಕಾಲ ಪ್ರತಿ ವರ್ಷ ರೂ.35,000 ಖರ್ಚು ಮಾಡಬೇಕಾಗುತ್ತದೆ. ಹೊಸ ಶಾಲೆಗಳನ್ನು ಕಟ್ಟಲು, ಲಕ್ಷಾಂತರ ಹೊಸ ಶಿಕ್ಷಕರ ನೇಮಕಕ್ಕೆ, ಮಧ್ಯಾಹ್ನದ ಊಟ, ಪಠ್ಯಪುಸ್ತಕಗಳು ಮುಂತಾದವುಗಳಿಗೆ ಐದು ವರ್ಷಗಳು ಬೇಕಾಗುತ್ತದೆ. ಒಟ್ಟು ಸೇರಿಸಿದರೆ, ಐದು ವರ್ಷಗಳಿಗೆ ರೂ.1,75,000 ಕೋಟಿ ಆಗುತ್ತದೆ. ಇದು 2ಜಿ ತರಂಗಾಂತರ ಹಗರಣದಲ್ಲಿ ಲೂಟಿ ಮಾಡಿದ ಹಣಕ್ಕಿಂತ ಒಂದು ಸಾವಿರ ಕೋಟಿಯಷ್ಟು ಕಡಿಮೆ!

ಇದೇ ರೀತಿ ನಮ್ಮ ಜನಗಳಿಗೆ ಆಹಾರ ಭದ್ರತೆಯನ್ನು ಒದಗಿಸುವ ವಚನವೂ ಕಾಗದದ ಮೇಲೆಯೇ ಉಳಿದಿದೆ. ದೇಶದ ಎಲ್ಲ ಕುಟುಂಬಗಳಿಗೆ (ಎಪಿಎಲ್+ಬಿಪಿಎಲ್) ಕೆ.ಜಿ.ಗೆ 3ರೂ. ಲೆಕ್ಕದಲ್ಲಿ(ಸಿಪಿಐ(ಎಂ) 2ರೂ. ದರದಲ್ಲಿ ಕೊಡಿ ಎನ್ನುತ್ತಿದೆ) 35 ಕೆ.ಜಿ. ಆಹಾರ ಧಾನ್ಯಗಳನ್ನು ಕೊಡಲು ಪ್ರತಿವರ್ಷ ಸರಕಾರೀ ಖಜಾನೆಯಿಂದ ಇನ್ನೂ 88,000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದು 2ಜಿ ಹಗರಣದಲ್ಲಿ ನುಂಗಿ ಹಾಕಿದ ಹಣದ ಅರ್ಧದಷ್ಟು!

ಜನಗಳಿಗೆ ಕೊಟ್ಟ ವಚನಗಳನ್ನು ಈಡೇರಿಸಲು, ಅವರ ಜೀವನ ಮಟ್ಟವನ್ನು ಎತ್ತರಿಸಲು ಭಾರತದ ಬಳಿ ಸಂಪನ್ಮೂಲಗಳಿಲ್ಲ ಎಂದೇನೂ ಅಲ್ಲ. ಬದಲಿಗೆ, ಭಾರತದ ಸಂಪನ್ಮೂಲಗಳನ್ನು ಇಷ್ಟೊಂದು ತಲ್ಲಣಕಾರೀ ರೀತಿಗಳಲ್ಲಿ ಲೂಟಿ ಹೊಡೆಯಲು ನವ-ಉದಾರವಾದಿ ನೀತಿಗಳು ಅವಕಾಶ ಮಾಡಿಕೊಟ್ಟಿವೆ. ಈ ಮಹಾ ಹಗರಣಗಳನ್ನು ತಡೆದಿದ್ದರೆ, ಅಪೌಷ್ಟಿಕತೆ ಇಲ್ಲದ, ವಿದ್ಯಾವಂತ, ಆರೋಗ್ಯಕರ ಯುವಜನರಿರುವ ಒಂದು ಭಾರತಕ್ಕೆ ಬೇಕಾದ, ಸ್ವಾತಂತ್ರ್ಯದ ನಂತರ ಮೊತ್ತಮೊದಲ ಬಾರಿಗೆ ದೇಶವನ್ನು ಹಸಿವಿನ ಶಾಪದಿಂದ ಮುಕ್ತಗೊಳಿಸಲು ಬೇಕಾದಷ್ಟು ಸಂಪನ್ಮೂಲಗಳ ಬಿಡುಗಡೆಯಾಗುತ್ತಿತ್ತು.

ಆದರೂ ಈ ಯುಪಿಎ-2 ಸರಕಾರ ಈಗಲೂ ಸಂಸತ್ತು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸಲು ಒಂದು ಪರಿಣಾಮಕಾರಿ ಲೋಕಪಾಲ ಮತ್ತು ಲೋಕಾಯುಕ್ತ ವ್ಯವಸ್ಥೆಗೆ ಶಾಸನವನ್ನು ರೂಪಿಸಲು ಬಿಡುತ್ತಿಲ್ಲ. ಈ ಪ್ರಕ್ರಿಯೆಯಲ್ಲಿ ಸರಕಾರ, ನಮ್ಮ ಗಣತಂತ್ರದ ಸಂವಿಧಾನ ಜನತೆಗೆ ನೀಡಿದ ವಚನಗಳನ್ನು ಈಡೇರಿಸುವ ತನ್ನ ಹೊಣೆಗಾರಿಕೆಗಳನ್ನು ಜಾರಿಸಿ ಕೊಳ್ಳುತ್ತಿದೆಯಷ್ಟೇ ಅಲ್ಲ. ಅದು ಪ್ರಭುತ್ವದ ಆದ್ಯತೆಗಳಲ್ಲಿ ಒಂದು ಪಲ್ಲಟವನ್ನು ತರುವ ಮೂಲಕ ಈ ಹೊಣೆಗಾರಿಕೆಗಳಿಂದ ನುಣುಚಿಕೊಳ್ಳುತ್ತಿದೆ. ಅದರ ಗಮನ ಈಗ ಲಾಭಗಳನ್ನು ಗರಿಷ್ಟಗೊಳಿಸಲು ಅನುಕೂಲ ಕಲ್ಪಿಸಿಕೊಡುವುದು ಮತ್ತು ನಮ್ಮ ದೇಶದ ಸಂಪನ್ಮೂಲಗಳ ಲೂಟಿಗೆ ಹೊಸ ಮಾರ್ಗಗಳನ್ನು ಸೃಷ್ಟಿಸುವುದರ ಮೇಲೆಯೇ.

ಜನತೆಯ ಹಕ್ಕುಗಳು ವಾಸ್ತವಗೊಳ್ಳಬೇಕು

ಆರ್ಥಿಕ ನೀತಿಗಳ ದಿಕ್ಪಥದಲ್ಲಿ ತೀವ್ರವಾದ ಪಲ್ಲಟವನ್ನು ತರದೆ, ಅವು ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವವರ ಪರವಾಗಿರುವ ಬದಲು ಜನಗಳ ಕಲ್ಯಾಣದತ್ತ ತಿರುಗಿಸದೇ ಹೋದರೆ, ನಮ್ಮ ಸಂವಿಧಾನಿಕ ವಚನಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂಬುದು ಸುಸ್ಪಷ್ಟ. ಶ್ರೀಮಂತರಿಗೆ ಬೃಹತ್ ಪ್ರಮಾಣಗಳ ತೆರಿಗೆ ರಿಯಾಯ್ತಿಗಳನ್ನು ಕೊಡಮಾಡುವ ಬದಲು, ಅವನ್ನು ಸಾರ್ವಜನಿಕ ಹೂಡಿಕೆಗಳಲ್ಲಿ ತೊಡಗಿಸಿದ್ದರೆ, ವಿಶೇಷವಾಗಿ, ಕೃಷಿಯಲ್ಲಿ ತೊಡಗಿಸಿದ್ದರೆ, ಆಗ ಭಾರತೀಯ ಜನತೆಯ ಬಹಳಷ್ಟು ಸಂಕಟಗಳನ್ನು, ನಮ್ಮ ರೈತರ ಅಮಾನವೀಯ ಹತಾಶ ಆತ್ಮಹತ್ಯೆಗಳಿಗೆ ಕಾರಣವಾಗಿರುವ ಸಂಕಟಗಳನ್ನು ತಡೆಯಬಹುದಾಗಿತ್ತು. ಇದರಿಂದ ಬಹುವಾಗಿ ಅಗತ್ಯವಿರುವ ಅಧಿಕ ಉದ್ಯೋಗಗಳನ್ನು ನಿರ್ಮಿಸಿ, ನಮ್ಮ ಜನಗಳ ಬದುಕಿನ

ಪು 13 ಕ್ಕೆ



ಪಂಕ್ತಿ ಬೇಧ ಜಾತಿ ಬೇಧದ ವಿರುದ್ಧ ಉಡುಪಿಯಲ್ಲಿ ಮೊಳಗಿದ ಘರ್ಜನೆ

ಸಾಮಾಜಿಕ ಅಸಮಾನತೆ,ಜಾತಿ ಬೇಧ ಪಂಕ್ತಿಬೇಧ ಕರ್ನಾಟಕದ ರಾಜ್ಯದ ದೇವಾಲಯಗಳು ಮತ್ತು ಮಠಗಳಲ್ಲಿ ವ್ಯಾಪಕವಾಗಿದೆ. ಉಡುಪಿಯ ಶ್ರೀ ಕೃಷ್ಣ ಇವುಗಳೆಲ್ಲದರ ಸಂಕೇತದಂತಿದೆ. ಈ ಅನಿಷ್ಟದ ವಿರುದ್ಧ ಅಲ್ಲಿಂದಲೇ ಹೋರಾಟ ಆರಂಭವಾಗಿದೆ.

ಆರ್.ರಾಮಕೃಷ್ಣ

ಪಂಕ್ತಿ ಬೇಧ ಜಾತಿ ಬೇಧದ ವಿರುದ್ಧ ಉಡುಪಿಯಲ್ಲಿ ಮೊಳಗಿದ ಘರ್ಜನೆ

ಕರ್ನಾಟಕದ ಕರಾವಳಿ ಅಂದರೆ ರಾಜ್ಯದ ಜನರ ಮನಸ್ಸಿನಲ್ಲಿ ಇದೀಗ ತಕ್ಷಣ ಹಾದು ಹೋಗುವ ಚಿತ್ರಗಳಿವು. ಅವು ಇತ್ತೀಚೆಗೆ ಕೆಲವು ಘಟನಾವಳಿಗಳ ಚಿತ್ರಣ; ಉಪ್ಪಿನಂಗಡಿಯಲ್ಲಿ ಕೋಮು ಘರ್ಷಣೆ, ಹಿಂಸಾಚಾರ, ಅಲ್ಪಸಂಖ್ಯಾತ ಮುಸ್ಲಿಮರನ್ನು ತೆಗಳುವ, ನಿಂದಿಸುವ, ಅವರ ವಿರುದ್ಧ ಕೆಂಡಕಾರುವ ಉಗ್ರ ಭೀಕರ ಭಾಷಣಗಳು ಭಿನ್ನ ಜಾತಿಯ ಪ್ರೇಮಿಗಳ ಮೇಲೆ ಹಲ್ಲೆ, ಒಂದೇ ಬಸ್ಸಿನಲ್ಲಿ ಪ್ರಯಾಣಿಸುವ ಭಿನ್ನ ಕೋಮಿನ ಕಾಲೇಜು ಸಹಪಾಠಿಗಳ ಮೇಲೆ ಹಲ್ಲೆ.... ಪಬ್‌ನಲ್ಲಿದ್ದ ಮಹಿಳೆಯರ ಮೇಲೆ ಹಲ್ಲೆ.... ದನ ಸಾಗಿಸುವವರ ಮೇಲೆ ಹಲ್ಲೆ.... ಎಂಜಲೆಲೆ ಮೇಲೆ ಹೊರಳಾಡುವ ಮಡ ಮಡೆ ಸ್ನಾನದ ದೃಶ್ಯಗಳು ಇನ್ನೂ ಏನೇನೊ....





ಆದರೆ 63ನೇ ಗಣರಾಜ್ಯ ದಂದು ಉಡುಪಿಯಲ್ಲಿ ಕಂಡು ಬಂದ ದೃಶ್ಯ ಈ ಮೇಲಿನ ದೃಶ್ಯವಳಿಗಳ ಪಟ್ಟಿಗೆ ಸೇರದ ಮತ್ತೊಂದು ಬಗೆಯ ಚಿತ್ರ. ಅದು ಸಾರ್ವಜನಿಕ ದೇವಾಲಯವೊಂದರಲ್ಲಿ, ಸಾರ್ವಜನಿಕ ಮಠವೊಂದರಲ್ಲಿ, ಜಾತಿ ಬೇಧವನ್ನು ತೋರಿ ಪ್ರತ್ಯೇಕ ಪಂಕ್ತಿಗಳಲ್ಲಿ ಊಟವೆಂಬ ವ್ಯವಸ್ಥೆಯನ್ನು ನಡೆಸಿಕೊಂಡು ಬರುತ್ತಿರುವುದರ ವಿರುದ್ಧ ಪ್ರತಿಭಟನೆ. ಅದೂ ಕೆಂಬಾವುಟದ ಪ್ರತಿಭಟನೆ. ಕರ್ನಾಟಕ ರಾಜ್ಯದ ಉದ್ದಗಲಕ್ಕೂ ದೇಶದ ಉದ್ದಗಲಕ್ಕೂ ಹರಡಿ ಉಡುಪಿಯಂತಹ ಧಾರ್ಮಿಕ ಕೇಂದ್ರದಲ್ಲಿ ಶ್ರೀಕೃಷ್ಣ ಮಠದಂತಹ ಚಾರಿತ್ರಿಕ ಮಠದಲ್ಲಿ ಈಗಲೂ ಅತ್ಯಂತ ವಿಕೃತ ಕೂಪದಲ್ಲಿ ಮೆರೆಯುತ್ತಿರುವಾಗ ಜಾತಿ ಬೇಧ, ಪಂಕ್ತಿ ಬೇಧದ ವಿರುದ್ಧ ಕಮ್ಯುನಿಸ್ಟ್ ಪಕ್ಷದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚಳುವಳಿ.

....ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?
....ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

ಎಂಬ ಕುವೆಂಪು ಅವರ ಕವಿವಾಣಿ ಅಲ್ಲಿ ಮೊಳಗುತ್ತಿತ್ತು. ಅಜ್ಜರ ಕಾಡು ಮೈದಾನದಲ್ಲಿ ರಣಬಿಸಿಲು ಸುಡುತ್ತಿದ್ದರೂ ಕೆಂಬಾವುಟ ಹಿಡಿದವರ ರಣೋತ್ಸಾಹ ಮಾತ್ರ ಬಾಡಿರಲಿಲ್ಲ. ಪ್ರತಿಭಟನಾ ಮೆರವಣಿಗೆ ಮೊದಲು ಅಲ್ಲಿ ಬಹಿರಂಗ ಸಭೆ.

ದೇವಸ್ಥಾನಗಳಲ್ಲಿ ಜಾತೀಯತೆಯ ಆಚರಣೆ, ಪಂಕ್ತಿಬೇಧ ಅತ್ಯಂತ ಖಂಡನಾರ್ಹ. ದೇಶದಲ್ಲಿ ಸಂವಿಧಾನ ಜಾರಿಗೆ ಬಂದು 63 ವರ್ಷ ಕಳೆದರೂ ಇಂತಹ ಪರಿಸ್ಥಿತಿ ಶ್ರೇಣೀಕೃತ ಜಾತಿವ್ಯವಸ್ಥೆ ಮುಂದುವರಿದಿರುವುದು ದುರದೃಷ್ಟಕರ. ಪಟ್ಟಭದ್ರ ಹಿತಾಸಕ್ತಿಗಳು ಸೃಷ್ಟಿಸಿರುವ ಈ ಅನಿಷ್ಟ ಪದ್ಧತಿ ದೇವಸ್ಥಾನದಲ್ಲಿ ಇಂದಿಗೂ ಮುಂದುವರಿದಿರುವುದು ಅಪಮಾನದ ಸಂಗತಿ. ಇದನ್ನು ಯಾವ ನಾಗರಿಕ ಸಮಾಜವೂ ಒಪ್ಪಲು ಸಾಧ್ಯವಿಲ್ಲ....ಸಿಪಿಐ(ಎಂ) ಪಕ್ಷ ಇದನ್ನು ಸಹಿಸುವುದಿಲ್ಲ.... ಎಂದು ಗುಡುಗಿದ್ದು ಮೊದಲಿಗೆ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ.

ದಲಿತ ಕೇರಿಗೆ ಹೋಗಿ ಹಿಂದೂಗಳೆಲ್ಲ ಒಂದು ಎಂದು ಭಾಷಣ ಮಾಡಿ ಬರುವ ಪೇಜಾವರ ಶ್ರೀಗಳೇ ನಿಮ್ಮ ಮಠದಲ್ಲಿ ಯಾಕೆ ಜಾತಿ ಬೇಧ, ಪಂಕ್ತಿ ಬೇಧ ಆಚರಿಸುತ್ತಿದ್ದೀರಿ..? ಎಲ್ಲದಕ್ಕೂ ಪ್ರತಿಕ್ರಿಯೆ ನೀಡುವ ನೀವು ಈ ಬಗ್ಗೆಯೂ ಪ್ರತಿಕ್ರಿಯೆ ಕೊಡಿ ಎಂದು ಆಗ್ರಹಿಸಿದರು. ಕುಕ್ಕೆ ಸುಬ್ರಮಣ್ಯದಲ್ಲಿ ನಡೆಯುತ್ತಿರುವ ಮಡ ಮಡೆ ಸ್ನಾನದ ಬಗ್ಗೆ ಅದರಿಂದ ಚರ್ಮರೋಗ ವಾಸಿಯಾಗುತ್ತದೆ ಎಂದು

ಜನಶಕ್ತಿ
ಕನ್ನಡ ವಾರಪತ್ರಿಕೆ



ಹೇಳಿಕೆ ನೀಡಿದ ಡಾ॥ ವಿ.ಎಸ್.ಆಚಾರ್ಯ ತಮ್ಮ ವೈದ್ಯಕೀಯ ಪದವಿ ವಾಪಾಸ್ ಮಾಡಲಿ, ಇಲ್ಲವೇ ರಾಜ್ಯದ ಎಲ್ಲಾ ಆಸ್ಪತ್ರೆಗಳನ್ನೂ ಮುಚ್ಚಲಿ ಎಂದು ಜಿ.ವಿ.ಶ್ರಿರಾಮರೆಡ್ಡಿ ಸವಾಲೆಸೆದರು. ಉಪ್ಪಿನಂಗಡಿಯಲ್ಲಿ ನಡೆದ ಹಿಂದೂ ಸಮಾಜೋತ್ಸವ ಸಮಾವೇಶದ ಭಾಷಣದಲ್ಲಿ ಬೀದಿ ಗೂಂಡಾಗಳಂತೆ ಮುಸ್ಲಿಂರನ್ನು ದೇಶದ್ರೋಹಿಗಳಿಗೆ, ಅತ್ಯಾಚಾರಿಗಳಿಗೆ, ಡಕಾಯಿತರಿಗೆ ಸಮೀಕರಿಸಿ ಪ್ರಚೋದನಾಕಾರಿಯಾಗಿ ಮಾತನಾಡಿದ ಕಲ್ಲಡ್ಕ ಪ್ರಭಾಕರ ಭಟ್ಟರ ಮೇಲೆ ಬರೀ ಮೊಕದ್ದಮೆ ಹೂಡಿ ಬಂಧಿಸದೇ ಹಾಗೇ ಬಿಟ್ಟಿರುವುದರ ಹಿಂದೆ ಸಮಾಜದ ನೆಮ್ಮದಿ ಕೆಡಿಸುವ ಸಂಘಪರಿವಾರದ ಸಂಚಿದೆ. ಬಿಜೆಪಿ ಸರ್ಕಾರದ ಪಿತೂರಿ ಇದೆ ಎಂದೂ ಅವರು ಖಂಡಿಸಿದರು.

ತಮ್ಮ ಮಠದಲ್ಲಿ ಪಂಕ್ತಿಬೇಧ ನಿವಾರಿಸುವ ಮೂಲಕ ಪೇಜಾವರ ಶ್ರೀಗಳು ರಾಜ್ಯದ ಇತರ ಮಠಗಳಿಗೆ ಮಾದರಿಯಾಗಲಿ. ಮಾರ್ಗದರ್ಶಕರಾಗಲಿ ಎಂದು ಜಿ.ವಿ.ಶ್ರೀರಾಮರೆಡ್ಡಿ ಪೇಜಾವರ ಶ್ರೀಗಳಿಗೆ ಬಹಿರಂಗ ಆಹ್ವಾನ ನೀಡಿದರು.

"....ಆತ್ಮ ಯಾವ ಕುಲ,
ಜೀವ ಯಾವ ಕುಲ..."

ಎಂದು 500 ವರ್ಷಗಳ ಹಿಂದೆಯೇ ಜಾತಿ ತಾರತಮ್ಯವನ್ನು ದಾಸಶ್ರೇಷ್ಠ ಕನಕದಾಸರು ಪ್ರಶ್ನಿಸಿದ್ದು, ಕನಕ ಗೋಪುರ ನಿರ್ಮಿಸಿದ್ದು ಇದೇ ಸೋಂದೆ ಮಠದ ವಾದಿರಾಜರು. ಅವರು ಕನಕದಾಸರಿಗೆ ಆಶ್ರಯವನ್ನು ನೀಡಿದ್ದರು. ಅದೇ ಸೋಂದೆ ಮಠ ಪರ್ಯಾಯದ ನೇತೃತ್ವ ವಹಿಸಿದೆ. ಅದೇಕೆ ಈಗ ಜಾತಿ ಬೇಧ ಪಂಕ್ತಿಬೇಧ ನಿವಾರಿಸಲು ಮುಂದಾಗಬಾರದು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ತೀಕ್ಷ್ಣವಾಗಿ ಪ್ರಶ್ನಿಸಿದರು.

ಸಂವಿಧಾನದ ಸಂವಿಧಾನದ ಪಾರಮ್ಯವೋ – ಶಾಸ್ತ್ರಗಳ ಪಾರಮ್ಯವೋ ಎಂಬ ಪ್ರಶ್ನೆ ಎದುರಾದರೆ ಶಾಸ್ತ್ರಗಳ ಪಾರಮ್ಯವನ್ನೇ ಒಪ್ಪುತ್ತೇನೆಂದು ಪೇಜಾವರ ಶ್ರೀಗಳು ಹೇಳಿದ್ದಾರೆ.

'ನ ಶೂದ್ರಸ್ಯ ವಿದ್ಯಾದದಾತಿ', 'ನ ಶೂದ್ರಸ್ಯ ಮತಿದದಾತಿ'.... ಅಂದರೆ ಯಾವುದೇ ಶೂದ್ರನಿಗೆ ವಿದ್ಯೆ ಕೊಡಬೇಡ, ಯಾವುದೇ ಶೂದ್ರನಿಗೆ ಬುದ್ಧಿ ಕೊಡಬೇಡ ಎನ್ನುವ ಶಾಸ್ತ್ರಗಳು ಸಂವಿಧಾನ ವಿರೋಧಿ. ಇದು ಶಿಕ್ಷಾರ್ಹ ಅಪರಾಧ ಎಂದೂ ಜಿ.ಎನ್.ಖಂಡಿಸಿದರು. ಜಾತಿಬೇಧವಿಲ್ಲದ ಸಹ ಪಂಕ್ತಿ ಬೋಜನಕ್ಕೆ ತಮ್ಮದೇನು ವಿರೋಧವಿಲ್ಲ ಆದರೆ ಸಂಪ್ರದಾಯಸ್ಥ ಬ್ರಾಹ್ಮಣರು ವಿರೋಧಿಸುತ್ತಿದ್ದಾರೆ. ಆದ್ದರಿಂದ ಮುಂಚಿನಿಂದಲೂ ನಡೆದು ಬಂದ ಸಂಪ್ರದಾಯವನ್ನು ಮುಂದುವರೆಸಬೇಕಾಗಿದೆ ಎಂದಿರುವ ಪೇಜಾವರ ಶ್ರೀಗಳ ಹೇಳಿಕೆಯನ್ನು ಖಂಡಿಸಿದ ನಾಗರಾಜ್‌ರವರು ಜಾತಿ ಬೇಧವಿಲ್ಲದೇ ಮಠದಲ್ಲಿ ಊಟ ಬಡಿಸಿ, ಜಾತಿವಾದಿ ಬ್ರಾಹ್ಮಣರು ಊಟಕ್ಕೆ ಬರದಿದ್ದರೆ ಬೇಡ ಎಂದು ಆಗ್ರಹಿಸಿದರು. ರೈತರು. ಕೂಲಿಕಾರರು ದುಡಿಯುವ ಜನರು ಕೊಡುವ ಕೊಡುಗೆ ದಾನದಿಂದ ನಡೆಯುವ ಮಠವು ದುಡಿಯುವ ಜನರನ್ನೇ ತುಚ್ಛೀಕರಿಸಿ ದೂರವಿಡುವ ಕ್ರಮವನ್ನು ಖಂಡಿಸಿದರು.

ಮನುಷ್ಯರನ್ನು ಮನುಷ್ಯರನ್ನಾಗಿ ನೋಡುವುದು ಕಮ್ಯುನಿಸ್ಟರು ಮಾತ್ರ. ಉಳಿದ ಪಕ್ಷಗಳು ಮನುಷ್ಯರನ್ನು ಜಾತಿ, ಮತಗಳ ದೃಷ್ಟಿಯಿಂದ ಹಾಗೂ ಮತ ಬ್ಯಾಂಕುಗಳಾಗಿ ನೋಡುತ್ತವೆ. ಆದ್ದರಿಂದ ಕಮ್ಯುನಿಸ್ಟರು ಮಾತ್ರ ಜಾತಿಬೇಧ, ಪಂಕ್ತಿಬೇಧದ ವಿರುದ್ಧ ಸಮರ್ಪಕ ಹೋರಾಟ ಮಾಡಲು ಸಾಧ್ಯ ಎಂದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯ ಬಿ. ಮಾಧವ ಹೇಳಿದರು.

'ಊರ ಬಾವಿಯ ನೀರು ಯಾರಾದರೂ ತರುವರು ನಿಮ್ಮ ನೀರು ಬ್ಯಾರೆ ಇವೆಯೇನಣ್ಣ'

ಎಂದು 'ಕಡಕೋಳ ಮಡಿವಾಳಪ್ಪ' ಅವರ ತತ್ವಪದ ಉಲ್ಲೇಖಿಸಿ ಜಾತಿ ತಾರತಮ್ಯ ಖಂಡಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕೆ. ನೀಲಾ 'ಸ್ತ್ರೀಯು ಜನ್ಮದಿಂದಲೇ ಚಂಚಲೆ, ಅವಳು ನಡೆದಾಡುವ ನರಕ, ನಡೆದಾಡುವ ಸ್ಮಶಾನ...' ಎಂದು ಮನುಸ್ಮೃತಿ ಹೇಳಿದೆ. ಮಹಿಳೆಯರಿಗೆ ದೇವಸ್ಥಾನದ ಗರ್ಭಗುಡಿಗೆ ಪ್ರವೇಶ ನೀಡುವುದಿಲ್ಲ. ಹೆಣ್ಣು ಮಕ್ಕಳನ್ನು ಛೀ ಅನ್ನುವುದೇಕೆ..... ಬೆವರು ಸುರಿಸಿ ದುಡಿಯುವವರನ್ನು ಛೀ ಅನ್ನುವುದೇ ..... ಮಠಕ್ಕೆ ಅನ್ನವನ್ನು ಯಾರು ಕೊಡುತ್ತಾರೆ ಎಂದು ಪ್ರಶ್ನಿಸಿದರು. ಮಹಿಳೆಯರಿಗೆ ಗರ್ಭಗುಡಿ ಪ್ರವೇಶದ ಹಕ್ಕಿಗಾಗಿ ಹೋರಾಡುವುದಾಗಿ ಅವರು ಪ್ರಚೋದಿಸಿದರು.

ಸಭೆಯ ಅಧ್ಯಕ್ಷತೆ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಶಂಕರ್ ವಹಿಸಿದ್ದರು. ಈ ಹೋರಾಟ ವ್ಯಕ್ತಿಗತವಲ್ಲ. ಇದು ಯಾವುದೇ ವ್ಯಕ್ತಿಯ ಅಥವಾ ಮಠಾಧೀಶರ ವಿರುದ್ಧವಲ್ಲ... ಆದರೆ ಈ ತತ್ವ ಬದ್ಧ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ ಎಂದರು.

ಆ ನಂತರ ಬೃಹತ್ ಮೆರವಣಿಗೆ ಉಡುಪಿಯ ಪ್ರಮುಖ ರಸ್ತೆಗಳಲ್ಲಿ ಸಾಗಿತು. ಶಿಸ್ತುಬದ್ಧವಾಗಿ ಸಾಗಿದ ಮೆರವಣಿಗೆಯಲ್ಲಿ ಹಾಕಲಾದ ಘೋಷಣೆಗಳು ಜನರ ಉತ್ಸಾಹ ಉಡುಪಿ ಜನರ ಗಮನ ಸೆಳೆದವು.







ಕೃಷ್ಣಮಠಕ್ಕೆ ಹೋಗುವ ಪ್ರವೇಶ ಮಾರ್ಗದಲ್ಲೇ ಸಂಸ್ಕೃತ ಕಾಲೇಜು ಬಳಿ ಪೋಲಿಸರು ತಡೆಹಾಕಿ ಕಾದಿದ್ದರು. ತಡೆ ತೆಗೆದು ಮಠದ ಕಡೆಗೆ ಹೋಗಲು ಯತ್ನಿಸಿದ ಪೋಲಿಸರಿಗೂ, ಕಾರ್ಯಕರ್ತರಿಗೂ ತಿಕ್ಕಾಟಗಳು ಸಾಕಷ್ಟು ಹೊತ್ತು ನಡೆದವು. ನಂತರ ಅಲ್ಲಿಯೇ ಪ್ರತಿಭಟನೆ ಕೂರಲಾಯಿತು. ಮಠದ ಪರವಾಗಿ ಸಂಬಂಧಿಸಿದವರು ಬಂದು ಪಂಕ್ತಿಬೇಧ ನಿವಾರಿಸುವ ಭರವಸೆ ನೀಡಬೇಕು, ಅಥವಾ ಮಠದವರೆಗೆ ಪೋಲಿಸರು ಪ್ರತಿಭಟನಾಕಾರರನ್ನು ಬಿಡಬೇಕು, ನಾವು ಬಂಧನ, ಮೊಕದ್ದಮೆ ಪೋಲಿಸರ ಲಾಠೀ ಪ್ರಹಾರ ಯಾವುದಕ್ಕೂ ಹೆದರುವುದಿಲ್ಲ ಎಂದು ಘೋಷಿಸಿ ವಿವಿಧ ಆಯ್ಕೆಗಳನ್ನು ಮುಂದಿಟ್ಟು ಅಲ್ಲೇ ಪಟ್ಟು ಹಿಡಿದು ಕೂರಲಾಯಿತು. ಪೋಲಿಸರು ನಂತರ ಪ್ರತಿಭಟನಾಕಾರರನ್ನು ಬಂಧನಕ್ಕೊಳಪಡಿಸಿ ಆಮೇಲೆ ಬಿಡುಗಡೆ ಘೋಷಿಸಿದರು.

ಇದು ಹೋರಾಟದ ಆರಂಭ ಮಾತ್ರ, ಉಡುಪಿಯ ಮಠದಲ್ಲಿ ಪಂಕ್ತಿ ಬೇಧ ಜಾತಿ ಬೇಧ ಹೋಗುವವರೆಗೆ ಹೋರಾಟ ಮುಂದುವರೆಸಲಾಗುವುದು. ರಾಜ್ಯದಲ್ಲಿ ಮುಜರಾಯಿ ಇಲಾಖೆ ಅಡಿಯ ಸುಮಾರು 250 ದೇವಾಲಯಗಳಲ್ಲಿ ಇಂತಹ ಪಂಕ್ತಿ ಬೇಧ ಜಾರಿಯಲ್ಲಿದ್ದು ರಾಜ್ಯಾದ್ಯಂತ ಈ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಪಕ್ಷದ ಪರವಾಗಿ ಪಕ್ಷದ ಕಾರ್ಯದರ್ಶಿ ಘೋಷಿಸುವುದರೊಂದಿಗೆ ಈ ಹಂತದ ಹೋರಾಟ ಮುಗಿಯಿತು.

'ಪರಿಶಿಷ್ಟರ ಪಾಲು ಪರಿಶಿಷ್ಟರಿಗೇ ದಕ್ಕಲು, ಅಸ್ಪೃಶ್ಯತೆಯ ಅಪಮಾನ ತೊಡೆಯಲು ಕೆಂಬಾವುಟವ ಎತ್ತಿ'

ದೆಹಲಿಯಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ವಿಶೇಷ ಉಪಾಂಗ ಯೋಜನೆ ಮತ್ತು ಬುಡಕಟ್ಟು ಜನಾಂಗದ ಉಪಯೋಜನೆಯ ಅನುಷ್ಠಾನ ಕುರಿತಂತೆ ನಡೆದ ರಾಷ್ಟ್ರೀಯ ಕಾರ್ಯಾಗಾರದ ನಿರ್ಣಯ

ಎಸ್.ನಾಗರಾಜ್ – ಗೋಪಾಲಕೃಷ್ಣ ಅರಳಹಳ್ಳಿ

ನವ ದೆಹಲಿಯ ಬಿಟಿಆರ್ ಭವನದಲ್ಲಿ ದಿ 12.12.2011 ರಂದು ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ವಿಶೇಷ ಉಪಾಂಗ ಯೋಜನೆ ಮತ್ತು ಉಪ ಯೋಜನೆಯ ಅನುಷ್ಠಾನ ಕುರಿತಂತೆ ಸಿಪಿಐ(ಎಂ) ನೇತೃತ್ವದಲ್ಲಿ ರಾಷ್ಟ್ರೀಯ ಕಾರ್ಯಾಗಾರ ಯಶಸ್ವಿಯಾಗಿ ಜರುಗಿತು. 20ಕ್ಕೂ ಹೆಚ್ಚು ರಾಜ್ಯಗಳಿಂದ, ಸುಮಾರು 100 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕರ್ನಾಟಕದಿಂದ 5 ಮಂದಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ವಿಶೇಷ ಘಟಕ ಯೋಜನೆ ಮತ್ತು ಉಪಯೋಜನೆಯ ಸರಿಯಾದ ಅನುಷ್ಠಾನಕ್ಕೆ ಒತ್ತಾಯಿಸಿ ರಾಷ್ಟ್ರಮಟ್ಟದಲ್ಲಿ ಒಂದು ಬೃಹತ್ ಚಳುವಳಿ ಮೂಡಿಬರಬೇಕು. ಆ ನಿಟ್ಟಿನಲ್ಲಿ ಎಲ್ಲ ರಾಜ್ಯಗಳಲ್ಲಿ, ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸಬೇಕು. ಆನಂತರ 'ದೆಹಲಿ ಚಲೋ' ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬರಲಾಯಿತು.

ಕಾರ್ಯಾಗಾರದಲ್ಲಿ ಸಿಪಿಐ (ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಹಿರಿಯ ಐ.ಎ.ಎಸ್. ಅಧಿಕಾರಿಗಳು, ಗೃಹ ಇಲಾಖೆಯ ಮಾಜಿ ಅಧಿಕಾರಿ, 1978ರಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ, ಎಸ್.ಸಿ.ಪಿ.ಯನ್ನು ಆರಂಭಿಸಿದ ಸಂದರ್ಭದಲ್ಲಿ ಹಾಗೂ ಮಂಡಲ ಆಯೋಗದ ವರದಿಯ ಸದಸ್ಯ ಕಾರ್ಯದರ್ಶಿಯಾಗಿ ದುಡಿದ ದಕ್ಷ ಅಧಿಕಾರಿ ಹಾಗೂ ಎಡ ಚಿಂತಕ ಪಿ.ಎಸ್.ಕೃಷ್ಣನ್, ಪ್ರೊ. ಪ್ರವೀಣ್ ಜಾ ಮತ್ತು ಆಂಧ್ರಪ್ರದೇಶದ ದಲಿತ ಅಭಿವೃದ್ಧಿ ಕೇಂದ್ರದ ಮಲ್ಲೆಪಲ್ಲಿ ಲಕ್ಷ್ಮಯ್ಯ ಪಾಲ್ಗೊಂಡಿದ್ದರು.

ಸಿಪಿಐ(ಎಂ) ಪಕ್ಷದ ಪಿ.ಬಿ. ಸದಸ್ಯರಾದ ಕೆ. ವರದರಾಜನ್ ಈ ಕಾರ್ಯಾಗಾರದ 'ಕರಡು ನಿರ್ಣಯವನ್ನೂ' ಮಂಡಿಸಿದರು.

ಅಧ್ಯಕ್ಷತೆಯನ್ನು ತ್ರಿಪುರ ರಾಜ್ಯದ ಸಿಪಿಐ (ಎಂ) ಮುಖ್ಯಸ್ಥರಾದ ಅನಿಲ್ ಸರ್ಕಾರ್ ವಹಿಸಿದ್ದರು. ಈ ಕಾರ್ಯಾಗಾರವನ್ನು ಉದ್ಘಾಟಿಸುತ್ತಾ, ಪಿ.ಎಸ್.ಕೃಷ್ಣನ್-ಪಶ್ಚಿಮ ಬಂಗಾಳ, ಕೇರಳ ಹಾಗೂ ತ್ರಿಪುರ ರಾಜ್ಯಗಳಲ್ಲಿ ತಮ್ಮ ಆಡಳಿತದ ಸಮಯದಲ್ಲಿ ಕೈಗೊಂಡ ದಲಿತ ಅಭಿವೃದ್ಧಿ ಕಾರ್ಯಗಳಲ್ಲಿ ಗಮನಾರ್ಹ ಕೆಲಸ ಮಾಡಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು, ಹಾಗೆಯೇ ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ನಡೆಸಲಾಗುತ್ತಿರುವ ಚಳುವಳಿ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಕೆಲವೊಂದು ಅಂಶಗಳ ಬಗ್ಗೆ ಗಮನ ಸೆಳೆಯುತ್ತ ವಿಭಾಗ 11ರಲ್ಲಿ ಪರಿಶಿಷ್ಟ ಜಾತಿ ಕುರಿತಂತೆ 'ಸಾಮಾಜಿಕ ಮತ್ತು ಪ್ರಾದೇಶಿಕ ಸಮಾನತೆ' ಎಂಬ ಭಾಗದಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುಷ್ಠಾನದಲ್ಲಿ ಉಂಟಾಗಿರುವ ತೊಂದರೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಒಂದು ಹೊಸ ಪದ್ಧತಿಯನ್ನು ರೂಪಿಸಬೇಕಾದ ಅಗತ್ಯವಿದೆ. ಈ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಗಂಭೀರವಾಗಿ ಪರಿಗಣಿಸದಿರುವುದು ಇದರಿಂದ ಗೊತ್ತಾಗುತ್ತದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಸು.



17(16.2ರಷ್ಟು)ಕೋಟಿಯಷ್ಟು ದಲಿತರಿದ್ದಾರೆ. 32ವರ್ಷಗಳ ಹಿಂದೆ ಈ ವಿಶೇಷ ಘಟಕ ಯೋಜನೆ ಜಾರಿಗೆ ಬಂದಿತು. ಇದರ ಹಣವನ್ನು ಎಸ್‌ಸಿ/ಎಸ್‌ಟಿಗಳ ಅಭಿವೃದ್ಧಿಗೆ ಬಳಸದೇ ಬೇರೆ ಕಾಮಗಾರಿಗಳಿಗೆ ಪರಿವರ್ತಿಸಲಾಗಿದೆ. ಇದು ಅನ್ಯಾಯ ಹಾಗೂ ಸರಿಯಲ್ಲ. ಈ ದೇಶದ ಪ್ರಧಾನ ಮಂತ್ರಿ ಹಾಗೂ ಯೋಜನಾ ಆಯೋಗದ ಅಧ್ಯಕರೂ ಆದ ಮನಮೋಹನ ಸಿಂಗ್ 2005ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ 51ನೇ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ "ಎಸ್‌ಸಿ/ಎಸ್‌ಟಿ ಹಾಗೂ ಇತರೆ ಮೇಲ್ಜಾತಿಯ ಅಂದರೆ ಸಾಮಾಜಿಕ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ಜಾತಿಗಳ ನಡುವಿನ ಅಂತರವನ್ನು ಮುಂದಿನ 10 ವರ್ಷಗಳಲ್ಲಿ ಹೋಗಲಾಡಿಸಬೇಕಾಗಿದ್ದು ಎಸ್‌ಸಿ/ಎಸ್‌ಟಿಗಳನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಮೇಲೆತ್ತಬೇಕಾಗಿದೆ. ಇತರ ಜಾತಿಗಳಿಗೆ ಗೌರವಪೂರ್ಣ ಜೀವನಶೈಲಿ, ಘನತೆಯುಳ್ಳ ಉದ್ಯೋಗಗಳನ್ನು ಹಾಗೂ ಶೈಕ್ಷಣಿಕ ಹಾಗೂ ಆರೋಗ್ಯದ ಪಾಲನೆಗಳಂತಹ ಮಾನದಂಡಗಳು ಇವರಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಎಸ್‌ಸಿಪಿ ಯೋಜನೆಗಳು ಅನುಷ್ಠಾನಕ್ಕೆ ಬರುವಂತಾಗಬೇಕು' ಎಂದಿದ್ದರು. 2004ರಲ್ಲಿ ಸಂಸತ್ತಿನ ಜಂಟಿ ಸದನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿಯೂ ಎಸ್‌ಸಿ/ಎಸ್‌ಟಿಗಳ ಅಭಿವೃದ್ಧಿಯ ಕೊರತೆಯ ಬಗ್ಗೆ ಗಮನ ಸೆಳೆದಿದ್ದರು. ಇಷ್ಟೆಲ್ಲಾ ಇದ್ದಾಗ್ಯೂ, ದಲಿತರ-ಎಸ್.ಸಿ-ಎಸ್.ಟಿ.ಗಳ ಹಾಗೂ ಬುಡಕಟ್ಟು ಜನಾಂಗದವರ ಆರ್ಥಿಕ-ಸಾಮಾಜಿಕ ಸ್ಥಿತಿ-ಗತಿಗಳಲ್ಲಿ ಅಂತಹ ಹೇಳಿಕೊಳ್ಳುವಂತ ಬೆಳವಣಿಗೆಯಾಗದಿರುವುದು ವಿಪರ್ಯಾಸ. ಈಗಲೂ 51.4%ರಷ್ಟು ಪರಿಶಿಷ್ಟ ಜಾತಿಯಲ್ಲಿ ಕೃಷಿಕೂಲಿಕಾರರಿದ್ದಾರೆ (1999-2000) ಬೇರೆ ಜಾತಿಗಳಲ್ಲಿ ಕೇವಲ 19%ರಷ್ಟು ಮಾತ್ರ. 2001ರ ಜನಗಣತಿಯ ಪ್ರಕಾರ ದಲಿತರಲ್ಲಿ ಅಕ್ಷರಸ್ಥರ ಸಂಖ್ಯೆ 54.6%ರಷ್ಟಾದರೆ ಪದವೀಧರರಲ್ಲಿ ನೊಂದಾವಣೆ ಕೇವಲ 8.37% ಮಾತ್ರ. ದಲಿತೇತರರಲ್ಲಿ 91.63% ರಷ್ಟಿದೆ. 1978ರಿಂದ ಎಸ್‌ಸಿಪಿ ಜಾರಿಯಲ್ಲಿ ಇದ್ದರೂ ದಲಿತರ ಸ್ಥಿತಿಗತಿಗಳು ಎಷ್ಟು ಶೋಚನಿಯವಾಗಿದೆ ಎಂದು ಈ ಅಧಿಕೃತ ಅಂಕಿ-ಅಂಶಗಳು ಎತ್ತಿ ತೋರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಎಸ್‌ಸಿಪಿಯ ಅಡಿಯಲ್ಲಿ ಅರ್ಥಪೂರ್ಣ-ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾದ ಅಗತ್ಯತೆಯ ಬಗೆಗೆ ಸಲಹೆಕೊಟ್ಟು ಹೋರಾಟದ ಮೂಲಕ ಕೇಂದ್ರಸರ್ಕಾರದ ಮೇಲೆ ಒತ್ತಡ ತರಬೇಕೆಂದು ಮನವಿ ಮಾಡಿಕೊಂಡರು.

ಸಮಾವೇಶ ನಿರ್ದಿಷ್ಟಗೊಳಿಸಿದ ಪ್ರಮುಖ ಬೇಡಿಕೆಗಳು, ನಿರ್ಣಯಗಳು

1 ಪ್ರತಿ ಗ್ರಾಮೀಣ ಪರಿಶಿಷ್ಟರಿಗೆ ಅವರ ಅಗತ್ಯಕ್ಕೆ ಅನುಗುಣವಾಗಿ ಭೂಮಿಯನ್ನು ಒದಗಿಸಿ ನೀರಾವರಿ ಯೋಜನೆಯನ್ನು ಸರ್ಕಾರವೇ ಕಲ್ಪಿಸಿಕೊಡಬೇಕು.

2 ಶೈಕ್ಷಣಿಕ ಹಾಗೂ ಆರೋಗ್ಯದ ವಿಚಾರಕ್ಕೆ ಹೆಚ್ಚಿನ ಗಮನಕೊಡುವಂತಾಗಬೇಕು.

3 ಖಾಸಗಿ ಕ್ಷೇತ್ರಗಳಲ್ಲಿಯೂ ಉದ್ಯೋಗದ ಮೀಸಲಾತಿ ಜಾರಿಗೊಳಿಸಬೇಕು. ಉನ್ನತ ಮಟ್ಟದ ಅಧಿಕಾರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು.

4 ವಿಶೇಷ ಘಟಕ ಯೋಜನೆಗೆ ಹಣವು ಅವರ ಜನಸಂಖ್ಯೆಗೆ ಅನುಗುಣವಾಗಿ ಇದ್ದು ಅವರ ಅಭಿವೃದ್ಧಿಗೆ ಮಾತ್ರ ಖರ್ಚು ಮಾಡಬೇಕು.

5 ಈ ಯೋಜನೆಯಡಿಯಲ್ಲಿ ಬರುವ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪರಿಶೀಲಿಸಲು ಸಂಸತ್ತಿನಲ್ಲಿ ಶಾಸನ ಬದ್ಧವಾದ ಕಾನೂನನ್ನು ಜಾರಿಗೆ ತರಬೇಕು.

6 ಖಾಸಗೀಕರಣದಿಂದಾಗಿ ಉದ್ಯೋಗದಿಂದ ವಂಚಿತರಾಗುತ್ತಿರುವ ಎಸ್,ಸಿ-ಎಸ್.ಟಿ. ಯುವಜನರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಚಳುವಳಿಯಲ್ಲಿ ಭಾಗಿಗಳಾಗುವಂತೆ ಮಾಡುವುದು.

7. ಮಾರ್ಕ್ಸ್‌ವಾದ ಹಾಗೂ ಅಂಬೇಡ್ಕರ್ ವಾದಗಳಲ್ಲಿ ಹಲವು ಸಮಾನ ಅಂಶಗಳಿವೆ. ಇದರ ಆಧಾರದಲ್ಲಿ ದಲಿತರ ನಡುವೆ ಪ್ರಜಾಸತ್ತಾತ್ಮಕ ಚಳುವಳಿ ಬಲಗೊಳಿಸಬೇಕು.

ವರ್ಗಸಂಘರ್ಷದ ಮುಖ್ಯ ವಾಹಿನಿಯ ಹೋರಾಟದ ಭಾಗವಾಗಿ- ಇದಕ್ಕೆ ಅಡ್ಡಿಯಾಗಿರುವ ಅನಿಷ್ಠ-ಅಸ್ಪೃಶ್ಯತಾ ನಿರ್ಮೂಲನೆಯ ಹೋರಾಟವನ್ನು ತಮಿಳುನಾಡು, ಆಂಧ್ರಪ್ರದೇಶದಲ್ಲಿ ಕೈಗೆತ್ತಿ ಕೊಂಡಿದ್ದು ಇನ್ನಿತರ ರಾಜ್ಯಗಳಲ್ಲಿಯೂ ಸಾಮಾಜಿಕ ಸುಧಾರಣಾ ಚಳುವಳಿ ಬಲಗೊಳ್ಳಲು ಹೆಚ್ಚು ಗಮನೀಡಬೇಕು.

'ಸ್ವಯಂ ವಿಮರ್ಶೆ ಮಾಡಿಕೊಂಡು ಚಳುವಳಿಗೆ ಮುಂದಾಗಿ'

ಸಮಾರೋಪದಲ್ಲಿ ಪ್ರಕಾಶ ಕಾರಟ್

ದಲಿತರ ಹಕ್ಕುಗಳಿಗಾಗಿ 2006ರ ಫೆಬ್ರವರಿಯಲ್ಲಿ 'ಅಖಿಲಭಾರತ ಸಮಾವೇಶ' ನಡೆಸಿ 'ಬೇಡಿಕೆಗಳ ಪಟ್ಟಿಯ ಒಂದು ನಿರ್ಣಯ'ವನ್ನು ಅನುಮೋದಿಸಿ 5 ವರ್ಷಗಳು ತುಂಬಿವೆ. ಪಕ್ಷವು ಗಂಭೀರವಾಗಿ ಪರಿಗಣಿಸಿದೆ. ಹಲವು ರಾಜ್ಯಗಳಲ್ಲಿ ಪ್ರಮುಖವಾಗಿ ತಮಿಳುನಾಡಿನಲ್ಲಿ 'ಅಸ್ಪ್ರಶ್ಯತಾ ನಿರ್ಮೂಲನಾ ರಂಗ'ವು ರಾಜ್ಯ ಮಟ್ಟದಲ್ಲಿ ಸುಮಾರು 13 ಇನ್ನಿತರೆ ಸಂಘ-ಸಂಸ್ಥೆಗಳನ್ನು ಒಟ್ಟುಗೂಡಿಸಿ ಕೆಲಸ ನಿರ್ವಹಿಸುತ್ತಿದೆ. ಊತ್ತುಪುರಂ ಅಸ್ಪ್ರಶ್ಯತಾ ಗೋಡೆಯನ್ನು ಉರುಳಿಸಿದ್ದಾಗಿದೆ. ಆಂಧ್ರಪ್ರದೇಶದಲ್ಲಿ 'ಕೆವಿಪಿಎಸ್' ನ ಅಡಿಯಲ್ಲಿ ಸು. 100ಕ್ಕೂ ಹೆಚ್ಚುಸಂಘ-ಸಂಸ್ಥಗಳು ಸೇರಿಕೊಂಡಿವೆ. ರಾಜ್ಯದಲ್ಲಿ ಎಸ್‌ಸಿಪಿ ಅನುಷ್ಠಾನದ ಹೋರಾಟ ಉತ್ತಮವಾಗಿ ಬೆಳೆಯುತ್ತಿದೆ. ಇನ್ನಿತರ ರಾಜ್ಯಗಳಲ್ಲಿಯೂ ಈ ದಲಿತ ಹಕ್ಕುಗಳ ರಕ್ಷಣೆಗಾಗಿ ಚಳುವಳಿಗಳು ಬೆಳೆಯಲಾರಂಭಿಸಿವೆ. ಅದೇರೀತಿ ಉತ್ತರ ಭಾರತ ರಾಜ್ಯಗಳಲ್ಲಿಯೂ ಈ ಚಳುವಳಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಪಕ್ಷದ ಸಮಿತಿಯ ಸಭೆಗಳಲ್ಲಿ ಈ ದಲಿತರ ವಿಷಯ ಮುಖ್ಯ ವಿಚಾರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. ಹಲವು ಕಡೆ ಹಿಂದೆ ಬಿದ್ದಿದ್ದೇವೆ. ಜಾತಿಪದ್ಧತಿಯ ವಿರುದ್ಧದ ಈ ಹೋರಾಟ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮದ ಭಾಗವಾಗಿದ್ದು 'ಜನತಾ ಪ್ರಜಾಪ್ರಭುತ್ವದ ಕ್ರಾಂತಿ'ಯ ಭಾಗವಾಗಿ ಈ ಸಾಮಾಜಿಕ ಸುಧಾರಣಾ ಚಳುವಳಿಯನ್ನು ಪಕ್ಷವು

ಪುಟ 13 ಕ್ಕೆ

ಮಡೆ ಸ್ನಾನ, ಪಂಕ್ತಿ ಬೇಧ, ಜಾತಿ ಬೇಧದ ವಿರುದ್ಧ ಕರಾವಳಿ ಜನರ ನಡುವೆ ಚರ್ಚೆ ಆಗುತ್ತಿರುವಾಗ ಬಿಜೆಪಿ ಭ್ರಷ್ಟಾಚಾರ, ಕಿತ್ತಾಟಗಳಲ್ಲಿ ಮುಳುಗಿರುವಾಗ ಸಂಘ ಪರಿವಾರದ ಯೋಜನೆಯಂತೆ ಮತ್ತೆ ಕೋಮುಭಾವನೆ ಉದ್ರೇಕಿಸುವ ಕೆಲಸ ನಡೆಯುತ್ತಿದೆ. ಅದರ ಪರಿಣಾಮವೇ ಈ ಕೋಮು ಘರ್ಷಣೆ.


ಉಪ್ಪಿನಂಗಡಿ :

ಹರಡಿದ ಕೋಮು ಘರ್ಷಣೆ ಸಂಘ ಪರಿವಾರದ ಯೋಜಿತ ಕಾರ್ಯಾಚರಣೆ

ಸಂಜಯ


ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರಾವಳಿ ಜಿಲ್ಲೆಗಳಿಗೆ ಕೋಮು ಹಿಂಸೆಯಿಂದ ಬಿಡುಗಡೆಯೇ ಇಲ್ಲವೇನೋ ಎಂದು ಭಾಸವಾಗುವಂತಹ ಬೆಳವಣಿಗೆಗಳು ಈ ಭಾಗದಲ್ಲಿ ಮುಖ್ಯವಾಗಿ ದ.ಕ. ಜಿಲ್ಲೆಯ ಮೂಲೆ ಮೂಲೆಗಳಿಂದ ಒನಕ್ಕೊಂದರಂತೆ ವರದಿಯಾಗತೊಡಗಿದೆ. ಜಾಗತೀಕರಣ ಮತ್ತು ಸರಕಾರದ ನೀತಿಗಳಿಂದ ಉಂಟಾಗಿರುವ ಅಭಿವೃದ್ಧಿಯ ಅಬ್ಬರಕ್ಕೆ ಸಿಲುಕಿ ಇಲ್ಲಿಯ ಜನ ಎಲ್ಲವನ್ನು ಕಳೆದುಕೊಂಡು ಬೀದಿಗೆ ಬೀಳುತ್ತಿರುವ, ಬದುಕು ಮೂರಾಬಟ್ಟೆ ಯಾಗುತ್ತಿರುವ ಪರಿಸ್ಥಿತಿ ಒಂದೆಡೆಯಿದ್ದರೆ, ಹಿಂದುತ್ವದ ಹುಸಿ ಹೋರಾಟವನ್ನು ಆರಂಭಿಸಿ ಬ್ಯಾರಿ (ಮುಸ್ಲಿಂ)ಗಳೆ ನಮ್ಮೆಲ್ಲ ಸಂಕಷ್ಟಗಳ ಪ್ರಧಾನ ಕಾರಣಕರ್ತರು ಎಂದು ಬಿಂಬಿಸಿ ಅಧಿಕಾರಕ್ಕೆ ಬಂದ ಹಿಂದುತ್ವದ ಸೇನಾನಿಗಳ ಹಸಿ ಹಸಿ ಭ್ರಷ್ಟಾಚಾರ, ನೈತಿಕ ಅಧಃಪತನವನ್ನು ಕಂಡ ಜನ ಹಿಂಸೆ, ದ್ವೇಷ, ಮತಾಂಧತೆಯ ಹುಚ್ಚಿನಿಂದ ಇನ್ನಾದರೂ ಹೊರಬರಬಹುದು ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರೆ, ಜಿಲ್ಲೆಯ ಬುದ್ಧಿವಂತ ಜನ ಮತ್ತೆ ಮತ್ತೆ ಕಲ್ಲಡ್ಕದ ಡಾನ್ ಪ್ರಭಾಕರ ಭಟ್ ನೇತೃತ್ವದಲ್ಲಿ ಸಂಘ ಪರಿವಾರ ನಿರ್ಮಿಸಿರುವ ಖೆಡ್ಡಕ್ಕೆ ಬೀಳುತ್ತಲೇ ಇದ್ದಾರೆ.

ಜಿಲ್ಲೆಯ ಜನ ಒಂದಿಷ್ಟಾದರೂ ವಾಸ್ತವವನ್ನು ಅರಿತಿದ್ದರೆ, ಅನುಭವದಿಂದ ಪಾಠ ಕಲಿತಿದ್ದರೆ, ಕಣ್ಣೆದುರಿಗೆ ರಾಚುತ್ತಿರುವ ಸತ್ಯವನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಸುಳ್ಯದಿಂದ ಹಿಡಿದು ಉಪ್ಪಿನಂಗಡಿಯವರೆಗೂ ಪ್ರಭಾಕರ ಭಟ್ಟನ ನೇತೃತ್ವದಲ್ಲಿ ನಡೆಯುತ್ತಿರುವ ಕೋಮು ಪ್ರಚೋದಕ, ಮತಾಂಧ ಸಮಾವೇಶದಲ್ಲಿ ಭಾಗವಹಿಸುತ್ತಿರಲಿಲ್ಲ, ಭಟ್ಟನ ಮುಸ್ಲಿಂ ದ್ವೇಷದ ಹಸಿ ಸುಳ್ಳುಗಳಿಗೆ ಕೇಕೆ ಹೊಡೆದು ಚಪ್ಪಾಳೆ ತಟ್ಟುತ್ತಿರಲಿಲ್ಲ. ಪುತ್ತೂರು ತಾಲೂಕಿನ ಭಾಗವಾಗಿದ್ದರೂ ಯಾವತ್ತೂ ಕೋಮುದ್ವೇಷಕ್ಕೆ ಅವಕಾಶ ಕೊಡದ ಉಪ್ಪಿನಂಗಡಿಯ ಬೀದಿಗಳು ರಣರಂಗವಾಗುತ್ತಿರಲಿಲ್ಲ.



ಇಷ್ಟಕ್ಕೂ ಉಪ್ಪಿನಂಗಡಿಯಲ್ಲಿ ನಡೆದದ್ದಾದರೂ ಏನು? ಎಂದು ಹುಡುಕುತ್ತಾ ಹೋದರೆ ಸತ್ಯ ಕಂಡು ಹಿಡಿಯಲು ಬಹಳ ಬುದ್ಧಿವಂತರೇನೂ ಆಗಬೇಕಿಲ್ಲ. ಉತ್ತರ ಸರಳ. ಬಿಜೆಪಿ ಮುಂದಿನ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವನ್ನು ಕಳೆದುಕೊಂಡಿದೆ. ಜನ ಬಿಜೆಪಿ ಆಡಳಿತದಲ್ಲಿ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಹೀಗೆಯೇ ಪರಿಸ್ಥಿತಿ ಮುಂದುವರಿದರೆ ತಮ್ಮ ಶಕ್ತಿ ಕೇಂದ್ರದಲ್ಲಿಯೇ ಹೀನಾಯವಾಗಿ ಸೋಲಬೇಕಾಗುತ್ತದೆ ಎಂಬ ಸತ್ಯ ಸಂಘ ಪರಿವಾರಕ್ಕೆ ಅರ್ಥವಾಗಿದೆ. ಇಂತಹ ಪರಿಸ್ಥಿತಿಯನ್ನು ಬದಲಾಯಿಸಿ ಮತ್ತೆ ಮುಂದಿನ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಕಾರ್ಯ ತಂತ್ರ ಏನಿರಬೇಕು ಎಂದು ಬೈಠಕ್‌ನಲ್ಲಿ ಅಜೆಂಡಾ ಇಟ್ಟು ಚರ್ಚೆ ಮಾಡಿದರೆ ಮತ್ತೆ ಗೋಚರಿಸಿದ್ದು ಅದೇ ಹಳೆಯ ಕೋಮು ವಿಭಜಕ ರಾಜಕೀಯ. ಅದಲ್ಲದೆ ಬೇರೆ ದಾರಿ ಇಲ್ಲ ಎಂದು ತೀರ್ಮಾನಿಸಿದ ಪರಿವಾರ ಈ ಬಾರಿ ನೇರ ರಿಮೋಟ್ ಕಂಟ್ರೋಲರ್ ಪ್ರಭಾಕರ ಭಟ್ಟನನ್ನೇ ಫೀಲ್ಡಿಗಿಳಿಸಿದೆ. ಅದರ ಪರಿಣಾಮವನ್ನು ಜಿಲ್ಲೆಯ ಜನ ನೋಡುತ್ತಿದ್ದಾರೆ. ಪರಿವಾರದ ವಂಚನೆ, ವಿಭಾಜಕ ರಾಜಕೀಯ ಮೇಲ್ಜಾತಿಗಳ ಕುಟಿಲ ತಂತ್ರಗಳು, ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರ ಬಹುತೇಕ ಹಿಂದುಗಳಿಗೆ ಅರ್ಥವಾಗಿದ್ದರೂ ಮೆದುಳಿನ ಆಳದಲ್ಲಿ ಹೊಕ್ಕಿ ಕುಳಿತಿರುವ ಮುಸ್ಲಿಂ ದ್ವೇಷದ ಭಾವನೆ ಮತ್ತೆ ಮತ್ತೆ ಸಂಘ ಪರಿವಾರದ ಕೊಳ್ಳಿ ದೆವ್ವಗಳು ಹಮ್ಮಿಕೊಳ್ಳುತ್ತಿರುವ ಸಮಾಜೋತ್ಸವ ಎಂಬ ಆತ್ಮಘಾತುಕ ಸಭೆಗಳಿಗೆ ಎಳೆದು ತರುತ್ತಿದೆ. ಈಗ ಸಾಮಾನ್ಯ ಹಿಂದುಗಳನ್ನು ಹಿಂದೂತ್ವದ ತೆಕ್ಕೆಗೆ ಮರಳಿದೂಡಲು ಪಾಪ್ಯುಲರ್ ಫ್ರಂಟ್ ಎಂಬ ಕದನ ಕುತೂಹಲಿ ಮುಸ್ಲಿಂ ತೀವ್ರಗಾಮಿ ಸಂಘಟನೆಯೂ ಕೊಡುಗೆ ನೀಡುತ್ತಿದೆಯಲ್ಲ...

ದ.ಕ. ಜಿಲ್ಲೆಯ ಪೇಟೆ ಪಟ್ಟಣಗಳಿಂದ ಹಿಡಿದು, ಗ್ರಾಮೀಣ ಭಾಗದ ಸೋಮಾರಿಕಟ್ಟೆಗಳ ವರೆಗೂ ದೊಡ್ಡ ಮಟ್ಟದ ಪರ ವಿರೋಧ ಚರ್ಚೆಗೆ ಕಾರಣವಾಗಿದ್ದ, ಮಡೆಸ್ನಾನ ಪ್ರಕರಣದಿಂದ ಶೂದ್ರ ವಿಭಾಗದಲ್ಲಿ ಆಗುತ್ತಿರುವ ಬೆಳವಣಿಗೆಯಿಂದ ಒಂದಿಷ್ಟು ಕಂಗಾಲಾಗಿದ್ದ ಪರಿವಾರ ಅದೇ ಸಮಯಕ್ಕೆ ಸರಿಯಾಗಿ ದನ ಸಾಗಾಟ, ಮತಾಂತರ, ಲವ್‌ಜಿಹಾದ್ ಎಂಬ ಪರಿವಾರದ ಪಾಲಿನ ಎವರ್‌ಗ್ರೀನ್ ವಿಷಯವನ್ನು ಎತ್ತಿ ಬೀದಿಗಿಳಿದಿದೆ. ಸುಳ್ಯದಲ್ಲಿ ಬ್ಯಾರಿಗಳು ಮತ್ತು ಪೊಲೀಸರ ತಲೆಗಳನ್ನು ಏಕಕಾಲದಲ್ಲಿ ಒಡೆದುಹಾಕಿದೆ. ಅಲ್ಲಿಂದ ಶುರುವಾದ ಈ ಬಾರಿಯ ದಂಡ ಯಾತ್ರೆ ಈಗ ಉಪ್ಪಿನಂಗಡಿಯನ್ನು ತಲುಪಿದೆ. ವಾರದ ಹಿಂದೆ ಸುಳ್ಯದ ಪ್ರಕರಣ, ಲವ್ ಜಿಹಾದ್, ಗೋಹತ್ಯೆ ಮುಂತಾದ ವಿಷಯಗಳನ್ನಿಟ್ಟು ಸುಬ್ರಹ್ಮಣ್ಯದಿಂದ ಹೊರಟ ಸಂಘ ಪರಿವಾರದ ವಾಹನ ಜಾಥ ಎಂಬ ಅಶ್ವಮೇಧದ ಕುದುರೆ ಉಪ್ಪಿನಂಗಡಿಗೆ ವಿಷವುಗುಳುತ್ತಾ ಬಂದಿತ್ತು. ನಾ.ಸೀತಾರಾಮ ಎಂಬ R.S.S ಮುಖಂಡ ಎಂದೂ ಕೋಮು ಹಿಂಸೆಗೆ ಬಲಿಯಾಗದಿದ್ದ ಉಪ್ಪಿನಂಗಡಿ ಪೇಟೆಯಲ್ಲಿ ಮುಸ್ಲಿಮರ ವಿರುದ್ಧ ತೀರಾ ಅವಾಚ್ಯ ಶಬ್ದಗಳಿಂದ ಬಯ್ದು, ಉದ್ರೇಕಕಾರಿ ಭಾಷಣವನ್ನು ಆರಂಭಿಸಿದ್ದಾನೆ. ಇದು ಸ್ಥಳೀಯವಾಗಿ ಬಹುಸಂಖ್ಯಾತರಾಗಿರುವ ಬ್ಯಾರಿ ಹುಡುಗರನ್ನು ಕೆರಳಿಸಿದೆ. ಒಂದಿಷ್ಟು ಬ್ಯಾರಿ (ಮುಸ್ಲಿಂ) ಹುಡುಗರು ನೇರ ವೇದಿಕೆ ಹತ್ತಿ ನಾ.ಸೀತಾರಾಮ್‌ನ ಭಾಷಣವನ್ನು ತಡೆಹಿಡಿದಿದ್ದಾರೆ. ಇಷ್ಟಕ್ಕೆ ಕಂಗಾಲಾದ ಪರಿವಾರದ ವೀರಾಧಿವೀರರು ಸಭೆಯನ್ನು ಮೊಟಕುಗೊಳಿಸಿ ಓಡಿ ಹೋಗಿದ್ದಾರೆ. ಆದರೆ ಈ ಘಟನೆಯನ್ನೇ ಬಳಸಿಕೊಂಡು ಹಿಂದೂಗಳನ್ನು ಎತ್ತಿ ಕಟ್ಟುವ ತೀರ್ಮಾನಕ್ಕೆ ಜಿಲ್ಲೆಯ ಪರಿವಾರ ಮುಂದಾಗಿದೆ. ಅದರ ಭಾಗವಾಗಿಯೇ ಉಪ್ಪಿನಂಗಡಿಯಲ್ಲಿ ಹಿಂದೂ ಸಮಾಜೋತ್ಸವ ಎಂಬ ಕೋಮುಪ್ರಚೋದಕ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದೆ. ಅದರ ಪೂರ್ವಭಾವಿಯಾಗಿಯೇ ಅಲ್ಲಲ್ಲಿ ಸಣ್ಣಪುಟ್ಟ ಕಿರಿಕ್‌ಗಳನ್ನು ಹುಟ್ಟು ಹಾಕಿದೆ. ಸಮಾಜೋತ್ಸವದ ಪ್ರಯುಕ್ತ ವಾಹನ ಪ್ರಚಾರವನ್ನು ಹಮ್ಮಿಕೊಂಡು ಮುಸ್ಲಿಂ ಮೊಹಲ್ಲಾಗಳಲ್ಲಿ ಮೈಕ್ ಕಟ್ಟಿ ಬ್ಯಾರಿಗಳನ್ನು ಪ್ರಚೋದಿಸುವ ಮಾತುಗಳನ್ನು, ಘೋಷಣೆಗಳನ್ನು ಕೂಗತೊಡಗಿದೆ. ಇದೇ ಸಂದರ್ಭವನ್ನು ಬಳಸಿಕೊಂಡು ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಮುಂದಾದ ಪಾಪ್ಯುಲರ್ ಫ್ರಂಟ್ ನಾಮಾಂಕಿತ KFD ಗಳು ತಮ್ಮ "ಶಿಸ್ತು ಬದ್ಧ" ಕ್ರಿಯೆಗಳನ್ನು ವ್ಯವಸ್ಥಿತವಾಗಿ ಆರಂಭಿಸಿದ್ದಾರೆ. ಅಲ್ಲಲ್ಲಿ ಸಭೆಗಳನ್ನು ಆಯೋಜಿಸಿ ಪ್ರಭಾಕರ್ ಭಟ್ ಮತ್ತು ಪರಿವಾರಕ್ಕೆ ನೇರ ಸವಾಲೊಡ್ಡುವ ಉದ್ರೇಕಕಾರಿ ಭಾಷಣಗಳನ್ನು ಮಾಡಿದ್ದಾರೆ. ಆ ಮೂಲಕ ಹಿಂದೂ ವರ್ಸಸ್ ಮುಸ್ಲಿಂ ಎಂಬ ಸಂಘ ಪರಿವಾರದ ಅಜೆಂಡಾವನ್ನು



ಜಾರಿಗೊಳಿಸಲು ತಾವೂ ಮುಂದಾಗಿದ್ದಾರೆ. ಇದನ್ನೆಲ್ಲಾ ಕಂಡಾಗ ಉಪ್ಪಿನಂಗಡಿ ಸಮಾಜೋತ್ಸವದಲ್ಲಿ ಗಲಭೆ ಗ್ಯಾರಂಟಿ ಮತ್ತು ಅದು ಜಿಲ್ಲೆಗೆ ಹರಡುವುದು ಖಚಿತ ಎಂಬ ಆತಂಕ ಸಾರ್ವಜನಿಕವಾಗಿ ಮೂಡಿದೆ. ಆದರೆ ಉಪ್ಪಿನಂಗಡಿ ಮಸೀದಿಯ ಅಧ್ಯಕ್ಷ ಕೆಂಪಿ ಮುಸ್ತಾಫಾ ಮತ್ತಿತರ ಪ್ರಜ್ಞಾವಂತರು ಸೇರಿಕೊಂಡು ಯಾವುದೇ ಸಂದರ್ಭದಲ್ಲಿ ತಾಳ್ಮೆ ಕಳೆದುಕೊಳ್ಳಬಾರದು ಎಂದು ಬ್ಯಾರಿ ಯುವಕರಿಗೆ ತಾಕೀತು ಮಾಡಿದ್ದಾರೆ. ಅದು ಸ್ವಲ್ಪ ಮಟ್ಟಿಗೆ [illegible] ಸಮಾಜೋತ್ಸವದಲ್ಲಿ [illegible] ಕಳ್ಳರು ಎಂದು ಜರೆದಿದ್ದಾನೆ. [illegible] ಕೇಕೆ, ಚಪ್ಪಾಳೆ ಹೊಡೆಯುತ್ತಿದ್ದ ಶೂದ್ರ ಹುಡುಗರಿಗೆ ಕರೆ ನೀಡಿದ್ದಾನೆ. ಮಸೀದಿಯನ್ನು ಎತ್ತಿ ಗುಡ್ಡಹಾಕಿ ಎಂದಿದ್ದಾನೆ. ಶರೀಯತ್ ಕಾನೂನನ್ನು ಪ್ರಸ್ತಾಪಿಸಿ ವಿಷ ಕಕ್ಕಿದ್ದಾನೆ. ಇದರಿಂದ ಮುಸ್ಲಿಂ ಹುಡುಗರೂ ಒಂದಿಷ್ಟು ಕೆರಳಿದ್ದಾರೆ. ಪ್ರಭಾಕರ ಭಟ್ಟನ ಭಾಷಣ ಎಂಬ ಹಫೀಮಿನಿಂದ ಉದ್ರೇಕಗೊಂಡ ಶೂದ್ರ ಹುಡುಗರು ಸಭೆ ಮುಗಿಸಿದ್ದೇ ಬ್ಯಾರಿಗಳ ಅಂಗಡಿ, ಮಸೀದಿಗಳತ್ತ ಧಾವಿಸಿದ್ದಾರೆ. ಪರಸ್ಪರ ಕಲ್ಲು ತೂರಾಟ ನಡೆದಿದೆ. ತಡೆಯಲು ಬಂದ ಪೊಲೀಸರ ಮುಂದೆ. ಮೂರ್ತಿಯನ್ನು ಯಥಾ ಪ್ರಕಾರ ಬಜರಂಗಿಗಳು ಒಡೆದು ಹಾಕಿದ್ದಾರೆ. ಪೊಲೀಸರ ಸಕಾಲಿಕ ಕ್ರಮದಿಂದ ಹೆಚ್ಚಿನ ಅನಾಹುತ ತಪ್ಪಿದೆ. ಆದರೆ ರಾತ್ರಿ ಎರಡೂ ಕಡೆಯಿಂದ ದಾಳಿಗಳು ಉಂಟಾಗಿವೆ. ಮರುದಿನ ಹತ್ತಿರದ ಮುಗೇರಡ್ಕ ಜಾತ್ರೆಯಲ್ಲಿಯೂ ಪ್ರಭಾಕರ ಭಟ್ಟನ ಭಾಷಣ ಪ್ರಭಾವ ಬೀರಿದೆ. ಅಲ್ಲಿ ಜಾತ್ರೆ ನೋಡಲು ಬಂದ, ಸಂತೆಯಲ್ಲಿ ಅಂಗಡಿ ಇಟ್ಟ ಬ್ಯಾರಿಗಳ ಮೇಲೆ ತೀವ್ರ ರೀತಿಯಲ್ಲಿ ಹಲ್ಲೆ ಮಾಡಲಾಗಿದೆ, ಯಥಾ ಪ್ರಕಾರ ತಡೆಯಲು ಬಂದ ಪೊಲೀಸರ ಮೇಲೆ ಹಲ್ಲೆ ನಡೆಸಲಾಗಿದೆ. ನಿಧಾನಕ್ಕೆ ಜಿಲ್ಲೆಯಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗತೊಡಗಿದೆ.

ಜನ ಎಚ್ಚೆತ್ತು ಕೊಳ್ಳುತ್ತಾರಾ? ಅಥವಾ ಮತಾಂಧರು ಹರಡಿರುವ ಬಲೆಗೆ ಬೀಳುವ ಮಿಕಗಳಾಗುತ್ತಾರಾ? ಎಂಬುವುದು ಈಗಿನ ಪ್ರಶ್ನೆ. ಸಮಾಧಾನದ ಸಂಗತಿ ಎಂದರೆ ಪೊಲೀಸರು ಉಪ್ಪಿನಂಗಡಿ ಮಸೀದಿ ಅಧ್ಯಕ್ಷರಿಂದ ದೂರು ಪಡೆದು ಕಲ್ಲಡ್ಕ ಭಟ್ಟನ ವಿರುದ್ಧ ಕೋಮುಪ್ರಚೋದನೆಯ ಕೇಸು ದಾಖಲಿಸಿರುವುದು. ಹಾಸ್ಯಾಸ್ಪದ ಸಂಗತಿ ಎಂದರೆ ತಮ್ಮದೇ ಸರಕಾರದ ವಿರುದ್ಧ ಬಿಜೆಪಿಗರು [illegible] ಮೇಲೆ ಕೇಸು ದಾಖಲಿಸಿರುವುದರ ವಿರುದ್ಧ ಪ್ರತಿಭಟನೆ ನಡೆಸುತ್ತಿರುವುದು ಮತ್ತು ಉಸ್ತುವಾರಿ ಮಂತ್ರಿ [illegible] ಕೋಡಂಗಿಯಂತೆ ಪ್ರಭಾಕರ [illegible] ಮತ್ತು ಪೊಲೀಸರನ್ನು [illegible]

ಮಕ್ಕಳು–ಮಹಿಳೆಯರಿಗೆ ಕಾಡುತ್ತಿರುವ ಅಪೌಷ್ಟಿಕತೆ ಮತ್ತು ಅಂಗನವಾಡಿಗಳನ್ನು ದುರ್ಬಲಗೊಳಿಸುವ ನೀತಿಗಳು

ಎಸ್.ವರಲಕ್ಷ್ಮಿ

ಭಾರತ ಇಂದೂ ಕೂಡ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 189 ರಾಷ್ಟ್ರಗಳಲ್ಲಿ 137ನೇ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯ ಭಾರತದಲ್ಲಿ 11ನೇ ಮತ್ತು ದಕ್ಷಿಣ ಭಾರತದಲ್ಲಿ ಕಡೆಯ ಸ್ಥಾನವನ್ನು ಪಡೆದುಕೊಂಡಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಗಣನೆಗೆ ತೆಗೆದುಕೊಳ್ಳುವ ಅಂಶಗಳಲ್ಲಿ ನಿರುದ್ಯೋಗ, ಬಡತನ ಬಹಳ ಪ್ರಮುಖವಾದದ್ದು. ಹೊಳೆಯುವ ಭಾರತದಲ್ಲಿ ಒಂದೆಡೆ ಅಪೌಷ್ಟಿಕತೆಯಿಂದ 42% ಮಕ್ಕಳು ಹಾಗೂ ಅನೀಮಿಯಾದಿಂದ ಗರ್ಭಿಣಿ–ಬಾಣಂತಿಯರು ಬಳಲುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ಇದುವರೆಗೂ ನಮ್ಮನ್ನಾಳಿದ ಮತ್ತು ಆಳುತ್ತಿರುವ ಪ್ರಭುತ್ವಗಳ ನೀತಿಗಳು, ಜನರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲಾರದೇ ಸುಧಾರಣವಾದದ ನೀತಿಗಳಾಗಿ ಹೊರಗೆ ಬಂದಿದ್ದರೂ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲದಿರುವುದು.

ಇತ್ತೀಚೆಗೆ ನಮ್ಮೆಲ್ಲರ ಗಮನಸೆಳೆದಿರುವುದು ರಾಯಚೂರು ಜಿಲ್ಲೆಯಲ್ಲಿ ತೀವ್ರ ಅಪೌಷ್ಟಿಕತೆಯಿಂದ ಮಕ್ಕಳು ಸಾಯುವ ಪರಿಸ್ಥಿತಿಯಲ್ಲಿರುವುದು. ಇಂತಹ ಹಲವು ಘಟನೆಗಳು ರಾಜ್ಯದಲ್ಲಿ ಬೇಕಾದಷ್ಟು ನಡೆಯುತ್ತಲೇ ಇದ್ದರೂ ಸರ್ಕಾರ ಮತ್ತು ಮಾಧ್ಯಮಗಳ ಗಮನ ಸೆಳೆದಿಲ್ಲ ಅಷ್ಟೇ.

ಈ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರಗಳು ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಆಹಾರ ಭದ್ರತೆಗಳನ್ನು ಒದಗಿಸುವುದು, ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಯತ್ನಗಳನ್ನು ಮಾಡುತ್ತದೆ. ಆದರೆ ಈ ವ್ಯವಸ್ಥೆಗಳು ಪರಿಣಾಮಕಾರಿಯಾಗಿವೆಯೇ ಎಂಬುದನ್ನು ಪರಿಶೀಲಿಸೋಣ.

ಇಂದಿನ ಮಕ್ಕಳೇ ಮುಂದಿನ ಜನಾಂಗ. ರಾಷ್ಟ್ರದ ಪ್ರಗತಿಯು ಮಕ್ಕಳ ಪಾಲನೆ–ಪೋಷಣೆಯ ಮೇಲೆ ಅವಲಂಭಿತವಾಗಿದೆ. 6 ವರ್ಷದೊಳಗಿನ ಮಗುವಿನ ದೈಹಿಕ ಬೆಳವಣಿಗೆ 40%ರಷ್ಟು ಮಾನಸಿಕ ಬೆಳವಣಿಗೆ 80%ರಷ್ಟು ಆಗುವುದು ಈ ವಯಸ್ಸಿನಲ್ಲಿಯೇ. ಈ ವಯಸ್ಸಿನಲ್ಲಿರುವ ಮಗುವಿಗೆ ಪೌಷ್ಟಿಕ ಆಹಾರ, ಮೂಲಭೂತ ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕೆಂದೂ 1954 ರಿಂದ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿ, ಆ ಯೋಜನೆಗಳು ಪರಿಣಾಮಕಾರಿಯಾಗದೇ 1975 ರಂದು ಅಧಿಕೃತವಾಗಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಯುನಿಸೆಫ್ ಸಹಾಯದೊಂದಿಗೆ ಭಾರತ ಸರ್ಕಾರ ಪ್ರಾರಂಭ ಮಾಡಿತು. ದೇಶದೆಲ್ಲೆಡೆ ಇದು ಜಾರಿಯೂ ಆಯಿತು. ಬಹುಶಃ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳಲ್ಲಿ ಅತ್ಯಂತ ದೀರ್ಘಕಾಲಿಕವಾಗಿ ಜೀವಂತವಾಗಿರುವುದು ಈ ಯೋಜನೆಯೇ !

ರಾಜ್ಯದ ಪರಿಸ್ಥಿತಿ :

2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು 71ಲಕ್ಷದ82ಸಾವಿರ, ಅಂಗನವಾಡಿಗಳಿಗೆ ಹೋಗುವ ಮಕ್ಕಳು 38 ಲಕ್ಷ ಮಾತ್ರ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ ಅಂಶಗಳ ಪ್ರಕಾರ 33ಲಕ್ಷದ 54ಸಾವಿರದ141 ಮಕ್ಕಳನ್ನು ಅಂಗನವಾಡಿ ಕೇಂದ್ರಗಳ ಮುಖಾಂತರ ತೂಕ ಮಾಡಲಾಗಿದೆ. ಅದರಲ್ಲಿ ಸಾಮಾನ್ಯ ತೂಕ 21ಲಕ್ಷ56ಸಾವಿರ, ಸಾಧಾರಣ ತೂಕ11ಲಕ್ಷ36ಸಾವಿರ, ಅತೀ ಕಡಿಮೆ ತೂಕ61.142 ಎಂದು ಹೇಳುತ್ತಿವೆ. 9ಲಕ್ಷ70ಸಾವಿರ ಗರ್ಭಿಣಿ–ಬಾಣಂತಿಯರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಇವರಿಗಾಗಿ ಸರ್ಕಾರ ಸುಮಾರು 1019 ಕೋಟಿ ರೂ. ಖರ್ಚು ಮಾಡುತ್ತಿದೆ. ಪೌಷ್ಟಿಕ ಆಹಾರಕ್ಕಾಗಿಯೇ 619 ಕೋಟಿ ಹಣವನ್ನು ಕೇಂದ್ರ – ರಾಜ್ಯ ಸರ್ಕಾರಗಳು ಸಮವಾಗಿ ಖರ್ಚು ಮಾಡುತ್ತಿವೆ.



ಯೋಜನೆಯ ದೌರ್ಬಲ್ಯಗಳು :

* ಒಂದು ಮಗುವಿಗೆ 4ರೂ, ಗರ್ಭಿಣಿ–ಬಾಣಂತಿ ಕಿಶೋರಿಯರಿಗೆ 5, ತೀವ್ರ ಅಪೌಷ್ಟಿಕತೆ ಇರುವ ಮಕ್ಕಳಿಗೆ 6ರೂಗಳನ್ನು ಸರ್ಕಾರ ವೆಚ್ಚ ಮಾಡುತ್ತಿದೆ.

* 3 ವರ್ಷದೊಳಗಿನ ಮಗುವಿಗೆ ದಿನಕ್ಕೆ 88 ಗ್ರಾಂ, 3 ರಿಂದ 6 ವರ್ಷದ ಮಗುವಿಗೆ ದಿನಕ್ಕೆ 62 ರಿಂದ 90ಗ್ರಾಂ ಗರ್ಭಿಣಿ,ಬಾಣಂತಿ, ಕಿಶೋರಿಯರಿಗೆ ದಿನದಕ್ಕೆ 180ಗ್ರಾಂ ಇಷ್ಟೇ ಆಹಾರವನ್ನು ಕೊಟ್ಟು, ಇದಕ್ಕೆ ಪೂರಕ ಪೌಷ್ಟಿಕ ಆಹಾರ ಎನ್ನಲಾಗುತ್ತದೆ. ಈ ಗ್ರಾಂಗಳ ಲೆಕ್ಕದಲ್ಲಿ ಕೊಡುವ ಆಹಾರ ಕೂಡ ಮಕ್ಕಳನ್ನು ಆಕರ್ಷಿಸುತ್ತಿಲ್ಲ ಎಂಬ ವರದಿಗಳು ನಿರಂತರವಾಗಿದೆ. ಈ ಯೋಜನೆಯ ಮುಖ್ಯ ಕೇಂದ್ರ ಬಿಂದುವೇ "ಪೂರಕ ಪೌಷ್ಟಿಕ ಆಹಾರ". ಆದರೆ ಅದು ಕೂಡ ರೆಡಿಮೇಡ್ ಆಹಾರ. "ತಿನ್ನುವ ಆಹಾರ ಪದಾರ್ಥಗಳಲ್ಲಿ ಹಲವು ಪ್ರೋಟಿನ್ – ವಿಟಾಮಿನ್ ಗಳು ಇರಬೇಕು" ಎಂದು 2001ರ ಮಧ್ಯಂತರ ತೀರ್ಪಿನಲ್ಲಿ ಸುಪ್ರಿಂಕೋರ್ಟ್ ತಿಳಿಸಿದೆ. ಅದರ ನಂತರ ರಾಜ್ಯ ಸರ್ಕಾರ ಈ ರೆಡಿಮೇಡ್ ಆಹಾರವನ್ನು ಕೊಡುತ್ತಿದೆ. ಇದರಿಂದಾಗಿ ಕರ್ನಾಟಕ ರಾಜ್ಯದ ಮಕ್ಕಳ ಮೇಲೆ ಪರಿಣಾಮ ಬಿರುವುದರ ಜೊತೆಗೆ ಇನ್ನೂ ಕೆಲವು ಅವಘಡಗಳಿಗೆ ದಾರಿ ಮಾಡಿಕೊಟ್ಟಿದೆ. 2011ರಲ್ಲಿ ಅಂಗನವಾಡಿ ಕೇಂದ್ರಗಳ ವಿಲೀನ ಎಂಬ ಸುತ್ತೋಲೆ ಹೊರಡಿಸಿದ್ದು, ಇದರ ಪ್ರಕಾರ 5ಕ್ಕಿಂತ ಕಡಿಮೆ ಮಕ್ಕಳಿರುವ ಕೇಂದ್ರಗಳನ್ನ ಮುಚ್ಚಬೇಕು.

ಮಕ್ಕಳ ಹಾಜರಾತಿ ಕುಸಿತಕ್ಕೆ ಮುಖ್ಯ ಕಾರಣ :

* ಪೌಷ್ಟಿಕ ಆಹಾರದ ಬದಲಾವಣೆ

* ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು.

ರಾಜ್ಯದಲ್ಲಿ 60 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ 34.913 ಮಾತ್ರ ಸ್ವಂತ ಕಟ್ಟಡ ಹೊಂದಿದ್ದು ಉಳಿದವುಗಳು ಬಾಡಿಗೆ ಮನೆ, ದೇವಸ್ಥಾನದ ವರಾಂಡ, ಸಮುದಾಯ ಭವನ ಮತ್ತಿತರ ಕಡೆಗಳಲ್ಲಿ ನಡೆಯುತ್ತಿದೆ. ಇರುವ ಕೇಂದ್ರಗಳು ಬಹುತೇಕ, ಪ್ರತ್ಯೇಕ ಅಡುಗೆ ಕೋಣೆ, ಆಟವಾಡಲು ಸ್ಥಳ, ಆಹಾರ ಪದಾರ್ಥಗಳನ್ನಿಡುವ ಕೋಣೆಗಳಿಲ್ಲದ, ಕುಡಿಯುವ ನೀರು ಲಭ್ಯವಿಲ್ಲದ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇಲ್ಲದ, ದುಃಸ್ಥಿತಿಯಲ್ಲಿರುವ ಸಣ್ಣ–ಸಣ್ಣ ಕೋಣೆಗಳಲ್ಲಿ (10–15 ಅಡಿ ಜಾಗದಲ್ಲಿ) ನಡೆಯುತ್ತಿರುವುದರಿಂದ ಮಕ್ಕಳನ್ನು ಆಕರ್ಷಿಸುತ್ತಿಲ್ಲ.

ಮಕ್ಕಳನ್ನು ಆಕರ್ಷಿಸುವ ಆಟಿಕೆ ಸಾಮಾನುಗಳು, ಮಕ್ಕಳು ಕುಳಿತು ಕೊಳ್ಳುವ ನೆಲವು ಕೂಡ ಸ್ವಚ್ಛವಾಗಿರುವುದು ಅಗತ್ಯವಾಗಿದೆ.

ಇಡೀ ದೇಶದಲ್ಲಿ ಮಕ್ಕಳಿಗಾಗಿರುವ ಏಕೈಕ ಯೋಜನೆಯಾದ ಸಮಗ್ರ ಶಿಶು ಅಭಿವೃದ್ಧಿಯಲ್ಲಿ ಇಷ್ಟೆಲ್ಲ ವೈಫಲ್ಯಗಳಿವೆ. ಇವುಗಳ ನಿವಾರಣೆಯ ಜೊತೆಗೆ ಜೊತೆಗೆ ಹಲವು ಸಂಕಷ್ಟಗಳ ಮಧ್ಯದಲ್ಲಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆ – ಸಹಾಯಕಿಯರಿಗೆ ಬದುಕಿನ ಭದ್ರತೆಯನ್ನು ಕೊಡುವುದರೊಟ್ಟಿಗೆ ಈ ಯೋಜನೆಯನ್ನು ಬಲಿಷ್ಠಪಡಿಸಬೇಕಾಗಿದೆ.

ಎಲ್ಲರೂ ಮರೆಯುತ್ತಿರುವ ವಿಷಯ ಎಂದರೆ ಐಸಿಡಿಎಸ್ ಅನ್ನು ಪ್ರತ್ಯೇಕವಾದ ನಿರ್ದೇಶನಾಲಯವನ್ನು ಮಾಡದೇ ಇರುವುದು. ಈ ಪ್ರಸ್ತಾಪ ಏಕೆಂದರೆ ಐಸಿಡಿಎಸ್ ಮೂಲ ಉದ್ದೇಶಗಳನ್ನು ಈಡೇರಿಸಲು ಇರುವ ಆಡಳಿತಾತ್ಮಕ ವ್ಯವಸ್ಥೆಯನ್ನು ರಾಜ್ಯ ಸರ್ಕಾರದ ಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿ, ವಿವಿಧ ಸರ್ವೆಗಳು, ಚುನಾವಣೆ, ಜನಗಣತಿ,ಕೌಟುಂಬಿಕ ಕಲಹಾ ಕಾಯ್ದೆಗಳನ್ನು ಜಾರಿ ಮಾಡುವಂತಹ ಕೆಲಸಗಳಲ್ಲಿ ತೊಡಗಿಸಿರುವುದು. ಅಂದರೆ ಯೋಜನೆಯ ಮುಖ್ಯ ಉದ್ದೇಶಗಳನ್ನು ಅಂಕಿ ಅಂಶಗಳಿಗೆ ಸೀಮಿತವಾಗಿಸಿ ಯೋಜನೇತರ ಕೆಲಸಗಳಿಗೆ ಇಡೀ ಇಲಾಖೆಯನ್ನು ಉಪಯೋಗಿಸುತ್ತಿರುವುದು ಕೂಡಾ ಒಂದು ಪ್ರಮುಖ ಕಾರಣ.

ಇದೇ ಸಮಯದಲ್ಲಿಯೇ 11ನೇ ಪಂಚವಾರ್ಷಿಕ ಯೋಜನೆ, ಈ ಯೋಜನೆಗಾಗಿ 73 ಸಾವಿರ ಕೋಟಿ ಅಗತ್ಯವಿದೆ ಎಂದು ಹೇಳಲಾಗಿತ್ತು. ಆದರೆ ಇದುವರೆಗೂ ಕೇಂದ್ರ ಸರ್ಕಾರ 40% ಮಾತ್ರ ಹಣವನ್ನು ಮಂಜೂರು ಮಾಡಿದೆ.

* ಇದರಿಂದಾಗಿಯೇ ಆಹಾರದ ಗುಣಮಟ್ಟವನ್ನು ಮತ್ತು ಅಗತ್ಯವಿರುವ ಪ್ರಮಾಣವನ್ನು ಕೊಡಲು ಸಾಧ್ಯವಾಗಬೇಕು.
* ಅಂಗನವಾಡಿ ಕೇಂದ್ರಗಳನ್ನು ಶಿಶುಧಾಮಗಳನ್ನಾಗಿ ಪರಿವರ್ತಿಸಿ, ಪೂರ್ವಪ್ರಾಥಮಿಕ ಶಿಕ್ಷಣ ಕೊಡಲು ಸಾಧ್ಯವಾಗಬೇಕು.
* ಎಲ್ಲ ವ್ಯವಸ್ಥೆಯಿರುವ ಸ್ವಂತ ಕಟ್ಟಡವಿರಬೇಕು.
* ಆರೋಗ್ಯ & ಮಕ್ಕಳ ಮಹಿಳೆಯರ ಕಲ್ಯಾಣ ಇಲಾಖೆಗೆ ತಕ್ಕ ಹಾಗೆ ಅನುದಾನಗಳು ಸರಿಯಾಗಿ ಬಿಡುಗಡೆಯಾಗಬೇಕು.
* ಯೋಜನೇತರ ಕೆಲಸವನ್ನು ಬಿಡಿಸಬೇಕು.

ಹಾಗೆಯೇ ಪಡಿತರ ವ್ಯವಸ್ಥೆ ದಕ್ಷಿಣ ಭಾರತದಲ್ಲಿಯೇ ಕರ್ನಾಟಕ ದಲ್ಲಿ ಆತಂಕಕಾರಿಯಾಗಿದೆ. 2ರೂ.ಗೆ 1ಕೆ.ಜಿ. ಅಕ್ಕಿ ಕೊಡುವ ಸರ್ಕಾರದ ವಾಗ್ದಾನವನ್ನು ಜಾರಿ ಮಾಡಲು ಸಾಧ್ಯವಾಗಬೇಕು. ಇವೆಲ್ಲ ಆದರೆ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗುತ್ತದೆಯಾದರೂ ಸಂಪೂರ್ಣ ಬದಲಾವಣೆಯಾಗುವುದಿಲ್ಲ. ಸಂಪೂರ್ಣ ಬದಲಾವಣೆಗೆ ಬೇಕಾದ ಮೂಲ ನೀತಿಗಳಲ್ಲಿ ಬದಲಾವಣೆ ಕಾಣಬೇಕಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರೇಗಾ ಕೂಲಿಯ ಬಗ್ಗೆ ಹಗೆತನದ ನಿಲುವು ಬೇಡ
ಯುಪಿಎ ಸರಕಾರಕ್ಕೆ ಸುಪ್ರಿಂ ಕೋರ್ಟ್ ಸಲಹೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಶಾಸನ ಅಥವ ರೇಗಾ ಯುಪಿಎ ಸರಕಾರದ 'ಆಮ್ ಆದ್ಮಿ' ಪರತೆಯ ಜ್ವಲಂತ ಉದಾಹರಣೆ ಎಂದು ಪ್ರದರ್ಶಿಸಲು ಸದಾ ಕಾತುರವಾಗಿರುವ ಯುಪಿಎ ಸರಕಾರದ ಗೋಸುಂಬೆತನ ಈ ವಿಷಯದಲ್ಲೂ ಆಗಾಗ ಬಯಲಿಗೆ ಬರುತ್ತಲೇ ಇದೆ. ಈಗ ಜನವರಿ 23ರಂದು ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ ಮತ್ತೊಮ್ಮೆ ಅದು ಬಯಲಾಗಿದೆ. ಈ ಯೋಜನೆಯಲ್ಲಿ ಕೊಡುವ ಕೂಲಿಗೆ ರಾಜ್ಯದ ಕನಿಷ್ಟ ಕೂಲಿ ಶಾಸನ ಅನ್ವಯವಾಗಬೇಕು ಎನ್ನುವ ಕರ್ನಾಟಕ ಹೈಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಯುಪಿಎ ಸರಕಾರ ಸುಪ್ರಿಂ ಕೋರ್ಟ್‌ಗೆ ಹೋಗಲೂ ಹೇಸಲಿಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬೇಡವೆಂದರೂ ಸ್ವತಃ ಪ್ರಧಾನ ಮಂತ್ರಿಗಳ ಒತ್ತಾಯದಿಂದ(ನಿಜ, ಇದು ಅಪೌಷ್ಟಿಕತೆಯ ಬಗ್ಗೆ -ಜ್ಞಾನೋದಯದ ಅವರ ಉದ್ಗಾರದ ಮೊದಲು) ಯುಪಿಎ-2 ಸರಕಾರ ದೇಶದ ಕೋಟ್ಯಂತರ ಬಡಜನರಿಗೆ ಕನಿಷ್ಟ ಕೂಲಿ ಅನ್ವಯವಾಗಬಾರದೆಂದು ದೇಶದ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿತು. ಅದರ ಈ ಕ್ರಮಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಆಕ್ಷೇಪ ವ್ಯಕ್ತಪಡಿಸಿತು.

ಈಗ ಸುಪ್ರಿಂಕೋರ್ಟ್ ಕೂಡ ಈ ತೀರ್ಪನ್ನು ಎತ್ತಿ ಹಿಡಿದಿದೆ. ಅದಕ್ಕಿಂತಲೂ ಹೆಚ್ಚಾಗಿ ದೇಶದ ಬಡಜನರಿಗೆ ಪ್ರಯೋಜನವಾಗುವ ಇಂತಹ ಒಂದು ಯೋಜನೆಯಲ್ಲಿ ಹಗೆತನದ ನಿಲುವು ತಳೆಯಬೇಡಿ ಎಂದು ಯುಪಿಎ-2 ಸರಕಾರಕ್ಕೆ ಅದು ನೀಡಿರುವ ಸಲಹೆ ಯುಪಿಎ-2 ಸರಕಾರದ ಜನ-ವಿರೋಧಿ ಮಾನಸಿಕತೆಯನ್ನು ಮತ್ತೊಮ್ಮೆ ಬಯಲಿಗೆ ತಂದು ನಿಲ್ಲಿಸಿದೆ. ಕನಿಷ್ಟ ಕೂಲಿ ಅನ್ವಯಿಸಿದರೆ ಜನವರಿ 2009ರಿಂದ ಕೊಡಬೇಕಾದ ಬಾಕಿಯನ್ನು ತೆರುವ ಬಗ್ಗೆ ಸದ್ಯಕ್ಕೆ ತಡೆಯಾಜ್ಞೆ ದೊರೆತಿರುವುದಷ್ಟೇ 'ಆಮ್ ಆದ್ಮಿ'ಯ ಕಪಟ ಮಂತ್ರ ಜಪಿಸುವವರಿಗೆ ದೊರೆತಿರುವ ಸಮಾಧಾನ!

ಯುಪಿಎ ಸರಕಾರದ ಸಾಲಿಸಿಟರ್ ಜನರಲ್ ಕರ್ನಾಟಕ ಹೈಕೋರ್ಟಿನ ಆದೇಶ ಸರಕಾರದ ಮೇಲೆ 7500ಕೋಟಿ ರೂ.ಗಳ ಹೊರೆ ಹಾಕುತ್ತದೆ, ಸರಕಾರಕ್ಕೆ ಹಣಕಾಸು ಮತ್ತು ಬಜೆಟ್ ಮಿತಿಗಳಿವೆ ಎಂದು ವಾದಿಸ ಹೊರಟಾಗ ನ್ಯಾಯಾಲಯ, ದೇಶದ ಬಡಜನರಿಗೆ ಪ್ರಯೋಜನವಾಗಲೆಂದು ತಂದಿರುವ ಒಂದು ಯೋಜನೆಯಲ್ಲಿ ಸರಕಾರ ಕಾರ್ಮಿಕರ ಹಕ್ಕುಗಳಿಗೆ ಕತ್ತರಿ ಹಾಕುತ್ತಿದೆ ಎಂದು ಕಂಡು ಬರದಂತೆ, ರೇಗಾ ಕೂಲಿಗಳೂ ರಾಜ್ಯಗಳ ಕನಿಷ್ಟ ಕೂಲಿಗಳು ಹೊಂದಿಕೊಳ್ಳುವಂತೆ



ಸಮಾಲೋಚನೆಗಳ ಮೂಲಕ ಪರಿಹಾರ ಕಂಡುಕೊಳ್ಳಿ ಎಂದು ಸಲಹೆ ಮಾಡಿತು. ರೇಗಾದ ಕೂಲಿದರ 14 ರಾಜ್ಯಗಳ ಕನಿಷ್ಟ ಕೂಲಿದರಕ್ಕಿಂತ ಕೆಳಗಿದೆ ಎನ್ನಲಾಗಿದೆ. ಇವಕ್ಕೆ ಸಮನಾಗಿ ಕೂಲಿಕೊಟ್ಟರೆ ಯುಪಿಎ ಸರಕಾರದ ಮೇಲೆ ಬರುವ ಹೆಚ್ಚಿನ ಹಣಕಾಸು ಹೊರೆ ಈ ವರ್ಷ 1472 ಕೋಟಿ ರೂ., ಒಟ್ಟು ಬಾಕಿ ಮೊತ್ತ ರೂ.7472 ಕೋಟಿ. ಶ್ರೀಮಂತರಿಗೆ, ಉದ್ಯಮಿಗಳಿಗೆ ಲಕ್ಷಾಂತರ ಕೋಟಿ ರೂ.ಗಳ ನೇರ ರಿಯಾಯ್ತಿಗಳನ್ನು ಕೊಡಲು ಸಿದ್ಧವಿರುವ ಸರಕಾರ ದೇಶದ ಕೋಟ್ಯಂತರ ಬಡಜನರಿಗೆ ಸ್ವಲ್ಪ ಪರಿಹಾರ ನೀಡುವ ರೇಗಾ ಕೂಲಿಯನ್ನು ಕಾನೂನಿನ ಪ್ರಕಾರವೇ ಇರುವ ಮಟ್ಟಕ್ಕೆ ತರಲು ನಿರಾಕರಿಸಿ ಕೋರ್ಟ್ ಮೆಟ್ಟಲೇರಿರುವುದು, ಅದಕ್ಕೆ ಈ ರೀತಿ ಪರೋಕ್ಷ ಛೀಮಾರಿ ಎದುರಿಸಿರುವುದು ನಾಚಿಕೆಗೇಡಿನ ಸಂಗತಿ ಎಂದು ಯುಪಿಎ ಪ್ರಭೃತಿಗಳಿಗೆ ಅನಿಸಿರುವಂತಿಲ್ಲ.

★

ಅಂಬಾನಿ ಅನಿಲ: 15000 ಕೋಟಿ ರೂ. ನಷ್ಟವಾದರೂ ಪರವಾಗಿಲ್ಲ!

ದೇಶದ ಕೋಟ್ಯಂತರ ಬಡಜನತೆಗೆ ನ್ಯಾಯ ಒದಗಿಸಲು ಸುಮಾರು 8000 ಕೋಟಿ ರೂ. ಕೊಡಲು ನಿರಾಕರಿಸುವ ಸರಕಾರವೇ ದೇಶದ ಇಂಧನ ಆರ್ಥಿಕಕ್ಕೆ 15,000 ಕೋಟಿ ರೂ. ನೇರ ನಷ್ಟ ಉಂಟು ಮಾಡಿರುವ ಒಬ್ಬ ಶತಕೋಟ್ಯಾಧಿಪತಿ ಉದ್ದಿಮೆದಾರನೊಂದಿಗೆ ನೈಸರ್ಗಿಕ ಅನಿಲ ಉತ್ಪಾದನೆಗೆ ಮಾಡಿಕೊಂಡಿರುವ ಕಾಂಟ್ರಾಕ್ಟನ್ನು ಮರುವಿಮರ್ಶೆಗೆ ಒಳಪಡಿಸಲು ಹಿಂಜರಿಯುತ್ತಿದೆ!

ಕೆಜಿ ಬೇಸಿನ್(ಕೃಷ್ಣ-ಗೋದಾವರಿ ಜಲಾನಯನ)ಡಿ6 ನೈಸರ್ಗಿಕ ಅನಿಲ ಕ್ಷೇತ್ರದಿಂದ ಮುಕೇಶ್ ಅಂಬಾನಿಯವರ ರಿಲಯನ್ಸ್ ಕಂಪನಿ ಪ್ರತಿದಿನ 70 ಮಿಲಿಯ ಘನಮೀಟರ್ ಅನಿಲ ಉತ್ಪಾದಿಸುವುದಾಗಿ ಸರಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತ್ತು. ಆದರೆ ಎಂದೂ ಆ ಮಟ್ಟಕ್ಕೆ ತಲುಪದ ಆ ಕಂಪನಿ ಈಗ ಉತ್ಪಾದನೆಯನ್ನು 48 ಮಿಲಿಯದಿಂದ 35 ಮಿಲಿಯಕ್ಕೆ ಇಳಿಸಿರುವುದೇ ಅಲ್ಲದೆ ನೈಸರ್ಗಿಕ ಅನಿಲದ ದರವನ್ನು ಹೆಚ್ಚಿಸಿ ಎಂದು ಸರಕಾರದ ಮೇಲೆ ಒತ್ತಡ ಹಾಕುತ್ತಿದೆ. ವಾಸ್ತವವಾಗಿ, ಈ ರೀತಿ ಉತ್ಪಾದನೆಯನ್ನು ತಗ್ಗಿಸಿ ಅದು ದೇಶದ ಇಂಧನ ಆರ್ಥಿಕಕ್ಕೆ 15000 ಕೋಟಿ ರೂ.ಗಳ ನೇರ ನಷ್ಟವನ್ನು ಉಂಟುಮಾಡಿದೆ.

ಈ ಹಿಂದೆ ರಿಲಯಂಸ್ ಕಂಪನಿ ಅನಿಲ ಉತ್ಪಾದನೆಗೆ ಬಹಳ ಖರ್ಚಾಗುತ್ತಿದೆ ಎಂದಾಗ ಯುಪಿಎ ಸರಕಾರದ ಅಧಿಕಾರಿಕ ಮಂತ್ರಿಗಳ ಗುಂಪು(ಇಜಿಒಎಂ) ಒಂದು ಬೆಲೆಯನ್ನು ನಿರ್ಧರಿಸಿತು. ಈ ಹಿನ್ನೆಲೆಯಲ್ಲಿ ನೈಸರ್ಗಿಕ ಅನಿಲದ ಬೆಲೆ ನಿಗದಿ ವಿಧಾನವನ್ನು ಸಿಎಜಿ (ಭಾರತದ ಮಹಾಲೆಕ್ಕ ಪರಿಶೋಧಕರು) ವಿಮರ್ಶಾತ್ಮಕವಾಗಿ ಪರೀಕ್ಷಿಸುವಂತೆ ಏರ್ಪಡಿಸಬೇಕು ಎಂದು ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೇನ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದರು. ಯಥಾಪ್ರಕಾರ ಅದಕ್ಕೆ ಪ್ರಧಾನಿಗಳ ಸ್ಪಂದನೆ ಇಲ್ಲ, ಕ್ರಮವೂ ಇಲ್ಲ. ಈಗ ಉತ್ಪಾದನೆಯನ್ನು ಮತ್ತಷ್ಟು ಇಳಿಸಿ, ಬೆಲೆಯನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಅಂಬಾನಿಯವರ ಕಂಪನಿ ಅಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ ಮತ್ತೆ ಜನವರಿ 15ರಂದು ತಪನ್ ಸೇನ್ ಪ್ರಧಾನಿಗಳಿಗೆ ಪತ್ರ ಬರೆದಿದ್ದಾರೆ. ಒಬ್ಬ ಕಂಟ್ರಾಕ್ಟರ್ ಹೆಚ್ಚು ದರ ಪಡೆಯಲು ಉತ್ಪಾದನೆ ಇಳಿಸುವಂತಹ ಒತ್ತಡ ತಂತ್ರಗಳನ್ನು ಬಳಸುತ್ತಾನೆ ಎಂಬುದು ನಿರೀಕ್ಷಿತವೇ. ಅದಕ್ಕೆ ಪ್ರತಿಯಾಗಿ ಒಪ್ಪಂದದ ಇನ್ನೊಂದು ಪಾರ್ಟಿಯಾದ ಸರಕಾರ ಕೂಡ ಪ್ರತಿತಂತ್ರ ಬಳಸಬೇಕು ಎಂಬುದು ಕೂಡ ಯಾರಾದರೂ ನಿರೀಕ್ಷಿಸುವ ಸಂಗತಿ. ಸತತವಾಗಿ ಕಾಂಟ್ರಾಕ್ಟಿನ ಶರತ್ತುಗಳನ್ನು ಮುರಿಯುತ್ತಿರುವವನು ಅದನ್ನು ಮುಂದುವರೆಸಲು ಬಿಡಬೇಕೇ, ಕಾಂಟ್ರಾಕ್ಟನ್ನು ಮರುವಿಮರ್ಶಿಸುವ ತನ್ನ ಹಕ್ಕನ್ನು ಸರಕಾರ ಚಲಾಯಿಸಬೇಡವೇ ಎಂಬುದು ಸಹಜವಾಗಿ ಏಳುವ ಪ್ರಶ್ನೆ. ತಪನ್ ಸೇನ್ ಅವರು ಪ್ರಧಾನಿಗಳ ಮುಂದೆ ಇದೇ ಪ್ರಶ್ನೆಯನ್ನು ಇಟ್ಟು ಈ ಸಮಸ್ತ ಕಾಂಟ್ರಾಕ್ಟಿನ ಪುನರ್ವಿಮರ್ಶೆ ಮಾಡಬೇಕು ಎಂದು ಮತ್ತೊಮ್ಮೆ ಆಗ್ರಹಿಸಿದ್ದಾರೆ.

ದೇಶದಲ್ಲಿನ ಇಂಧನ ಬಿಕ್ಕಟ್ಟಿನ ಪರಿಹಾರಕ್ಕೆ ಈ ಮಹಾಉದ್ಯಮಿಯೂ ಇದ್ದ ದೊಡ್ಡ ಉದ್ಯಮಿಗಳ ತಂಡ ಭೇಟಿಯಾದಾಗ, ಒಳ್ಳೆಯ ದಾರಿ ತೋರಿಸುತ್ತಿದ್ದೀರಾ ಎಂದು ಬೆನ್ನು ತಟ್ಟಿದ, ಅತ್ತ ಬಡಕಾರ್ಮಿಕರಿಗೆ ಕನಿಷ್ಟಕೂಲಿ ಕೊಡಬೇಕೆಂಬ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಎಂದ ವ್ಯಕ್ತಿ ಇಂತಹ ಪುನರ್ವಿಮರ್ಶೆಗೆ ಮುಂದಾಗುತ್ತಾರೆಯೇ? ●



ವೇದರಾಜ ಎನ್.ಕೆ.

ಅಪಮಾನ ತೊಡೆಯಲು ಕೆಂಬಾವುಟವ ಎತ್ತಿ'

ಪುಟ 10 ರಿಂದ

ಗುರುತಿಸಿದೆ. ದಲಿತರ ಮುಂದಿರುವ ಪ್ರಶ್ನೆ ಭೂಮಿಯ ವಿಚಾರ – ಭೂಮಿಯ ಪ್ರಶ್ನೆ ಪ್ರಧಾನ ಅಂಶವಾಗಿದೆ. ಇನ್ನು ಎಸ್‌ಸಿಪಿ ಯ ಹಣ ಸಾರ್ವಜನಿಕ ಹಣ. ಈ ಹಣವನ್ನು ಸೂಕ್ತ ರೀತಿಯಲ್ಲಿ ಬಳಸಬೇಕು ಹಾಗೂ ಉದ್ದೇಶಗಳ ಈಡೇರಿಕೆಗಾಗಿ ಅನುಷ್ಠಾನಗೊಳಿಸಬೇಕು. ಮೊದಲು ಈ ಎರಡು ವಿಚಾರಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಹೋರಾಟವನ್ನು ಆರಂಭಿಸಬೇಕು. ಸರ್ಕಾರವು ನವಉದಾರವಾದ ನೀತಿಗಳನ್ನು ಜಾರಿಗೆ ತರುತ್ತಿದೆ. ಇದರಿಂದಾಗಿ ಮೊದಲು ಹೆಚ್ಚು ತೊಂದರೆಗೆ ಒಳಗಾಗುವವರು ದಲಿತರು. ಕೇಂದ್ರ ಸರ್ಕಾರದ 'ನವ ಉದಾರವಾದ ನೀತಿ'ಗಳ ವಿರುದ್ಧದ ಹೋರಾಟ ಗಳಲ್ಲಿ ದಲಿತರನ್ನೂ ಅಣಿಗೊಳಿಸಬೇಕು. " ಈ ಹಿನ್ನೆಲೆಯಲ್ಲಿ ಕಾರ್ಯಾಗಾರದಲ್ಲಿ ಅಂಗೀಕರಿಸಿದ ನಿರ್ಣಯ ಗಳ ಜಾರಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ತರುವಂತ 'ಚಳುವಳಿ'ಯನ್ನು ರೂಪಿಸಬೇಕು. ಆ ನಿಟ್ಟಿನಲ್ಲಿ ಪಕ್ಷದ ಎಲ್ಲಾ ಸಮಿತಿಗಳು ಸ್ವ-ವಿಮರ್ಶೆ ಮಾಡಿಕೊಂಡು, ಸಾಮಾನ್ಯ ವಿಷಯಗಳಿಗೆ ಗಮನ ಹರಿಸುವಂತೆ, ದಲಿತರ ಹಕ್ಕುಗಳ ರಕ್ಷಣೆಗಾಗಿ ನಿರ್ದಿಷ್ಟವಾದ ಕಾಳಜಿ ವಹಿಸಬೇಕು ಎಂದು ನಿರ್ಧಾರಕ್ಕೆ ಬರಲಾಯಿತು. ●

ಉತ್ತಮ ಭಾರತಕ್ಕಾಗಿ ಜನಾಂದೋಲನ

ಪುಟ 7 ರಿಂದ

ಗುಣಮಟ್ಟವನ್ನು ಕೂಡ ಬಹುವಾಗಿ ಉತ್ತಮ ಪಡಿಸಬಹುದಾಗಿತ್ತು.

ಅಂದರೆ ಭಾರತ ಬೆಳೆಯುತ್ತಿಲ್ಲ, ಅಭಿವೃದ್ಧಿ ಹೊಂದುತ್ತಿಲ್ಲ ಎಂದೇನೂ ನಾವು ಹೇಳುತ್ತಿಲ್ಲ. ಆದರೆ, ಈ ಬೆಳವಣಿಗೆಯನ್ನು, ಅಭಿವೃದ್ಧಿಯನ್ನು ಬಹುಪಾಲು ಜನಗಳ ಬದುಕುಗಳನ್ನು ಬಲಿಗೊಟ್ಟು ಕೆಲವರಿಗೆ ಮಾತ್ರವೇ ಅವುಗಳ ಪ್ರಯೋಜನ ದಕ್ಕುವ ರೀತಿಯಲ್ಲಿ ರೂಪಿಸಲಾಗಿದೆ. ಇಂತಹ ಉದ್ದೇಶ ಪೂರ್ವಕವಾದ ಅಸಮತೋಲನವನ್ನು ಸರಿಪಡಿಸಬೇಕಾಗಿದೆ. ಅದು ಬಲಿಷ್ಟ ಜನಾಂದೋಲನಗಳಿಂದ, ಸರಕಾರ ತನ್ನ ಆರ್ಥಿಕ ನೀತಿಗಳ ದಿಕ್ಕನ್ನು ಜನತೆಯ ಪರವಾಗಿ ಬದಲಿಸುವಂತೆ ಮಾಡುವಂತಹ ಜನಾಂದೋಲನಗಳಿಂದ ಮಾತ್ರವೇ ಸಾಧ್ಯ.

ಆದ್ದರಿಂದ ಜನತೆಯ ಈ ಎಲ್ಲ ಹಕ್ಕುಗಳು ಒಂದು ಉತ್ತಮ ಭಾರತದಲ್ಲಿ ವಾಸ್ತವಗೊಳ್ಳುವಂತಾಗಲು, ಇಂತಹ ಹೋರಾಟಗಳ ಶಕ್ತಿವರ್ಧನೆಗೆ ಮುಂದಾಗುವಂತೆ ಎಲ್ಲ ದೇಶಪ್ರೇಮಿ ಭಾರತೀಯರಿಗೆ 63ನೇ ಗಣತಂತ್ರ ದಿನ ಆಹ್ವಾನ ನೀಡುತ್ತಿದೆ. ●

ಸಿಪಿಐ(ಎಂ) 20ನೇ ರಾಜ್ಯ ಸಮ್ಮೇಳನದ ಸಂದೇಶ

ಪುಟ 5 ರಿಂದ.....

ಹೋರಾಟಗಳನ್ನು ನಡೆಸಿದೆ. ಜೊತೆಗೆ ಜನಸಾಮಾನ್ಯರನ್ನು ಕಾಡುತ್ತಿರುವ ಬೆಲೆಯೇರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟಗಳನ್ನು ನಡೆಸುತ್ತಾ ರಾಜ್ಯದ ರಾಜಕೀಯವೆಂಬ ಭ್ರಷ್ಟ ವ್ಯವಸ್ಥೆಯಲ್ಲಿ ನಿರಂತರ ಹೋರಾಟಗಳನ್ನು ರೂಪಿಸಿ ರಾಜ್ಯದ ಜನತೆಯ ದೃಷ್ಟಿಯಲ್ಲಿ ಒಂದು ಸಣ್ಣ ಆಶಾಕಿರಣವನ್ನು ಮೂಡಿಸುವ ಪ್ರಯತ್ನವನ್ನು ಮಾಡಿದೆ. ರಾಜ್ಯದ ಎಲ್ಲಾ ವಿಭಾಗದ ಜನತೆಯ ಸಮಸ್ಯೆಗಳನ್ನು ತೆಗೆದುಕೊಂಡಿದ್ದಲ್ಲದೆ ರಾಜ್ಯದ ಶಿಕ್ಷಣ ಮತ್ತು ಸಾಂಸ್ಕೃತಿಕ ರಂಗದ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಿದೆ. ಇದರ ಭಾಗವಾಗಿ ಚಿಕ್ಕಬಳ್ಳಾಪುರದಲ್ಲಿ ನಡೆದ 20 ನೇ ಪಕ್ಷದ ರಾಜ್ಯ ಸಮ್ಮೇಳನ ಬಹಳ ರಾಜಕೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ನಾಲ್ಕು ದಿನಗಳ ಸಮ್ಮೇಳನದ ಭಾಗವಾಗಿ 8 ರಂದು ನಡೆದ ಬಹಿರಂಗ ಸಭೆ ಮತ್ತು ಅದರಲ್ಲಿ ಭಾಗವಹಿಸಿದ್ದ ಬೃಹತ್ ಜನ ಸಮೂಹವು ಇಡೀ ಪಕ್ಷಕ್ಕೆ ಹುಮ್ಮಸ್ಸು ಉತ್ಸಾಹ ಮತ್ತು ಸ್ಫೂರ್ತಿಯನ್ನು ನೀಡಿದೆಯಲ್ಲದೆ ಇಡೀ ರಾಜ್ಯದ ರಾಜಕಾರಣದಲ್ಲಿ ತಮ್ಮನ್ನು ಕಡೆಗಣಿಸುವಂತಿಲ್ಲ ಎಂಬ ಸಂದೇಶವನ್ನು ರಾಜ್ಯದ ಜನತೆಗೆ ತಿಳಿಸಿದೆ. ಇನ್ನು 3 ದಿವಸಗಳ ಕಾಲ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ನಡೆದ ಚರ್ಚೆಗಳು ಮತ್ತು ವ್ಯಕ್ತವಾದ ಭಾವನೆಗಳು ರಾಜ್ಯದಲ್ಲಿ ಪಕ್ಷವನ್ನು ಬಲಿಷ್ಠವಾಗಿ ಕಟ್ಟುವ ಅನಿವಾರ್ಯತೆಯನ್ನು ಮತ್ತು ನಾಯಕತ್ವಕ್ಕೆ ಒಂದು ರೀತಿಯ ಎಚ್ಚರಿಕೆಯನ್ನು ಕೊಟ್ಟಿದೆ. ಈ ಸಮ್ಮೇಳನದಲ್ಲಿ ಅಂಗೀಕಾರ ಮಾಡಿದ 33 ನಿರ್ಣಯಗಳು ಬಹಳ ಮಹತ್ವವನ್ನು ಪಡೆದುಕೊಂಡಿವೆ. ರಾಜ್ಯದ ರಾಜಕೀಯ ಪರಿಸ್ಥಿತಿ ಆರ್ಥಿಕ ಸಮಸ್ಯೆಗಳು ಮತ್ತು ಸಾಮಾಜಿಕ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟಗಳನ್ನು ರೂಪಿಸಲು ನಿರ್ಣಯಿಸಿದೆ. ಈ ನಿರ್ಣಯಗಳ ಆಧಾರದಲ್ಲಿ ಹಂತ ಹಂತವಾದ ಹೋರಾಟಗಳನ್ನು ರೂಪಿಸಿ ತನ್ನ ನಾಯಕತ್ವದಲ್ಲಿರುವ ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸುತ್ತಾ ಅದರ ಮೂಲಕ ಪಕ್ಷದ ಸಂಘಟನೆಯನ್ನು ಬಲಪಡಿಸಿ ಒಂದು ಬಲಿಷ್ಠ ರಾಜಕೀಯ ಶಕ್ತಿಯಾಗಿ ಬೆಳೆಯಬೇಕು ಮತ್ತು ರಾಜ್ಯದಲ್ಲಿ ಈಗ ನೆಲೆಸಿರುವ ರಾಜಕೀಯ ಪರಿಸ್ಥಿತಿಯಲ್ಲಿ ಜನಪರ ಹೋರಾಟಗಳನ್ನು ನಡೆಸುವುದರ ಮುಖಾಂತರ ಹೊಸ ಜನಪರ ರಾಜಕೀಯ ಶಕ್ತಿಯನ್ನು ರಾಜ್ಯದಲ್ಲಿ ರೂಪಿಸಬೇಕೆಂಬುದು 20ನೇ ರಾಜ್ಯ ಸಮ್ಮೇಳನದ ಆಶಯವಾಗಿದೆ. ಈ ಆಶಯ ಯಶಸ್ವಿಯಾಗಬೇಕಾದರೆ ಇಡೀ ಪಕ್ಷ ಐಕ್ಯತೆಯಿಂದ ದೃಢವಾಗಿ ಅಂಗೀಕಾರವಾಗಿರುವ ನಿರ್ಣಯಗಳ ಆಧಾರದಲ್ಲಿ ಸಮರ ಶೀಲ ಹೋರಾಟಗಳನ್ನು ನಡೆಸಬೇಕಾಗಿದೆ.

ಹೋರಾಟದ ರೂಪಗಳು ಇನ್ನು ಮುಂದೆ ಬದಲಾಗಬೇಕೆಂದು ಸಮ್ಮೇಳದ ಒಟ್ಟು ಆಶಯವಾಗಿದೆ. ಹೋರಾಟಗಳು ಕೇವಲ ಕಾರ್ಯಕ್ರಮಗಳಾಗಬಾರದು, ಬದಲಿಗೆ ರಾಜ್ಯದ ಜನತೆಯ ಗಮನ ಸೆಳೆಯುವ ರೀತಿ ಸಮರಶೀಲ ಹೋರಾಟಗಳಾಗಬೇಕೆಂದು ಸಮ್ಮೇಳನವು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದೆ. ಕಮ್ಯೂನಿಸ್ಟ್ ಪಕ್ಷವೆಂದರೆ ಅದು ಬರೀ ಸಂಘಟನೆ ಮಾತ್ರವಲ್ಲ ಅದೊಂದು ಕ್ರಾಂತಿಕಾರಿ ಚಳುವಳಿ ಎಂದು ರೂಪಿಸಬೇಕಾಗಿದೆ. ಜನರ ಆಶೋತ್ತರಗಳನ್ನು ದುಡಿಯುವ ವರ್ಗದ ಹಿತವನ್ನು ರಕ್ಷಿಸಿ ಅವರ ಪರವಾಗಿ ಎಂತಹ ತ್ಯಾಗಮಯ ಹೋರಾಟಕ್ಕೂ ಸಿ.ಪಿ.ಐ.(ಎಂ) ಪಕ್ಷ ಸಿದ್ಧವೆಂಬ ನಂಬಿಕೆಯನ್ನು ರಾಜ್ಯದ ಜನತೆಯಲ್ಲಿ ಮೂಡಿಸಬೇಕಾಗಿದೆ. ಬರುವ 3 ವರ್ಷಗಳಲ್ಲಿ ಪಕ್ಷವನ್ನು ರಾಜ್ಯದಲ್ಲಿ ಬಲಿಷ್ಠಗೊಳಿಸುವುದಲ್ಲದೆ ವಿಸ್ತರಿಸಬೇಕಾಗಿದೆ. ನಮ್ಮದೊಂದು ರಾಜಕೀಯ ಪಕ್ಷ ನಾವು ರಾಜಕೀಯವಾಗಿ ಬಲಿಷ್ಠವಾಗಿ ಬೆಳೆಯದೆ ಹೋದರೆ ನಮ್ಮನ್ನು ಜನತೆ ರಾಜಕೀಯ ಪಕ್ಷವೆಂದು ಪರಿಗಣಿಸಲಾರರು. ನಾವು ಬರೀ ಹೋರಾಟಗಳಿಗೆ ಮಾತ್ರ ಅರ್ಹರು ರಾಜ್ಯದ ರಾಜಕಾರಣದಲ್ಲಿ ಇವರ ಪಾತ್ರವೇನು ಇಲ್ಲವೆಂಬ ಅಭಿಪ್ರಾಯ ಜನತೆಯಲ್ಲಿ ಬಂದರೆ ನಾವು ಒಂದು ಬಲಿಷ್ಠ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಲಾರದು. ಹಾಗಾಗಿ ಬರುವ ದಿನಗಳಲ್ಲಿ ನಮ್ಮ ಸಂಘಟನಾ ಶಕ್ತಿಯನ್ನು ವಿಸ್ತಾರಗೊಳಿಸಿ ಬಲಿಷ್ಠಗೊಳಿಸುವುದರ ಜೊತೆಗೆ ಒಂದು ರಾಜಕೀಯ ಶಕ್ತಿಯಾಗಿ ಬೆಳೆದು ರಾಜ್ಯದ ಜನತೆಗೆ ಒಂದು ಜನಪರ ರಾಜಕೀಯ ಶಕ್ತಿ ಪರ್ಯಾಯವನ್ನು ರೂಪಿಸುವಲ್ಲಿ ಸಿ.ಪಿ.ಐ.(ಎಂ) ಪಕ್ಷದ 20ನೇ ರಾಜ್ಯ ಸಮ್ಮೇಳನದ ದೃಢ ಅಭಿಪ್ರಾಯವಾಗಿದೆ. ಇದನ್ನು ಸಾಧಿಸಬೇಕಾದರೆ ಇಡೀ ಪಕ್ಷವನ್ನು ಪಕ್ಷದ ನಾಯಕತ್ವ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ. ಇದು ನಮ್ಮೆಲ್ಲರ ಕ್ರಾಂತಿಕಾರಿ ಕರ್ತವ್ಯವಾಗಿದೆ.

ಲೋಕಪಾಲ್: ಸರಕಾರದ ನಿಲವಿಗೆ ಖಂಡನೆ

ಪುಟ 2 ರಿಂದ.....

ಶಕ್ತಿಗಳನ್ನು ಪ್ರತ್ಯೇಕಿಸಲು ಮತ್ತು ಹಿಂದುತ್ವವಾದಿ ಪಡೆಯ ಹುನ್ನಾರಗಳ ವಿರುದ್ಧ ಹೋರಾಟಗಳನ್ನು ಮುಂದುವರೆಸುವಂತೆಯೂ ಅದು ಕರೆ ನೀಡಿದೆ. ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸೋಲಿಸಲು ಪಕ್ಷ ಶ್ರಮಿಸುತ್ತದೆ. ಪಕ್ಷದ ಸ್ವತಂತ್ರ ಪಾತ್ರವನ್ನು ಅಭಿವೃದ್ಧಿಪಡಿಸಲು ಹಾಗೂ ಪಕ್ಷವನ್ನು ಒಂದು ಅಖಿಲ ಭಾರತ ಶಕ್ತಿಯನ್ನಾಗಿ ಬಲಪಡಿಸಲು ಆದ್ಯತೆ ನೀಡಬೇಕೆಂದು ಗೊತ್ತುವಳಿ ಕರೆ ಕೊಟ್ಟಿದೆ. ಪ್ರಸಕ್ತ ವ್ಯವಸ್ಥೆಯ ವಿರುದ್ಧ ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಿಬೆಳೆಸಲು ಪಕ್ಷ ಕೆಲಸ ಮಾಡುತ್ತದೆ. ಜನತೆಯ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು, ಜಾತ್ಯತೀತತೆಯನ್ನು ರಕ್ಷಿಸಲು, ರಾಷ್ಟ್ರೀಯ ಸಾರ್ವಭೌಮತ್ವ ಹಾಗೂ ಒಕ್ಕೂಟ ತತ್ವವನ್ನು ರಕ್ಷಿಸಲು ನಡೆಸುವ ಹೋರಾಟಗಳಲ್ಲಿ ಇತರ ಕಾಂಗ್ರೇಸೇತರ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಬೆಂಬಲವನ್ನು ಪಕ್ಷ ಕೋರುತ್ತದೆ.

ಕರಡು ಸೈದ್ಧಾಂತಿಕ ಗೊತ್ತುವಳಿ

'ಕೆಲವು ಸೈದ್ಧಾಂತಿಕ ವಿಷಯಗಳ ಮೇಲಿನ' ಕರಡು ಗೊತ್ತುವಳಿಯನ್ನು ಕೇಂದ್ರ ಸಮಿತಿ ಅಂಗೀಕರಿಸಿತು. ಜಾಗತಿಕ ಬಂಡವಾಳಶಾಹಿಯ ಪ್ರಸಕ್ತ ಹಾಗೂ ದೀರ್ಘಕಾಲೀನ ಬಿಕ್ಕಟ್ಟು ಮತ್ತು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ದೇಶಗಳ ಮೇಲೆ ಅದರ ಪರಿಣಾಮಗಳ ಕುರಿತು ಈ ಗೊತ್ತುವಳಿ ಚರ್ಚಿಸಿದೆ. ಸಾಮ್ರಾಜ್ಯಶಾಹಿ ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಕೈಗೊಳ್ಳುವ ನಡೆಗಳನ್ನು ಮತ್ತು ತಮ್ಮ ಪಾರಮ್ಯವನ್ನು ಕಾಯ್ದುಕೊಳ್ಳಲು ಅವು ಕೈಗೊಳ್ಳುವ ಸೈದ್ಧಾಂತಿಕ ಕ್ರಮಗಳ ಬಗ್ಗೆಯೂ ಅದು ಚರ್ಚಿಸಿದೆ. ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ವ್ಯಕ್ತವಾಗುತ್ತಿರುವ ಹೆಚ್ಚುತ್ತಿರುವ ಪ್ರತಿರೋಧ ಹಾಗೂ ಜಗತ್ತಿನೆಲ್ಲೆಡೆ ಕಾರ್ಮಿಕ ವರ್ಗ ಹಾಗೂ ಇತರೆ ಮಿತ್ರ ಶಕ್ತಿಗಳು ಪರಿಣಾಮಕಾರಿ ಹಾಗೂ ಸಂಯುಕ್ತ ಪ್ರತಿರೋಧವನ್ನು ರೂಪಿಸಲು ಅಗತ್ಯವಾದ ಸೈದ್ಧಾಂತಿಕ ಕಾರ್ಯಭಾರಗಳ ಬಗ್ಗೆಯೂ ಅದು ಗಮನಹರಿಸಿದೆ. ಸಮಾಜವಾದಿ ದೇಶಗಳಲ್ಲಿನ ವಿದ್ಯಮಾನಗಳನ್ನೂ ಅದು ಚರ್ಚಿಸಿದೆ. ಹಾಗೂ 21ನೇ ಶತಮಾನಕ್ಕೆ ಪ್ರಸ್ತುತವಾದ ನವೀಕೃತ ಸಮಾಜವಾದಿ ಪರ್ಯಾಯ ರೂಪಿಸುವ ಅಗತ್ಯದ ಬಗ್ಗೆಯೂ ಈ ಗೊತ್ತುವಳಿ ಚರ್ಚಿಸಿದೆ. ಭಾರತೀಯ ಸಮಾಜದಲ್ಲಿ ಕಮ್ಯೂನಿಸ್ಟರು ಎದುರಿಸುತ್ತಿರುವ ಸೈದ್ಧಾಂತಿಕ ಸವಾಲುಗಳನ್ನು ಅದು ಗಮನಕ್ಕೆ ತೆಗೆದುಕೊಂಡಿದ್ದು ಬಂಡವಾಳಶಾಹಿ, ಪಾಳೇಗಾರಿ ಹಾಗೂ ಇತರೆ ಪ್ರತಿಗಾಮಿ ಸಿದ್ಧಾಂತಗಳನ್ನು ಎದುರಿಸಲು ಅಗತ್ಯವಾದ ಪರ್ಯಾಯ ಜಾಗತಿಕ ದೃಷ್ಟಿಕೋನವನ್ನು ಮುಂದಿಟ್ಟಿದೆ.

ಕೂಲಿಕಾರ ದೇವೇಂದ್ರಪ್ಪನ ಆತ್ಮಹತ್ಯೆ

ಪುಟ 4 ರಿಂದ......

ಜಿಲ್ಲೆಯ ಇತರ ಕಡೆಗಳಿಂದ ಬಂದಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು.

ಬಹಿರಂಗ ಸಭೆ ಹಾಗೂ ಮನವಿ ಸಲ್ಲಿಕೆ : ಸುಮಾರು 60 ಕಿ.ಮೀ. ದೂರವನ್ನು ಕ್ರಮಿಸಿ ಬಂದ ಕೂಲಿಕಾರರ ಕಾಲ್ನಡಿಗೆ ಜಾಥಾ ಜನವರಿ 19ರಂದು ಮಧ್ಯಾಹ್ನ ಜಿಲ್ಲಾಧಿಕಾರಿಗಳ ಕಛೇರಿಯನ್ನು ತಲುಪಿದಾಗ ಜನಸಾಗರವೇ ಅಲ್ಲಿ ಸೇರಿತ್ತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೂತನ ರಾಜ್ಯ ಕಾರ್ಯದರ್ಶಿಗಳೂ ಮಾಜಿ ಶಾಸಕರು ಆಗಿರುವ ಕಾಮ್ರೇಡ್ ಜಿ.ವಿ.ಶ್ರೀರಾಮ ರೆಡ್ಡಿ ಅವರು ಪ್ರಮುಖ ಭಾಷಣಕಾರರಾಗಿ ಆಗಮನಿಸಿದ್ದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಲಪಟಾಯಿಸಲು ಅವಕಾಶ ಕಲ್ಪಸಿರುವ ರಾಜ್ಯದ ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದರು. ಕೂಲಿಕಾರ ದೇವಿಂದ್ರಪ್ಪನ ಆತ್ಮಹತ್ಯೆ ನಡೆದು ಇಷ್ಟು ದಿನಗಳಾದರೂ ಇದುವರೆಗೆ ಚುನಾಯಿತ ಪ್ರತಿನಿಧಿಯಾಗಿ, ಸರ್ಕಾರದ ಯಾವನೇ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಲಿ ಸ್ಥಳಕ್ಕೆ ಭೇಟಿ ಕೊಡದಿರುವುದನ್ನು ಖಂಡಿಸಿದ ಅವರು ಕೂಲಿಕಾರರ ಚಳುವಳಿಗೆ ಪಕ್ಷದ ಬೆಂಬಲವನ್ನು ಘೋಷಿಸಿದರು. ಉದ್ಯೋಗ ಖಾತ್ರಿ ಯೋಜನೆ ತನ್ನದೆಂದುಕೊಂಡು ಬೀಗುತ್ತಿರುವ ಕೇಂದ್ರ ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿದ ಅವರು ರಾಜ್ಯ ಹೈಕೋರ್ಟ್ ನೀಡಿದ ತೀರ್ಪಿನ ಪ್ರಕಾರ ಕೆಲಸಗಾರರಿಗೆ ಕೂಲಿ ವಿತರಣೆ ಮಾಡುವ ಬದಲು ಸುಪ್ರೀಂಕೋರ್ಟ್‌ನಲ್ಲಿ ರಾಜ್ಯ ಹೈಕೋರ್ಟಿನ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿ ಮುಖಭಂಗಕ್ಕೆ ಒಳಗಾಗಿದೆ ಎಂದು ಹೇಳಿದರು.

ಕೂಲಿಕಾರರನ್ನು ಉದ್ದೇಶಿಸಿ ಕೂಲಿಕಾರರ ಸಂಘದ ಮುಖಂಡರಾದ ನಿತ್ಯಾನಂದಸ್ವಾಮಿ, ಚಂದ್ರಪ್ಪ ಹೊಸ್ಕೇರಾ, ಭೀಮಶೆಟ್ಟಿ ಯಂಪಳ್ಳಿ, ದಾವಲ್‌ಸಾಬ್ ನದಾಫ್, ಮಲ್ಲಮ್ಮ ಕೋಡ್ಲಿ, ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೌರಮ್ಮ ಪಾಟೀಲ್ ಮಾತನಾಡಿದರು. ದೇವಿಂದ್ರಪ್ಪ ಕುಟುಂಬಕ್ಕೆ ಗರಿಷ್ಠ ಪರಿಹಾರ ಅಲ್ಲದೆ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 100 ದಿನಗಳ ಬದಲು ಕೂಲಿಕಾರರು ಬಯಸುವಷ್ಟು ದಿನಗಳ ಕೆಲಸ, ಬಾಕಿ ವೇತನ ಪಾವತಿ, ಕಾಳಗಿ, ಗೋಟೂರು, ಭಂಕೂರು, ಚಿಂಚೋಳಿ(ಎಚ್) ಮೊದಲಾದ ಗ್ರಾಮ ಪಂಚಾಯತಿಗಳ ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ನೀಡಬೇಕೆಂದು ಆಗ್ರಹಿಸುವ ಮನವಿ ಪತ್ರವನ್ನು ಪ್ರಾದೇಶಿಕ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಮುಖಂಡರಾದ ಕಲ್ಲಪ್ಪ ಚೀಲಿ, ಸುಧಾಮ ಧನ್ನಿ, ಶರಣಬಸಪ್ಪ ಮಮಶೆಟ್ಟಿ, ಗಂಗಮ್ಮ ಬಿರಾದಾರ್, ಎಸ್.ಎಂ.ಸಾಗರ್ ಅವರುಗಳಲ್ಲದೆ ರೈತ ಸಂಘದ ಮುಖಂಡರಾದ ಮೇಘರಾಜ ಕಠಾರೆ, ಮೋಹನ್ ಕಟ್ಟಿಮನಿ, ಮೊಹಬೂಷ್ಹಾ ಕುರಕೋಟಿ, ಸಿದ್ಧಯ್ಯ ಹಿರೇಮಠ, ಜನವಾದಿ ಮಹಿಳಾ ಸಂಘಟನೆಯ ಜಗದೇವಿ ನೂಲ್ಕರ್ ಮತ್ತು ಶಶಿಕಲಾ ಪಾಟೀಲ್ ಮೊದಲಾದವರು ಉಪಸ್ಥಿತರಿದ್ದರು.

ಉ.ಕ.–ಶಾಸಕರ ಲಿಖಿತ ಭರವಸೆ ಅಣಶಿ ರಸ್ತೆತಡೆ ಯಶಸ್ವಿ

ಅಣಶಿ–ಕುಂಬಾರವಾಡ ರಸ್ತೆ ಪುನರ್ ನಿರ್ಮಾಣಕ್ಕೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಬಲದೊಂದಿಗೆ ಅಣಶಿ ಮೂಲಸೌಕರ್ಯ ಹೋರಾಟ ಸಮಿತಿ ಹಮ್ಮಿಕೊಂಡ ಉತ್ತರ ಕನ್ನಡ ಜಿಲ್ಲೆ ಜೋಯಡಾ ತಾಲೂಕಿನ ಅಣಶಿಯಲ್ಲಿ ರಾಜ್ಯ ಹೆದ್ದಾರಿ ತಡೆ 4 ತಾಸು ನಡೆದಾಗ ಶಾಸಕ ಸುನೀಲ ಹೆಗಡೆಯವರು ಸ್ಥಳಕ್ಕೆ ಬಂದು ಲಿಖಿತ ಭರವಸೆ ನೀಡಿದ ನಂತರ ಮುಕ್ತಾಯಗೊಳಿಸಲಾಯಿತು. ಜನವರಿ 4ರಂದು ಯಶಸ್ವಿಯಾಗಿ ನಡೆದ ರಾಜ್ಯ ಹೆದ್ದಾರಿ ತಡೆ ಚಳುವಳಿಯನ್ನು ಬೆಂಬಲಿಸಿ ಸುತ್ತಮುತ್ತಲಿನ ಗ್ರಾಮಗಳ 400ಕ್ಕೂ ಹೆಚ್ಚು ಜನ ಹಾಗೂ ಜೋಯಡಾ ತಾಲೂಕ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ನೂರಾರು ವಾಹನಗಳು ರಸ್ತೆಯ 2 ಬದಿಗೆ ತಡೆಹಿಡಿಯಲ್ಪಟ್ಟಿದ್ದವು.

6–7 ವರ್ಷಗಳಿಂದ ಹತ್ತಾರು ಹೋರಾಟಗಳು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಡೆದರೂ ರಾಜ್ಯ ಸರ್ಕಾರದ ಮಂತ್ರಿಗಳು ಅಧಿಕಾರಿಗಳು ಕ್ಯಾರೆ ಎನ್ನದಾಗ ಜನರು ಅನಿವಾರ್ಯವಾಗಿ ಅನಿರ್ದಿಷ್ಟ ರಸ್ತೆ ತಡೆಗೆ ಮುಂದಾದರು. ಹಿಂದುಳಿದ ಜೋಯಡಾದ ಬಗ್ಗೆ ಮಾರುದ್ದ ಮಾತನಾಡುವ ಸರಕಾರದ ಪ್ರತಿನಿಧಿಗಳ ಬಗ್ಗೆ ಜನ ಭ್ರಮನಿರಸನಗೊಂಡು ಈ ರಸ್ತೆ ತಡೆ ಚಳುವಳಿಗೆ ಇಳಿದಿದ್ದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ 18–20 ಕಿ.ಮೀ. ರಸ್ತೆಯನ್ನು ದುರಸ್ತಿ ಮಾಡದಂತಹ ಹೊಣೆಗೇಡಿ ರಾಜ್ಯ ಸರಕಾರ ನಮ್ಮ ರಾಜ್ಯದಲ್ಲಿದೆ. ಜಿಲ್ಲಾ ಉಸ್ತುವಾರಿ ಸಚಿವರು ಶಿರಸಿ ಬಿಟ್ಟು ಅಲುಗಾಡುತ್ತಿಲ್ಲ. ಇನ್ನೊಬ್ಬ ಸಚಿವರು ಈಕಡೆ ನೋಡುತ್ತಿಲ್ಲ. ನಿತ್ಯ ಸಾವಿರಾರು ಜನ ನರಕಯಾತನೆ ಅನುಭವಿಸುತ್ತಿದ್ದಾರೆ. ನೂರಾರು ಶಾಲಾ ಕಾಲೇಜು ವಿದ್ಯಾರ್ಥಿಗಳು, ಕಾರವಾರದಿಂದ–ಬೆಳಗಾವಿ, ದಾಂಡೇಲಿ ಕಡೆ ಹೋಗುವ ಸಾವಿರಾರು ಪ್ರಯಾಣಿಕರು, ಪ್ರವಾಸಿಗರು, ಗರ್ಭಿಣಿ ಮಹಿಳೆಯರು, ಅನಾರೋಗ್ಯ ಪೀಡಿತರು ಅನಿವಾರ್ಯವಾಗಿ ಈ ರಸ್ತೆಯಲ್ಲಿ ಓಡಾಡಬೇಕಾಗಿದೆ. ದೂಳು ಮುತ್ತಿಕೊಂಡ ರಸ್ತೆ, ತಗ್ಗು, ದಿಣ್ಣೆ, ಹೊಂಡಗಳಲ್ಲಿ ರಸ್ತೆ ಎಲ್ಲಿದೆ ಎಂದು ವಾಹನ ಚಾಲಕರಿಗೆ ಗೊತ್ತಾಗುತ್ತಿಲ್ಲ. ಕಾಡಿನ ಮಧ್ಯೆ ವಾಹನ ಕೆಟ್ಟು ನಿಂತಾಗ ಜನತೆ ಭಯಾನಕ ಪರಿಸ್ಥಿತಿ ಎದುರಿಸುವಂತಾಗಿದೆ. ಮಾತೆತ್ತಿದರೆ ವನ್ಯಜೀವಿ, ಹುಲಿಯೋಜನೆ ಬಗ್ಗೆ ಮಾತಾಡುವ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಮನುಷ್ಯರಿಗಿಂತ ಪ್ರಾಣಿಗಳ ಮೇಲೆ 'ಪ್ರೀತಿ' ಹೆಚ್ಚಾಗಿದೆ. ಜನವಿರೋಧಿಗಳಾದ ಮಂತ್ರಿಗಳ, ಅಧಿಕಾರಿಗಳ ಧೋರಣೆಯನ್ನು ತೀವ್ರವಾಗಿ ಖಂಡಿಸುವುದಲ್ಲದೆ, ಸಂಬಂಧಪಟ್ಟವರು ನಿರ್ದಿಷ್ಟ ಕ್ರಮ ತೆಗೆದುಕೊಳ್ಳದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.



ಕಾರ್ಮಿಕ ಸಂಘದ(CITU) ಜಿಲ್ಲಾ ಮುಖಂಡರಾದ ಯಮುನಾ ಗಾಂವಕರ ರಸ್ತೆ ತಡೆ ಹೋರಾಟವನ್ನು ಬೆಂಬಲಿಸಿ ಮಾತನಾಡಿ ರಸ್ತೆ ಕಾಮಗಾರಿ ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ಆಗ್ರಹಿಸಿದರು.

ಹೋರಾಟ ಸಮಿತಿಯ ದತ್ತಾ ದೇಸಾಯಿ ದುದಗಾಳಿಯವರು ಪ್ರಾಂತ ರೈತ ಸಂಘದ ಜೋಯಡಾ ತಾಲೂಕ ಸಮಿತಿ ಕಾರ್ಯದರ್ಶಿ ಪ್ರೇಮಾನಂದ ವೇಳಿಪ, ಕಾರವಾರ ತಾಲೂಕ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ ಕದ್ರಾ, ಪತ್ರಕರ್ತ ಸುಭಾಶ ಗಾವುಡ ಹೋರಾಟ ಬೆಂಬಲಿಸಿ ಮಾತನಾಡಿದರು.

ಲಿಖಿತ ಭರವಸೆ : ಫೆಬ್ರವರಿ ಕೊನೆಯೊಳಗೆ ರಸ್ತೆ ಕಾಮಗಾರಿ ಪ್ರಾರಂಭಿಸುವುದಾಗಿ ಲಿಖಿತವಾಗಿ ಬರೆದುಕೊಟ್ಟ ಶಾಸಕ ಸುನೀಲ ಹೆಗಡೆಯವರು ಮಾತನಾಡಿ ಹಲವಾರು ತೊಡಕುಗಳಿಂದ ರಸ್ತೆ ಕಾಮಗಾರಿ ವಿಳಂಬವಾಯಿತು. ಇನ್ನು ಮುಂದೆ ಯಾವುದೆ ತೊಂದರೆ ಬರುವುದಿಲ್ಲ. ಮುಖ್ಯಮಂತ್ರಿಗಳಿಂದ ಆದೇಶ ಪಡೆಯಲಾಗಿದೆ. ಟೆಂಡರ್ ಪ್ರಕ್ರಿಯೆಗೆ 45 ದಿನ ಬೇಕಾದ್ದರಿಂದ ಫೆಬ್ರವರಿ ಕೊನೆಗೆ ಕಾಮಗಾರಿ ಪ್ರಾರಂಭಿಸಲಾಗುತ್ತದೆ ಎಂದದ್ದಲ್ಲದೇ ಅಣಸಿಯಿಂದಲೆ ಕಾಮಗಾರಿ ಆರಂಭಿಸುವುದಾಗಿ ತಿಳಿಸಿದ ಮೇಲೆ ರಸ್ತೆ ತಡೆ ವಾಪಸ್ಸು ಪಡೆಯಲಾಯಿತು.

ಗೈರು ಹಾಜರಿ : ಸ್ಥಳೀಯ ಜಿಲ್ಲಾ ಪಂಚಾಯತ ಸದಸ್ಯರಾದ ಸುಭಾಂಗಿ ಗಾವುಡಾ, ತಾಲೂಕ ಪಂಚಾಯತ ಸದಸ್ಯರಾದ ಜೋಶ್ನಾ ಪೆಡ್ನೇಕರ ಇವರು ಜನತೆಯ ಹೋರಾಟದಲ್ಲಿ ಭಾಗವಹಿಸದೆ ತೀವ್ರ ಟೀಕೆಗೆ ಒಳಗಾದರು.

ಹೋರಾಟದಲ್ಲಿ ರೈತ ಮುಖಂಡರಾದ ನಾರಾಯಣ ವೇಳಿಪ, ರಾಜೇಶ ಗಾವುಡಾ, ದಿಗಂಬರ ದೇಸಾಯಿ, ಅಣಸಿ ಗ್ರಾ.ಪಂ. ಅಧ್ಯಕ್ಷರಾದ ಸಾಧನಾ, ಸದಸ್ಯರಾದ ಕೃಷ್ಣ, ಕಾರ್ಮಿಕ ಮುಖಂಡರಾದ ಎಚ್.ಬಿ. ನಾಯಕ, ಜಿಲ್ಲಾ ಯುವಜನ ಮುಖಂಡ ರಾದ ಡಿ. ಶ್ಯಾಮಸನ್, ಇಮ್ರಾನ್ ದಾಂಡೇಲಿ ಮುಂತಾದವರು ಹಾಜರಿದ್ದರು.

ತಹಶೀಲ್ದಾರ ಪ್ರೀತಮ ನಸಲಾಪುರ, ಪಿ.ಡಬ್ಲ್ಯೂ.ಡಿ.ಯ ಎಸ್.ಕೆ. ಹಿರೇಮಠ ಮುಂತಾದ ಅಧಿಕಾರಿಗಳು ಹಾಜರಿದ್ದರು.

ಶಾಂತಾರಾಮ ನಾಯಕ

ವಂತಿಗೆ ವಸೂಲಿ–ಶಿಕ್ಷಣದ ವ್ಯಾಪಾರ ನಿಂತಿಲ್ಲ; ಕಾಯ್ದೆ ಇದೆ, ಆದರೆ ಅದು ಜಾರಿಯಾಗದು. ಯಾಕೆ ? ಯಾಕೆ ?

ಶಿಕ್ಷಣ ಎನ್ನುವುದು ಒಂದು ವ್ಯಾಪಾರದ ಸರಕನ್ನಾಗಿ ಮಾರ್ಪಡಿಸಿರುವ ಆಳುವ ಸರ್ಕಾರಗಳು ಸರ್ಕಾರಿ ಶಾಲೆಗಳಿಗೆ ಮೂಲಭೂತವಾದ ಸೌಲಭ್ಯವನ್ನು ಒದಗಿಸದೆ, ಜನರು ಅನಿವಾರ್ಯವಾಗಿ ಖಾಸಗಿ ಶಾಲೆಗಳತ್ತ ಮುಖ ಮಾಡುವಂತೆ ಮಾಡಿವೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ಶಾಲಾ ಸಂಸ್ಥೆಗಳು ವಿಪರೀತವಾದ ಶುಲ್ಕದ ಜೊತೆಗೆ ಡೋನೇಷನ್ ಹಾವಳಿಯು ವ್ಯಾಪಕಗೊಂಡಿದೆ.

ಈ ಹಿನ್ನೆಲೆಯಲ್ಲಿ ನಿಯಂತ್ರಣವಿಲ್ಲದ ಶುಲ್ಕ ಹೆಚ್ಚಳ ಮತ್ತು ಡೊನೇಷನ್ ಹಾವಳಿ ನಿಲ್ಲಿಸಬೇಕು, ಈಗಿರುವ ಶಿಕ್ಷಣ ಕಾಯ್ದೆಯ ಅನುಸಾರ ಎಲ್ಲಾ ಖಾಸಗಿ ಶಾಲೆಗಳಲ್ಲಿ ಪೋಷಕರ ಸಮಿತಿ ರಚಿಸಲು ಕ್ರಮವಹಿಸಬೇಕು, ಕಾನೂನಿನ ಪ್ರಕಾರ ಮೂಲಭೂತ ಸೌಲಭ್ಯಗಳಿಲ್ಲದ ಶಾಲೆಗಳನ್ನು ರದ್ದುಗೊಳಿಸಬೇಕು, ಸಾಮಾಜಿಕ ನ್ಯಾಯದ ಅನುಸಾರ ಎಲ್ಲಾ ಖಾಸಗಿ ಶಾಲೆಗಳಲ್ಲೂ ಎಲ್ಲಾ ವಿಭಾಗದ ಮಕ್ಕಳಿಗೂ ಪ್ರವೇಶ ನೀಡಬೇಕು ಮುಂತಾದ ಬೇಡಿಕೆ ಈಡೇರಿಕೆಗಾಗಿ ಸಿಪಿಐ(ಎಂ) ಪಕ್ಷದ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲಾ ಸಮಿತಿಗಳು ಶುಲ್ಕ ಏರಿಕೆ ಮತ್ತು ಡೊನೇಷನ್ ಹಾವಳಿಯನ್ನು ತಡೆಗಟ್ಟಬೇಕೆಂದು ಒತ್ತಾಯಿಸಿ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಕಛೇರಿ ಮುಂಭಾಗ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು. ಸ್ಥಳಕ್ಕೆ ಆಗಮಿಸಿದ ಇಲಾಖೆಯ ಆಯುಕ್ತರು ಶಿಕ್ಷಣ ಇಲಾಖೆಯ ಕಾಯ್ದೆಯಲ್ಲಿ ಈಗಾಗಲೇ ಈ ಅಂಶಗಳಿವೆ. ಅದನ್ನು ಸಮರ್ಪಕವಾಗಿ ಜಾರಿಗೊಳಿಸಬೇಕಿದೆ. ಜಿಲ್ಲಾಧಿಕಾರಿಗಳಿಗೆ ಇದರ ಜವಾಬ್ದಾರಿಯನ್ನು ನೀಡಲಾಗಿದೆ. ಅಂತಹ ಸಮಸ್ಯೆಗಳು ಇದ್ದಲ್ಲಿ ಇಲಾಖೆಯ ಗಮನಕ್ಕೆ ಲಿಖಿತವಾಗಿ ಸಾರ್ವಜನಿಕರು ತಿಳಿಸಬಹುದು ಎಂದು ಈ ಸಂಬಂಧ ಪತ್ರಿಕೆಗಳಲ್ಲೂ ಸಹ ಜಾಹೀರಾತು ನೀಡಲಾಗಿದೆ. ಜಿಲ್ಲೆಗಳಲ್ಲಿ ಶೇ.25 ಕಡುಬಡವರಿಗೆ ಖಾಸಗಿ ಶಾಲೆ ಓದುವವರಿದ್ದರೆ ಸರ್ಕಾರವೇ ಅದರ ಸಂಪೂರ್ಣ ವೆಚ್ಚವನ್ನು ಭರಿಸಲಿದೆ ಎಂದರು. ಜಿಲ್ಲಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆ, ಖಾಸಗಿ ಶಾಲಾ ಸಂಸ್ಥೆಯ ಮುಖ್ಯಸ್ಥರು ಮತ್ತು ಪೋಷಕರ ಸಭೆಯನ್ನು ಶೀಘ್ರದಲ್ಲೇ ನಡೆಸಲಾಗುವುದು ಎಂದು ಭರವಸೆ ನೀಡಿದ ನಂತರ ಹೋರಾಟವನ್ನು ಮುಕ್ತಾಯಗೊಳಿಸಲಾಯಿತು.ಕೆ.ಪ್ರಕಾಶ್, ಮೀನಾಕ್ಷಿ ಸುಂದರಂ, ಚಂದ್ರ ತೇಜಸ್ವಿ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.





ವರದಿ: ವಿನೋದ, ಶ್ರೀರಾಮಪುರ.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಸಮುದಾಯದ ಸಂಸ್ಕೃತಿ -ಸಾಮರಸ್ಯ ಉತ್ಸವ



ಗಿಡಕ್ಕೆ ನೀರೆರೆದು ಉತ್ಸವ ಉದ್ಘಾಟಿ
ಮಾತನಾಡುತ್ತಿರುವ
ನಾಡೋಜ ಬರಗೂರು ರಾಮಚಂದ್ರಪ್ಪ

ಸಂಸ್ಕೃತಿ-ಸಾಮರಸ್ಯ ಸಮುದಾಯ ರಂಗಸಂಗಮ ಎಂಬ ತಲೆಬರಹದಡಿಯಲ್ಲಿ 21 ಜನವರಿ 2012 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಸಮುದಾಯದ ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಸ್ವಾಗತ ಕೋರಿದ ಸುರೇಂದ್ರ ರಾವ್ ಇಂದು ಸೌಹಾರ್ದದ ಕಲ್ಪನೆ ಅಪಾಯದ ಅಂಚಿನಲ್ಲಿದೆ. ಶ್ರಮ ಸಂಸ್ಕೃತಿ ವಿಲಾಸಿ ಸಂಸ್ಕೃತಿಯ ನಡುವೆ ಸಂಘರ್ಷ ಯಾವತ್ತೂ ಇದ್ದು, ಇದನ್ನು ಕೊನೆಗಾಣಿಸಲು ವಿಲಾಸಿ ಸಂಸ್ಕೃತಿಯ ಜನ ಬಿಡುವುದಿಲ್ಲ. ಆದಾಗ್ಯೂ, ಜನರನ್ನು ಬೆಸೆಯುವುದು, ಪ್ರೀತಿಯನ್ನು ಹಂಚುವುದು ಸಮುದಾಯದ ಕೆಲಸ. ಸಾಮರಸ್ಯ ಬೆಸೆಯಲೋಸುಗ ಈ 5 ದಿನಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾರಂಭಿಸಿ ಎಲ್ಲರನ್ನೂ ಸ್ವಾಗತಿಸಿದರು.

ಉದ್ಘಾಟಕರಾಗಿ ಆಗಮಿಸಿದ ನಾಡೋಜ ಪ್ರೊ ಬರಗೂರು ರಾಮಚಂದ್ರಪ್ಪನವರು, ಕರ್ನಾಟದಲ್ಲಿ ಪಲ್ಲಟ ಸಂಚಲನೆಯನ್ನು ಉಂಟುಮಾಡಿದ ಸಂಘಟನೆ ಸಮುದಾಯ. ರಾಜ್ಯದ ಸ್ಥಿತ್ಯಂತರಗಳು ಸಮುದಾಯದ ಹಿನ್ನಡೆ-ಮುನ್ನಡೆಗೆ ಕಾರಣವಾಗಿದ್ದು, ಸಮುದಾಯ ರಾಜಕೀಯ ಪರಿಭಾಷೆಯನ್ನು ನಾಟಕಕ್ಕೆ ಕೊಟ್ಟಿತು.


ಅಮಾನವೀಯ, ಅಸಾಮಾಜಿಕ, ಅನಾರೋಗ್ಯಕರ ಸನ್ನಿವೇಶವನ್ನು ಮೀರುವ ಸೌಹಾರ್ದತೆ ಪರಂಪರೆಯಾಗಿದ್ದು ಸಂಸ್ಕೃತಿಯ ಭಾವನೆ ನಿರ್ವಚನೆಗೊಳಿಸಬೇಕು. ಸಂಸ್ಕೃತಿ ಕೇವಲ ಭೂತಕಾಲದ್ದಲ್ಲ, ಮೇಲು-ಕೀಳಿಲ್ಲ.

ಜನರ ಜೀವನ ವಿಧಾನ, ಸಾಮಾನ್ಯೀಕೃತ ನಡವಳಿಕೆಗಳು ಸಂಸ್ಕೃತಿಯಾಗಿದ್ದು ಏಕಕಾಲಕ್ಕೆ ಸ್ಥಿರವೂ ಚಲನಶೀಲವೂ ಆಗಿದ್ದು, ಇದಕ್ಕೆ ಒಂದು ಸಿದ್ಧ ಮಾದರಿ ಇಲ್ಲ. ಸ್ವೀಕರಣ ಮತ್ತು ನಿರಾಕರಣ ಮುಖ್ಯ. ಅಮಾನವೀಯವಾದದ್ದನ್ನು ವಿರೋಧಿಸಿ. ಬಹುರೂಪತೆಗಳೇ ಭಾರತೀಯತೆಯಾಗಿದ್ದು ಬಹುರೂಪತೆಗಳನ್ನು ಮನ್ನಿಸಿದರೆ ಕೇವಲ ಸಂಸ್ಕೃತಿಯಾಗುವುದಿಲ್ಲ.

ಧರ್ಮ ಸಂಸ್ಕೃತಿಯ ಭಾಗವೇ ಹೊರತು ಧರ್ಮವೇ ಸಂಸ್ಕೃತಿಯಲ್ಲ. ಧರ್ಮ ಒಂದು ಸಂಸ್ಥೆಯಾಗಿದ್ದು ಬೈಲಾ(ಕಟ್ಟಳೆ) ಇರುತ್ತದೆ. ಧಾರ್ಮಿಕತೆಗೆ ಇರುವುದಿಲ್ಲ, ಶಾಸ್ತ್ರಬದ್ಧವೂ ಆಗಿರುವುದಿಲ್ಲ.


ಟ್ರೈನ್ ಟು ಪಾಕಿಸ್ತಾನ್ ನಾಟಕದ ಒಂದು ದೃಶ್ಯ


ಬುದ್ಧ ಪ್ರಬುದ್ಧ ನಾಟಕದ ದೃಶ್ಯ


ಕುಲಂ ನಾಟಕದ ದೃಶ್ಯ

ಇಂದು ಧರ್ಮ ಧಾರ್ಮಿಕತೆಯನ್ನು ಬಿಟ್ಟು ಬಂಡವಾಳವನ್ನು ಆಶ್ರಯಿಸಿ ಧರ್ಮೋದ್ಯಮಗಳಾಗಿವೆ. ಸಾಮಾಜಿಕ ಸಮಸ್ಯೆಗಳ ಸ್ವರೂಪಕ್ಕೆ ತಕ್ಕಂತೆ ಹೋರಾಟದ ಸ್ವರೂಪ ಬದಲಾಗಬೇಕಿದೆ. ಪುರಾಣಗಳು ಬದುಕಿನ ರೂಪಕಗಳಾಗಿದ್ದು ಚರಿತ್ರೆ-ಪುರಾಣಗಳ ಪುನರ್ ವ್ಯಾಖ್ಯಾನ ಶಬರಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಆಗಬೇಕಿದೆ. ಗುಡಿ ಇಲ್ಲದ, ಮನುಷ್ಯ ಸಂವೇದನೆಯ, ಅಂತಃಕರಣದ ಸಮಾಜಕ್ಕಾಗಿ ಜನಮಾನಸ ತಲುಪಿ, ಸಂಸ್ಕೃತಿಯ ಅಪವ್ಯಾಖ್ಯಾನ ತಪ್ಪಿಸಿ ಸಾಮರಸ್ಯ ಉಳಿಸಿ ಬೆಳೆಸಿ ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಜನ ನಾಟ್ಯ ಮಂಚ್‌ನ ಸುಧನ್ವ ದೇಶಪಾಂಡೆ ಮಾತನಾಡಿದರು. ಜೈಪುರದಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಬರಹಗಾರರ ಸಮ್ಮೇಳನಕ್ಕೆ ಸಲ್ಮಾನ್ ರಶ್ದಿ ಬರುತ್ತಾರೋ ಇಲ್ಲವೋ ಎಂಬ ಪರಿಸ್ಥಿತಿ ಇದೆ. ಭಾರತೀಯ ಸಂಸ್ಕೃತಿಯನ್ನು ಆಳವಾಗಿ ಅಭ್ಯಸಿಸಿದ್ದ ಅದರ ಆಧಾರದ ಮೇಲೆ ತನ್ನ ಕಲಾಕೃತಿಗಳನ್ನು ರಚಿಸಿದ ಎಂ.ಎಫ್.ಹುಸೇನ್ ಕೊನೆಗಾಲದಲ್ಲಿ ಭಾರತದ ಹೊರಗೆ ಜೀವನ ಕಳೆಯುವಂತೆ ಮಾಡಲಾಯಿತು. ಅವರ ಮನೆ ಮತ್ತು ಕಲಾಕೃತಿಗಳ ಮೇಲೆ ಮತ್ತೆ ಮತ್ತೆ ಧಾಳಿ ನಡೆಯಿತು...... ಹಬೀಬ್ ತನ್ವೀರ್ ಅವರ ಖ್ಯಾತ 'ಪೊಂಕ ಪಂಡಿತ್' ಬೀದಿ ನಾಟಕದ ಮೇಲೆ ಧಾಳಿ ನಡೆಯಿತು. ದೆಹಲಿ ವಿಶ್ವವಿದ್ಯಾಲಯದಲ್ಲಿ ಎ.ಕೆ.ರಾಮಾನುಜನ್ ಅವರ ಮುನ್ನೂರು ಬಗೆಯ ರಾಮಾಯಣಗಳ ಕುರಿತ ಪ್ರಬಂಧವನ್ನು ಪಠ್ಯದಿಂದ ಕೈಬಿಡಲಾಯಿತು.

ಬಾಬರಿ ಮಸೀದಿಯ ನಾಶದ ನಂತರ ಇಂತಹ ದಾಳಿಗಳು ತೀವ್ರಗೊಂಡಿವೆ. ಮಾಧ್ಯಮಗಳಲ್ಲಿ ಇದೆಲ್ಲಾ ಬ್ರೇಕಿಂಗ್ ನ್ಯೂಸ್ ಆಗುವುದಿಲ್ಲ. ಆದರೆ ಇದು ಸಣ್ಣ ವಿಷಯ ಅಲ್ಲ. ಬಹಳ ದೊಡ್ಡ ವಿಷಯ...... 1906ರಲ್ಲಿ ಬಾಲಗಂಗಾಧರ ತಿಲಕರ ಸಂಪಾದಕತ್ವದ 'ಕೇಸರಿ'ಯಲ್ಲಿ ಪ್ರಕಟವಾದ ಸಂಪಾದಕೀಯದ ವಿರುದ್ಧ ಬ್ರಿಟೀಷ್ ಸರ್ಕಾರ ಕ್ರಮಕೈಗೊಂಡಾಗ ಮುಂಬೈನ ಕಾರ್ಮಿಕ ವರ್ಗ ಸಂಪಾದಕೀಯದ ಪರವಾಗಿ ಬೃಹತ್ ಮುಷ್ಕರ ಸಂಘಟಿಸಿತು. ಈ ಹೋರಾಟದಲ್ಲಿ 13 ಜನ ಕಾರ್ಮಿಕರು


ಬೀದಿ ನಾಟಕ 'ಧನ್ವಂತರಿಯ ಚಿಕಿತ್ಸೆ'


ಹೈದ್ರಾಬಾದ ಕರ್ನಾಟಕದ ತತ್ವಪದ ಗಾಯನ

ಪ್ರಾಣ ಕಳೆದು ಕೊಂಡರು. ಈ ರಾಜಕೀಯ ಹೋರಾಟದ ಮಹತ್ವವನ್ನು ಅಂದೆ ಲೆನಿನ್ ಸಹ ಗುರುತಿಸಿದ್ದರು. ಈ ಚಾರಿತ್ರಿಕ ಹೋರಾಟದಲ್ಲಿ ನಮ್ಮ ಇಂದಿನ ಪರಿಸ್ಥಿತಿಗೆ ಮಹತ್ವದ ಸಂದೇಶವಿದೆ. ಎಂದು ಸುದನ್ವ ದೇಶಪಾಂಡೆ ಹೇಳಿದರು

ಸಾಂಸ್ಕೃತಿಕ ಸಾಮರಸ್ಯ ಈ ಕ್ಷಣದ ಅಗತ್ಯವಾಗಿದ್ದು ಭಾವ ಸಿದ್ಧಿಯನ್ನು ಸಮುದಾಯ ಮಾಡಬೇಕು ಕ್ರಿಯಾಸಿದ್ಧಿಯನ್ನು ದುಡಿವ ವರ್ಗ ಮಾಡುತ್ತದೆ. ಜನ ತಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳುವುದರ ಮೂಲಕ ವಾಸ್ತವ ಬದುಕನ್ನು ಬದಲಿಸಿಕೊಳ್ಳಬಹುದು. ವಿಚಾರಶಕ್ತಿ ಬಳಸಿ ವೈಚಾರಿಕವಾಗಿ ಬದಲಾಗಿ. ನಮ್ಮ ಬದುಕನ್ನು ನಾವೇ ಬದುಕುವಷ್ಟು, ನಾವೇ ನಿರೂಪಿಸಿಕೊಳ್ಳುವಷ್ಟು ಹಠಮಾರಿತನ ಬೆಳೆಸಿಕೊಳ್ಳಬೇಕು. ಆ ವಾಂಛೆ, ಆ ಹಠಮಾರಿತನವನ್ನು ಸಮುದಾಯ ಬೆಳೆಸಬೇಕು. ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆರ್.ಕೆ.ಹುಡುಗಿಯವರು ಹೇಳಿದರು.

ವರದಿ : **ಛಾಯಾ ಐ.ಕೆ.**

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and Printed at: **Kriya Prakashana**, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor: **S.Y.GURUSHANTH**